# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 16 ಶನಿವಾರ 2023

ಸಂಪುಟ: 44 | ಸಂಚಿಕೆ: 152 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ಮೈಸೂರಿಂದ ಮುರುಡೇಶ್ವರಕ್ಕೆ ಇಂದಿನಿಂದ ರೈಲು ಸೇವೆ

### ಸೆಪ್ಟೆಂಬರ್ 26ರಿಂದ ಮೈಸೂರು–ಧಾರವಾಡ ರೈಲು ಬೆಳಗಾವಿಗೆ ವಿಸ್ತರಣೆ





ಪ್ರತಾಪ್ ಸಿಂಹ


ಮೈಸೂರು, ಸೆ.15(ಎಸ್‌ಬಿಡಿ)– ಬೆಂಗಳೂರು – ಮೈಸೂರು– ಮಂಗಳೂರು ಮಾರ್ಗದ ರೈಲು ಸಂಚಾರವನ್ನು ಮುರುಡೇಶ್ವರಕ್ಕೆ ವಿಸ್ತರಿಸಲಾಗಿದ್ದು, ಶನಿವಾರದಿಂದಲೇ ಈ ಸೇವೆ ಆರಂಭವಾಗಲಿದೆ. ಬೆಂಗಳೂರು ಸರ್ ಎಂ.ವಿಶ್ವೇಶ್ವರಯ್ಯ ನಿಲ್ದಾಣದಿಂದ ಪ್ರತಿದಿನ ರಾತ್ರಿ 8.15ಕ್ಕೆ ಹೊರಡಲಿರುವ ರೈಲು(16585), ಮೈಸೂರು, ಮಂಗಳೂರು ಜಂಕ್ಷನ್, ಮಂಗಳೂರು ಸೆಂಟ್ರಲ್ ಮೂಲಕ ಮರುದಿನ ಮಧ್ಯಾಹ್ನ 1.20ಕ್ಕೆ ಮುರುಡೇಶ್ವರ ತಲುಪಲಿದೆ. ಹಾಗೆಯೇ ಮುರುಡೇಶ್ವರದಿಂದ ಮಧ್ಯಾಹ್ನ 1.55ಕ್ಕೆ ಹೊರಡುವ ರೈಲು(16586) ಬೆಂಗಳೂರಿಗೆ ಮರುದಿನ ಬೆಳಗ್ಗೆ 7.15ಕ್ಕೆ ತಲುಪಲಿದೆ. ಮೈಸೂರು–ಧಾರವಾಡ ಎಕ್ಸ್‌ಪ್ರೆಸ್ ರೈಲು(17301) ಸಂಚಾರವನ್ನು ಬೆಳಗಾವಿಗೆ ವಿಸ್ತರಿಸಲಾಗಿದ್ದು, ಈ ಸೇವೆ ಸೆ.26ರಿಂದ ಆರಂಭವಾಗಲಿದೆ. ಇದರಿಂದ ಉತ್ತರ ಕರ್ನಾಟಕ ಭಾಗಕ್ಕೆ ಸಂಚರಿಸುವವರಿಗೆ ತುಂಬಾ ಅನುಕೂಲವಾಗಲಿದೆ.

ರೈಲು ಮಾರ್ಗ ವಿಸ್ತರಣೆ ಬಗ್ಗೆ ಪ್ರತಿಕ್ರಿಯಿಸಿದ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಕರಾವಳಿ, ಉಡುಪಿ, ಕುಂದಾಪುರ ಸೇರಿದಂತೆ ಆ ಭಾಗದ ದೇವಾಲಯಗಳಿಗೆ ಹೋಗುವವರ ಅನುಕೂಲಕ್ಕಾಗಿ ಮಂಗಳೂರು ರೈಲು ಸಂಚಾರವನ್ನು ಮುರುಡೇಶ್ವರಕ್ಕೆ ವಿಸ್ತರಿಸುವಂತೆ ಒತ್ತಾಯವಿತ್ತು. ಈ ಹಿನ್ನೆಲೆಯಲ್ಲಿ ನಮ್ಮ ಮನವಿಗೆ ಸ್ಪಂದಿಸಿ ರೈಲು ಸಂಚಾರ ವಿಸ್ತರಿಸಿದ ರೈಲ್ವೆ ಸಚಿವರು ಹಾಗೂ ಪ್ರಧಾನಿ ಮೋದಿ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

### ತಮಿಳುನಾಡಿಗೆ ನೀರು ಹರಿಸುವುದನ್ನು ವಿರೋಧಿಸಿ ಗಣೇಶ ಹಬ್ಬದ ನಂತರ

# ಬಿಜೆಪಿಯಿಂದ ಕಾವೇರಿ ರಕ್ಷಣಾ ಯಾತ್ರೆ

### ಕಾವೇರಿ ಕೊಳ್ಳದ ಬಿಜೆಪಿ ಮುಖಂಡರು, ಜನಪ್ರತಿನಿಧಿಗಳೊಂದಿಗೆ ಸಭೆ ನಂತರ ಮಾಜಿ ಸಿಎಂಗಳಾದ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಘೋಷಣೆ



ಬೆಂಗಳೂರು, ಸೆ.15(ಕೆಎಂಶಿ)–ರಾಜ್ಯ ಸರ್ಕಾರ ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿರುವುದನ್ನು ವಿರೋಧಿಸಿ ಕಾವೇರಿ ಜಲಾನಯನ ಪ್ರದೇಶದ ತಾಲೂಕುಗಳಲ್ಲಿ ಕಾವೇರಿ ರಕ್ಷಣಾ ಯಾತ್ರೆ ಕೈಗೊಳ್ಳಲಾಗುವುದು ಎಂದು ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಕಾವೇರಿ ಕೊಳ್ಳದ ಬಿಜೆಪಿ ಮುಖಂಡರು ಮತ್ತು ಜನಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣೇಶ ಹಬ್ಬ ಮುಗಿಯುತ್ತಿದ್ದಂತೆ ಕೋಲಾರದ ಕುರುಡು ಮಲೆ ಗಣಪತಿ ದೇವಾಲಯದಿಂದ ಯಾತ್ರೆ ಆರಂಭಿಸುವುದಾಗಿ ಪ್ರಕಟಿಸಿದರು.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರನ್ನು ಓಲೈಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಮ್ಮ ರಾಜ್ಯದ ರೈತರ ಹಿತ ಬಲಿಕೊಟ್ಟಿದ್ದಾರೆ.

ಕಾವೇರಿ ನೀರು ನಿಯಂತ್ರಣ ಸಮಿತಿ ಮುಂದೆ ಸಮರ್ಪಕ ವಾದ ಮಂಡಿಸದೆ, ತಮಿಳುನಾಡಿನ ಮುಖ್ಯಮಂತ್ರಿಯಾಗಿ, ಉಪ ಮುಖ್ಯಮಂತ್ರಿಯಾಗಿ ನಮ್ಮವರು ವರ್ತಿಸಿದ್ದಾರೆ. ತಮಿಳುನಾಡಿಗೆ ಎಷ್ಟು ನೀರು ಹರಿಸಬೇಕೋ ಅಷ್ಟು ಹರಿಸಿ ನಂತರ ಬರ ಘೋಷಣೆ ಮಾಡಿದ್ದಾರೆ. ಘೋಷಣೆಯ ನಂತರ ಎಲ್ಲಾ ತಾಲೂಕಿನ ರೈತರಿಗೂ ಪರಿಹಾರ ದೊರೆಯಲಿದೆ. ಆದರೆ, ಕಾವೇರಿ ಕೊಳ್ಳದ ರೈತರಿಗೆ ಬರಪರಿಹಾರದ ಜತೆಗೆ ಹೆಚ್ಚುವರಿ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ತಮಿಳುನಾಡು ಎರಡನೇ ಬೆಳೆ ಬೆಳೆ



ಯುತ್ತಿದೆ. ಸರ್ಕಾರ ಸಿಡಬ್ಲ್ಯೂಆರ್‌ಸಿ, ಸಿಡಬ್ಲ್ಯೂಎಂಎ ಮುಂದೆ ಸರಿಯಾಗಿ ಪ್ರತಿಪಾದಿಸಲಿಲ್ಲ. ಸರ್ಕಾರ ರಾಜ್ಯದ ಹಿತ ಬಲಿ ಕೊಟ್ಟು ತಮಿಳುನಾಡಿನ ಎರಡನೇ ಬೆಳೆಗೆ ನೀರು ಬಿಟ್ಟಿದೆ. ಇದರ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಸರಿಯಾಗಿ ಮನವರಿಕೆ ಮಾಡಿಕೊಡಲಿಲ್ಲ. ನೀರು ಬಿಟ್ಟು ನಮಗೆ ಸಮಸ್ಯೆ ಆಗಿದೆ ಎಂದು ರಾಜ್ಯ ಸರ್ಕಾರ ಈಗ ರಕ್ಷಣಾತ್ಮಕವಾಗಿ ನಡೆದುಕೊಳ್ಳುತ್ತಿದೆ. ಈ ಸರ್ಕಾರ ರಾಜ್ಯದ ನೀರಿನ ಹಕ್ಕು ರಕ್ಷಣೆ ಮಾಡಿಲ್ಲ. ನೀರಿನ ಹಕ್ಕು ರಕ್ಷಣೆ ಮಾಡುವ ಬದ್ಧತೆ, ಯೋಗ್ಯತೆ ಈ ಸರ್ಕಾರಕ್ಕೆ ಇಲ್ಲ ಎಂದು ವಾಗ್ದಾಳಿ ನಡೆಸಿದರು. ಕಾವೇರಿ ನೀರಿನ ವಿಚಾರದಲ್ಲಿ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್ ಮುಂದೆ ರಾಜ್ಯದ ವಾಸ್ತವಾಂಶ ಇಡಲಿ. ಸಿಡಬ್ಲ್ಯೂಆರ್‌ಸಿ ಮುಂದೆಯೂ ಸಮರ್ಥ ವಾದ ಮಾಡಲಿ, ಜಲ ಸಂಪನ್ಮೂಲ ಸಚಿವರಾದ ಡಿಕೆ ಶಿವಕುಮಾರ ಪರ ಅವರ ವೈಯಕ್ತಿಕ ಕೇಸ್‌ಗಳಿಗೆ ಒಳ್ಳೊಳ್ಳೆಯ ವಕೀಲರು ಇದ್ದಾರೆ. ಹೀಗಾಗಿ ಅವರ ಕೇಸ್‌ಗಳಲ್ಲಿ ಯಶಸ್ಸು ಸಿಗುತ್ತಿದೆ. ಅದೇ ರೀತಿ ಕಾವೇರಿ ವಿಚಾರಕ್ಕೂ ಒಳ್ಳೊಳ್ಳೆಯ ವಕೀಲರನ್ನು ನಿಯೋಜಿಸಲಿ ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರ ಕಾವೇರಿ ಜಲಾನಯನ ಪ್ರದೇಶದ ರೈತರ ಬೆಳೆಗಳಿಗೆ ಸೂಕ್ತ ಸಮಯದಲ್ಲಿ ನೀರು ಬಿಡದೇ ಇರುವುದರಿಂದ ರೈತರ ಬೆಳೆ ಒಣಗಿದ್ದು, ಕಾವೇರಿ ಕೊಳ್ಳದ ರೈತರಿಗೆ ಪ್ರತೀ ಎಕರೆಗೆ 25 ಸಾವಿರ ರೂ. ಪರಿಹಾರ ಕೊಡುವಂತೆ ನಾವು ಸರ್ಕಾರಕ್ಕೆ ಆಗ್ರಹಿಸುತ್ತಿದ್ದೇವೆ. ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಬಿಡಬಾರದು. ನೀರು ಬಿಟ್ಟರೆ ಬಿಜೆಪಿಯಿಂದ ಕಾವೇರಿ ಜಲಾನಯನ ಪ್ರದೇಶಗಳ ಎಲ್ಲ ತಾಲೂಕುಗಳಲ್ಲೂ ಕಾವೇರಿ ಜನ ಜಾಗೃತಿ ಯಾತ್ರೆ ಮಾಡಲು ನಿರ್ಧರಿಸಲಾಗಿದೆ. ಪಾದಯಾತ್ರೆ, ಸತ್ಯಾಗ್ರಹ, ಪ್ರತಿಭಟನೆ ರೂಪದಲ್ಲಿ ಹೋರಾಟ ನಡೆಸಲಾಗುವುದು. ಸೆಪ್ಟೆಂಬರ್ 21ರಂದು ಈ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿದ್ದು,

▶ 7ನೇ ಪುಟಕ್ಕೆ



### ಒಕ್ಕಲಿಗರಷ್ಟೇ ಅಲ್ಲ ಲಿಂಗಾಯಿತ, ಎಸ್ಸಿ–ಎಸ್ಟಿ, ಅಲ್ಪಸಂಖ್ಯಾತರನ್ನೂ

## ಉಪ ಮುಖ್ಯಮಂತ್ರಿ ಮಾಡಿ

● ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿಕೆ; ಕಾಂಗ್ರೆಸ್‌ನಲ್ಲಿ ಸಂಚಲನ ● ಸಚಿವ ಸಹೋದ್ಯೋಗಿಗಳಲ್ಲೇ ಅಪಸ್ವರ; ಆದರೂ ವರಿಷ್ಠರಿಗೆ ಪತ್ರ ಬರೆಯಲು ರಾಜಣ್ಣ ನಿರ್ಧಾರ

ಬೆಂಗಳೂರು, ಸೆ.15(ಕೆಎಂಶಿ)–ಒಕ್ಕಲಿಗರಿಗಷ್ಟೇ ಅಲ್ಲ, ಉಳಿದ ಸಮುದಾಯದವರಿಗೂ ಸಂಪುಟದಲ್ಲಿ ಉಪ ಮುಖ್ಯಮಂತ್ರಿ ಸ್ಥಾನ ಕಲ್ಪಿಸಬೇಕು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿಕೆ ನೀಡುವ ಮೂಲಕ ಪಕ್ಷ ಮತ್ತು ಸರ್ಕಾರದಲ್ಲಿ ಸಂಚಲನ ಮೂಡಿಸಿದ್ದಾರೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿರುವ ಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿ ಆಗಿರುವಾಗಲೇ ಮತ್ತೆ ಮೂವರಿಗೆ ಆ ಸ್ಥಾನ ನೀಡುವಂತೆ ವರಿಷ್ಠರನ್ನು ಒತ್ತಾಯಿಸಿದ್ದಾರೆ.

ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲಿಂಗಾಯಿತ, ಎಸ್ಸಿ–ಎಸ್ಟಿ, ಹಾಗೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸಿದ್ದರಾಮಯ್ಯ ಸಂಪುಟದಲ್ಲಿ



ಅವಕಾಶ ಮಾಡಿಕೊಡಬೇಕು ಎಂದು ದೆಹಲಿ ನಾಯಕರಿಗೆ ಪತ್ರ ಬರೆಯುವುದಾಗಿ ತಿಳಿಸಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯನ್ನು ಕಾಂಗ್ರೆಸ್ ಗಂಭೀರವಾಗಿ ತೆಗೆದುಕೊಂಡಿದೆ. ಚುನಾವಣೆಗೂ ಮುನ್ನ ಈ ಸಮುದಾಯಗಳಿಗೆ ಸರ್ಕಾರದಲ್ಲಿ ಉನ್ನತ ಸ್ಥಾನ

▶ 7ನೇ ಪುಟಕ್ಕೆ

## ವರದಕ್ಷಿಣೆ ಕಿರುಕುಳ: ತಾಯಿ, ಇಬ್ಬರು ಮಕ್ಕಳ ಹತ್ಯೆ

### ಪತಿ, ಅತ್ತೆ, ಮಾವ ಬಂಧನ

ಗುಂಡ್ಲುಪೇಟೆ, ಸೆ. 15– ವರದಕ್ಷಿಣೆ ಕಿರುಕುಳ ನೀಡಿ ತಾಯಿ ಹಾಗೂ ಇಬ್ಬರು ಮಕ್ಕಳನ್ನು ಹತ್ಯೆ ಮಾಡಿದ ಆರೋಪದ ಮೇರೆಗೆ ಗುಂಡ್ಲುಪೇಟೆ ತಾಲೂಕು ತೆರಕಣಾಂಬಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ಮೇಘಾ(33), ಈಕೆಯ ಪುತ್ರಿಯರಾದ ಪುನ್ವಿತ(10) ಮತ್ತು ಮನ್ವಿತ(6) ಶವಗಳು ಗುರುವಾರ ರಾತ್ರಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಇವರನ್ನು ಮೇಘಾ ಪತಿ ಧನಂಜಯ ಅಲಿಯಾಸ್ ಅಭಿ, ಆತನ ತಂದೆ ಮಲ್ಲಿಕಾರ್ಜುನ, ತಾಯಿ ನಿರ್ಮಲಮ್ಮ, ಮೈದುನ ಪುಟ್ಟು ಅವರುಗಳು ಹತ್ಯೆ ಮಾಡಿದ್ದಾರೆ ಎಂದು ಮೇಘಾ ತಂದೆ ಮಹೇಶ್ ನೀಡಿದ ದೂರಿನನ್ವಯ ಪೊಲೀಸರು ಧನಂಜಯ, ಮಲ್ಲಿಕಾರ್ಜುನ ಮತ್ತು ನಿರ್ಮಲಮ್ಮ ಅವರನ್ನು ಬಂಧಿಸಿದ್ದಾರೆ. ಬೊಮ್ಮನಹಳ್ಳಿ ಗ್ರಾಮದ ಧನಂಜಯ ಮತ್ತು ಮೇಘಾ ವಿವಾಹ 11 ವರ್ಷದ ಹಿಂದೆ ನಡೆದಿತ್ತು.



ಅಂದಿನಿಂದಲೂ ಧನಂಜಯನ ಕುಟುಂಬದವರು ಮೇಘಾ ಅವರಿಗೆ ಚಿತ್ರಹಿಂಸೆ ನೀಡುತ್ತಿದ್ದರು. ಮಗಳು ಗಂಡನ ಮನೆಯಲ್ಲಿ ಗೌರವದಿಂದ ಜೀವನ ಸಾಗಿಸಬೇಕೆಂಬ ಉದ್ದೇಶದಿಂದ ನಾವು ಆಕೆಗೆ ಬುದ್ಧಿವಾದ ಹೇಳಿ ಗಂಡನ ಮನೆ ಯಲ್ಲೇ ಇರುವಂತೆ ಮನವೊಲಿಸಿ ಕಳುಹಿಸುತ್ತಿದ್ದೆವು. ಆದರೆ, ಈಗ ಇವರೆಲ್ಲಾ ಸೇರಿ ನನ್ನ ಮಗಳು ಮತ್ತು ಮೊಮ್ಮಕ್ಕಳನ್ನು ಕೊಲೆ ಮಾಡಿದ್ದಾರೆ ಎಂದು ಮೇಘಾ ತಂದೆ ಮಹೇಶ್ ಆರೋಪಿಸಿದ್ದಾರೆ.

ಇಂದು ಬೆಳಗ್ಗೆ ಶವಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಕೊಂಡೊಯ್ಯಲು ಬಿಡದೆ ಮೇಘಾ ಸಂಬಂಧಿಕರು ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಜಿಲ್ಲಾ ಎಸ್ಪಿ ಪದ್ಮಿನಿ ಸಾಹು, ಅಡಿಷನಲ್ ಎಸ್ಪಿ ಉದೇಶ್, ಡಿವೈಎಸ್ಪಿ ಲಕ್ಷ್ಮಯ್ಯ, ಬೇಗೂರು ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ವನರಾಜು ಮುಂತಾದವರು ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಾನಿರತರ ಮನವೊಲಿಸಿ ಮಧ್ಯಾಹ್ನದ ವೇಳೆಗೆ ಶವಗಳನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಗೆ ರವಾನಿಸಿದರು.



# ಅಂಬಾರಿ ಆನೆ ಅಭಿಮನ್ಯು ಭಾರ ಹೊರುವ ತಾಲೀಮು ಆರಂಭ

● 600 ಕೆಜಿ ಭಾರ ಹೊತ್ತು 1.05 ಗಂಟೆಯಲ್ಲೇ ಬನ್ನಿಮಂಟಪ ತಲುಪಿದ ಕ್ಯಾಪ್ಟನ್
● ಸಾಲುಗಟ್ಟಿ ಸಾಗಿದ ಗಜಪಡೆಯ ತಾಲೀಮು ಕಣ್ತುಂಬಿಕೊಂಡ ಜನ



### ಜಂಬೂ ಸವಾರಿಗೆ ಮುಹೂರ್ತ ನಿಗದಿ

### ಅ.24ರ ಸಂಜೆ 4.40ರಿಂದ 5ರೊಳಗೆ

### ಮಧ್ಯಾಹ್ನ 1.46ರಿಂದ 2.08ರೊಳಗೆ ನಂದಿ ಧ್ವಜಕ್ಕೆ ಪೂಜೆ

ಮೈಸೂರು,ಸೆ.15(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿಗೆ ಮುಹೂರ್ತ ನಿಗದಿ ಮಾಡಲಾಗಿದೆ. ಅ.24ರಂದು ಸಂಜೆ 4.40ರಿಂದ 5ಗಂಟೆಯೊಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಚಿನ್ನದ ಅಂಬಾರಿಯಲ್ಲಿ ವಿಜೃಂಭಿಸಲಿರುವ ನಾಡದೇವಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿಗೆ ಪುಷ್ಪಾರ್ಚನೆಗೆ ಸಮಯ ನಿಗಧಿ ಮಾಡಲಾಗಿದೆ.

ದಸರಾ ಮಹೋತ್ಸವವನ್ನು ಈ ಬಾರಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದ್ದು, ಅ.15ರಿಂದ ನವರಾತ್ರಿ ಆರಂಭವಾಗಲಿದ್ದು, ಅಂದು ಬೆಳಗ್ಗೆ 10.15ರಿಂದ 10.36ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಚಾಮುಂಡಿಬೆಟ್ಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉಪಸ್ಥಿತಿಯಲ್ಲಿ ಚಾಮುಂಡೇಶ್ವರಿಯ ಉತ್ಸವಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಸಂಗೀತ ನಿರ್ದೇಶಕ ಹಂಸಲೇಖ ಉದ್ಘಾಟಿಸಲಿದ್ದಾರೆ. ಅಂದು ಸಂಜೆ 6.30ರಿಂದ 7.15ರವರೆಗೆ ಮೇಷ ಲಗ್ನದಲ್ಲಿ ಅರಮನೆ ಪೂಜೆ ಜರುಗಲಿದೆ. ಬಳಿಕ ಪಂಚಾಂಗದಂತೆ ಅ.16ರಂದು

▶ 7ನೇ ಪುಟಕ್ಕೆ



ಮೈಸೂರು,ಸೆ.15(ಎಂಟಿವೈ)–ದಸರಾ ಮಹೋತ್ಸವದ ಗಜಪಡೆ ನಾಯಕ, ಕೂಂಬಿಂಗ್ ಸ್ಟಾರ್ ಅಭಿಮನ್ಯು ಭಾರ ಹೊರುವ ತಾಲೀಮು ಆರಂಭವಾಗಿದ್ದು, ಮೊದಲ ದಿನ 600 ಕೆಜಿ ಭಾರ ಹೊತ್ತು ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನವನ್ನು 1.05 ಗಂಟೆ ಯಲ್ಲೇ ತಲುಪಿ ಸೈ ಎನಿಸಿಕೊಂಡಿತು.

ನಾಡಹಬ್ಬ ದಸರಾ ಮಹೋತ್ಸವಕ್ಕೆ 30 ದಿನಮಾತ್ರವಿದ್ದು, ದಸರಾ ಜಂಬೂಸವಾರಿ ಯಲ್ಲಿ ಗಜಪಡೆ ಸಮರ್ಥವಾಗಿ ಸಾಗಲು ಪ್ರಮುಖ ಹಂತದ ತಾಲೀಮು ಆರಂಭಿಸಲಾಗಿದೆ. ಸೆ.1ರಂದು ಗಜಪಯಣದ ಮೂಲಕ ವಿವಿಧ ಕ್ಯಾಂಪ್‌ಗಳಿಂದ ಆಗಮಿಸಿದ್ದ ಮೊದಲ ತಂಡದ 9 ಆನೆಗಳು, ಮೊದಲು ಅಶೋಕಪುರಂನಲ್ಲಿರುವ ಅರಣ್ಯ ಭವನಕ್ಕೆ ಆಗಮಿಸಿ, ಸೆ.5ರಂದು ಅರ್ಜುನನ ಹೊರತುಪಡಿಸಿ ಉಳಿದವು ಅರಮನೆ ಪ್ರವೇಶಿಸಿದ್ದವು. ಸೆ.7ರಿಂದ ಜಂಬೂ ಸವಾರಿ ಮಾರ್ಗದಲ್ಲಿ ತಾಲೀಮು ಆರಂಭಿಸಿದ್ದ ಗಜಪಡೆಗೆ ಇಂದಿನಿಂದ

▶ 7ನೇ ಪುಟಕ್ಕೆ

## ಸೆ.25ರಂದು ಗಜಪಡೆ ಎರಡನೇ ತಂಡ

● ಮೂರು ಹೊಸ ಆನೆ ಸೇರಿದಂತೆ 5 ಆನೆಗಳ ತಂಡ ● ಸೆ.26ರಿಂದ 14 ಆನೆಗಳು ತಾಲೀಮಿನಲ್ಲಿ ಭಾಗಿ

ಮೈಸೂರು,ಸೆ.15(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ 5 ಆನೆಗಳ ಎರಡನೇ ತಂಡ ಸೆ.25ರಂದು ಮೈಸೂರು ಅರಮನೆ ಆವರಣ ತಲುಪಲಿವೆ ಎಂದು ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ(ಸಿಎಫ್) ಡಾ.ಮಾಲತಿ ಪ್ರಿಯಾ ತಿಳಿಸಿದ್ದಾರೆ. ಅರಮನೆ ಆವರಣದಲ್ಲಿ ಅಂಬಾರಿ ಆನೆ ಅಭಿಮನ್ಯುವಿಗೆ ಭಾರ ಹೊರುವ ತಾಲೀಮಿಗೂ ಮುನ್ನ ಪೂಜೆ ಸಲ್ಲಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈಗಾಗಲೇ ಮೊದಲ ತಂಡದ 9 ಆನೆಗಳು ತಾಲೀಮಿನಲ್ಲಿ ಪಾಲ್ಗೊಂಡಿವೆ. ಜಂಬೂ ಸವಾರಿಯಲ್ಲಿ ಅಂಬಾರಿ ಹೊರುವ ಅಭಿಮನ್ಯುವಿಗೆ ಇಂದಿನಿಂದ ಭಾರ ಹೊರುವ ತಾಲೀಮು ಆರಂಭಿಸಿದ್ದೇವೆ. ಮೊದಲ ದಿನವಾದ ಇಂದು ಗಾದಿ, ನಮ್ದಾ, ಮರಳು ಮೂಟೆ ಸೇರಿದಂತೆ 600 ಕೆಜಿ ಭಾರ ಹೊರಿಸಲಾಗಿದೆ. ಹಂತ ಹಂತವಾಗಿ ಭಾರ ಹೆಚ್ಚಿಸುತ್ತಾ ತಾಲೀಮು ಮುಂದುವರೆಸಲಾಗುತ್ತದೆ.

▶ 7ನೇ ಪುಟಕ್ಕೆ

ಮೈಸೂರು ಮಿತ್ರ

ಶನಿವಾರ 16 ಸೆಪ್ಟೆಂಬರ್ 2023

# ಬರದ ನಿವಾರಣೆಗಾಗಿ ಶ್ರೀ ಲಕ್ಷ್ಮಿಕಾಂತ ದೇವಸ್ಥಾನದಲ್ಲಿ ವಿಶೇಷ ಪೂಜೆ



ಮೈಸೂರು, ಸೆ.15(ಬಿಎಲ್‌ಯು)– ರಾಜ್ಯದ ಬರ ನಿವಾರಣೆಗೆ ಪ್ರಾರ್ಥಿಸಿ ಮೈಸೂರು ಹೆಬ್ಬಾಳಿನ ಶ್ರೀ ಲಕ್ಷ್ಮಿಕಾಂತ ದೇವಸ್ಥಾನದಲ್ಲಿ ಶುಕ್ರವಾರ ಲೋಕ ಕಲ್ಯಾಣಾರ್ಥ ಹೋಮ ಹಾಗೂ ವಿಶೇಷ ಪೂಜೆ ನೆರವೇರಿಸಲಾಯಿತು.

ಮೈಸೂರಿನ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠದ ಸ್ವಾಮೀಜಿ ಶ್ರೀ ಸೋಮನಾಥ ಸ್ವಾಮೀಜಿ ಅವರು, ಲಕ್ಷ್ಮಿಕಾಂತ ಹಾಗೂ ಕಾಲಭೈರವೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಅರ್ಚಕ ವೃಂಧ ಲೋಕ ಕಲ್ಯಾಣಾರ್ಥ ಚಂಡಿಕಾ ಹೋಮ ನೆರವೇರಿಸಿತು.

ರಾಜ್ಯ ವರುಣನ ಅಪಕೃಪೆಗೀಡಾಗಿದೆ. ಜನ, ಜಾನುವಾರುಗಳಿಗೆ ಕುಡಿಯುವ ನೀರಿಗೂ ತೊಂದರೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗಿ ಕೆರೆ ಕಟ್ಟೆಗಳು ತುಂಬಲಿ ಎಂದು ಸಂಕಲ್ಪ ಮಾಡಿ ದೇವರಲ್ಲಿ ಪ್ರಾರ್ಥಿಸಿದ್ದೇವೆ ಎಂದು ಶ್ರೀ ಸೋಮನಾಥ ಸ್ವಾಮೀಜಿ ಹೇಳಿದರು.

ವಿಧಾನಪರಿಷತ್ ಮಾಜಿ ಸದಸ್ಯ ಡಿ. ಮಾದೇಗೌಡ, ಮುಖಂಡರಾದ ಗುಂಡಪ್ಪ, ವಿಶ್ವನಾಥ್ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.

## ಮಹಿಳಾ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ

ಮೈಸೂರು, ಸೆ.15(ಬಿಎಲ್‌ಯು)– ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಮಹಿಳಾ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ ನಡೆಯಿತು. ರಾಜ್ಯ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಅವರು ಈ ವೇಳೆ ಧ್ವಜಾರೋಹಣ ನೆರವೇರಿಸಿದರು. ತರುವಾಯ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನದ ಅಂಗವಾಗಿ ಸಂವಿಧಾನದ ಪೀಠಿಕೆಯನ್ನು ವಾಚನ ಮಾಡಲಾಯಿತು.

ಈ ವೇಳೆ ಮಾತನಾಡಿದ ಪುಷ್ಪಾ ಅಮರನಾಥ್, ಪುರುಷರ ಸಂಖ್ಯೆಯಷ್ಟೆ ಮಹಿಳೆಯರು ಇರುವ ಹಿನ್ನೆಲೆಯಲ್ಲಿ ಮಹಿಳೆಯರಿಗೂ ರಾಜಕೀಯ ಮೀಸಲಾತಿ ನೀಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯೆ ಸುಧಾ ಸೇರಿದಂತೆ ಹಲವು ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



## ಎನ್‌ಐಇಯಿಂದ ವಾಕಥಾನ್

ಮೈಸೂರು, ಸೆ. 15– ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜು ಆಶ್ರಯದಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳ ಪರಿಚಯ ಕಾರ್ಯಕ್ರಮ–2023ರ ಅಂಗವಾಗಿ ಸೆ. 16 ರಂದು ಬೆಳಗ್ಗೆ 6 ಗಂಟೆಗೆ ಡೈಮಂಡ್ ಜುಬಿಲಿ ಬ್ಲಾಕ್‌ನಲ್ಲಿ ವಾಕಥಾನ್ ಆಯೋಜಿಸಲಾಗಿದೆ.

ವಾಕಥಾನ್ ಅನ್ನು ಹಿರಿಯ ಅಥ್ಲೀಟ್ ಮತ್ತು ಹಳೆಯ ವಿದ್ಯಾರ್ಥಿ ಕೆ.ಎನ್.ಕೇಶವ ಮೂರ್ತಿ ಚಾಲನೆ ನೀಡಲಿದ್ದಾರೆ. ಪ್ರಾಂಶುಪಾಲ ಡಾ. ರೋಹಿಣಿ ನಾಗಪದ್ಮ, ಉಪ ಪ್ರಾಂಶುಪಾಲ ಡಾ. ಗಣೇಶ್ ಪ್ರಸಾದ್, ಡಾ. ಲಕ್ಷ್ಮೀ ರಂಗನಾಥ್, ಡಾ.ಚಂದ್ರು, ಶ್ರೀಮತಿ ಆರ್.ಕಾವ್ಯ ಮತ್ತು ಎಚ್.ಸಿ.ಸುದಿನ ಉಪಸ್ಥಿತರಿರುವರು.

# ದೇಶದ ಅಭಿವೃದ್ಧಿಗೆ ಸರ್ ಎಂವಿ ಕೊಡುಗೆ ಅಪಾರ

ಮೈಸೂರು, ಸೆ. 15– ವಿಶ್ವೇಶ್ವರಯ್ಯನವರು ನೀರಾವರಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಜನರ ಜೀವನವನ್ನು ಸಮೃದ್ಧವಾಗಿಸುವ ಮಹತ್ವದ ಕಾರ್ಯವನ್ನು ಮಾಡಿದ್ದಾರೆ. ಅವರ ದೂರದೃಷ್ಟಿ, ಚಿಂತನಾಶೀಲತೆ, ಕೆಲಸದ ಬಗೆಗಿನ ಶ್ರದ್ಧೆ, ಹೊಸತನಗಳ ಮೂಲಕ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಕನ್ನಡಿಗ ಎಂದು ಮಾಜಿ ಮೇಯರ್ ಸಂದೇಶ ಸ್ವಾಮಿ ಹೇಳಿದರು.

ನಗರದ ಆಯುರ್ವೇದ ವೃತ್ತ (ಸರ್ ಎಂವಿ)ದಲ್ಲಿ ಜೀವಧಾರ ರಕ್ತ ನಿಧಿ ವತಿಯಿಂದ ಆಯೋಜಿಸಿದ್ದ ಭಾರತ ರತ್ನ ದಿವಾನ್ ಸರ್ ಎಂ.ವಿಶ್ವೇಶ್ವರಯ್ಯ ಜಯಂತಿ ಆಚರಣೆಯಲ್ಲಿ ಶ್ರೀಯುತರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಆನಂತರ ಸಿಹಿ ವಿತರಿಸಿ ಮಾತನಾಡಿದ ಅವರು, ವಿಶ್ವೇಶ್ವರಯ್ಯ ಅವರು ಇಂಜಿನಿಯರಾಗಿ, ದಿವಾನರಾಗಿ ಅದ್ವಿತೀಯ ಕಾರ್ಯ ಮಾಡಿದ್ದಾರೆ. ಕೈಗಾರಿಕೆ, ಕೃಷಿ, ಶಿಕ್ಷಣ, ಭಾಷಾ ವಲಯದಲ್ಲಿ ನಾಡನ್ನು ಸಮೃದ್ಧವಾಗಿಸುವ ನಿಟ್ಟಿನಲ್ಲಿ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಸಾಂಸ್ಕೃತಿಕ ರಾಜಧಾನಿಯಾಗಿ ಮೈಸೂರು ವಿಶ್ವವಿಖ್ಯಾತವಾಗಬೇಕಾದರೆ ಆಧುನಿಕ ಮೈಸೂರು ಸಂಸ್ಥಾನದ ದಿವಾನರಾಗಿದ್ದ ವಿಶ್ವೇಶ್ವರಯ್ಯರವರ ಕೊಡುಗೆ ಅಪಾರ. ಬ್ರಿಟಿಷ್ ಸರ್ಕಾರ 'ಸರ್' ಪದವಿ ನೀಡಿತು. ಭಾರತರತ್ನ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ ಸರ್.ಎಂ.ವಿರವರು. ಅವರ ಸಾಧನೆ, ಸೇವೆ ಇಂದಿನ ಜನಪ್ರತಿನಿಧಿಗಳಿಗೆ ಮಾದರಿಯಾಗಿದೆ. ಪ್ರತಿಯೊಂದು ಕ್ಷೇತ್ರಕ್ಕೂ ವರದಾನವಾಗಿದೆ. ಶಿಕ್ಷಣ, ಕೃಷಿ, ಸಹಕಾರಿ, ನೀರಾವರಿ, ವಾಣಿಜ್ಯ ಕೈಗಾರಿಕೋದ್ಯಮ, ಪ್ರವಾಸೋದ್ಯಮ ಸೇರಿದಂತೆ ಸರ್.ಎಂ.ವಿರವರು ಪ್ರಾತಃ ಸ್ಮರಣಿಯರಾಗಿದ್ದಾರೆ. ಮೈಸೂರು ಭಾಗದಲ್ಲಿ ವ್ಯವಸ್ಥಿತ ಯುಜಿಡಿ ಕಲ್ಪಿಸಿದ್ದೇ ಸರ್. ಎಂ.ವಿ. ಹಾಗಾಗಿ ನವಭಾರತ ನಿರ್ಮಾಣವಾಗಬೇಕಾದರೆ ಮನೆಗೊಬ್ಬ ವಿಶ್ವೇಶ್ವರಯ್ಯ ಹುಟ್ಟಿಬರಬೇಕು ಎಂದು ಆಶಿಸಿದರು.



ನಗರಪಾಲಿಕೆ ಸದಸ್ಯ ಎಂ.ಡಿ. ನಾಗರಾಜ್, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ನಂ. ಶ್ರೀಕಂಠ ಕುಮಾರ್, ಅರ್ಚಕರ ಸಂಘದ ಅಧ್ಯಕ್ಷರಾದ ವಿದ್ವಾನ್ ಕೃಷ್ಣಮೂರ್ತಿ, ಮುರಳೀಧರ್, ಕೇಬಲ್ ವಿಜಿ, ಅಜಯ್ ಶಾಸ್ತ್ರಿ, ಕೆಆರ್‌ಎಸ್ ವಿಜಯ್‌ಕುಮಾರ್, ಸೂರಜ್, ಸದಾಶಿವ್, ಚಂದ್ರು, ಸಂತೋಷ್, ಚಕ್ರಪಾಣಿ, ರಾಜು, ಯೋಗರಾಜ್, ವಿಠಲ, ಸುರೇಶ್‌ರಾವ್ ಹಾಗೂ ಇನ್ನಿತರರು ಭಾಗಿಯಾಗಿದ್ದರು.

# ವಚನಗಳಿಗೆ ಮನುಷ್ಯನ ಒಳಗಣ್ಣು ತೆರೆಸುವ ಶಕ್ತಿಯಿದೆ



ಮೈಸೂರು, ಸೆ. 15– ವಚನಗಳಿಗೆ ಮನುಷ್ಯನ ಒಳಗಣ್ಣು ತೆರೆಸುವ ಶಕ್ತಿಯಿದೆ ಎಂದು ಮೈಸೂರಿನ ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜಿನ ಶೈಕ್ಷಣಿಕ ಅಧಿಕಾರಿ ಮಂಗಳ ಮುದ್ದುಮಾದಪ್ಪ ಹೇಳಿದರು.

ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ನಗರದ ಬೋಗಾದಿಯ ಶಾರದಾನಗರ ರೈಲ್ವೆ ಬಡಾವಣೆಯ ಶರಣು ಕುಟೀರದಲ್ಲಿ ರೂಪ ಕುಮಾರಸ್ವಾಮಿಯವರ ಸಂಪಾದನೆಯ ಇನ್ನರ್ ಐ ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು ಶರಣರ ಅಂತರಂಗದ ಅನುಭಾವ ವಚನಗಳಾಗಿ ಹೊರಹೊಮ್ಮಿರುವುದರಿಂದ ಅವುಗಳನ್ನು ಅಧ್ಯಯನ ಮಾಡಿದವರಿಗೆ ಜೀವನದಲ್ಲಿ ಯಶಸ್ಸು, ನೆಮ್ಮದಿ ದೊರಕುತ್ತದೆ. ಈ ಕೃತಿಯಲ್ಲಿ 30 ವಚನಕಾರರ ಭಾವಚಿತ್ರ ಹಾಗೂ ಅವರ ವಚನಗಳನ್ನು ಆಂಗ್ಲಭಾಷೆಗೆ ಅನುವಾದ ಮಾಡಿ ನೀಡಲಾಗಿದ್ದು ಕನ್ನಡ ಬಾರದ ಆಂಗ್ಲ ಭಾಷೆಯ ಸಾಹಿತ್ಯಾಸಕ್ತರಿಗೆ ವಚನದ ಮಹತ್ವ ಅರಿಯಲು ಸಹಕಾರಿಯಾಗಿದೆ ಎಂದರು.

ಕೃತಿಯ ಸಂಪಾದಕಿ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ಮಾತನಾಡಿ, ಹೊರಜಗತ್ತನ್ನು ನೋಡಲು ಬಹಿರಂಗದ ಕಣ್ಣು ಬಳಸುತ್ತೇವೆ ಆದರೆ ಒಳಗಣ್ಣು ತೆರೆದು ನೋಡಿದಾಗ ಮಾತ್ರ ಶಿವನ ಒಲುಮೆಗೆ ಪಾತ್ರರಾಗಲು ಸಾಧ್ಯವಾಗುತ್ತದೆ. ಇನ್ನರ್ ಐ ಕೃತಿಯಲ್ಲಿ ವಚನಗಳು ಕನ್ನಡದಿಂದ ಆಂಗ್ಲ ಭಾಷೆಗೆ ಅನುವಾದವಾಗಿರುವುದರಿಂದ ವಿಶ್ವದ ವಿವಿಧ ಭಾಗದಲ್ಲಿ ನೆಲೆಸಿರುವವರು ಕನ್ನಡ ನಾಡಿನಲ್ಲಿ ಸೃಷ್ಟಿಯಾಗಿದ್ದ ಹಾಗೂ ಜಗತ್ತಿನ ಯಾವುದೇ ಭಾಗದಲ್ಲಿ ಕಂಡು ಬರದ ವಿಶೇಷ ಸಾಹಿತ್ಯ ಪ್ರಕಾರ ವಾದ ವಚನಗಳನ್ನು ಅಧ್ಯಯನ ಮಾಡಲು ಸಹಾಯಕವಾಗುತ್ತದೆ ಎಂದರು. ಭಾರತ ಸರ್ಕಾರದ ಮೆಕಾನ್ ಮಾಜಿ ಕಾರ್ಯ ನಿರ್ವಾಹಕ ನಿರ್ದೇಶಕ ವಿಶ್ವನಾಥಶಾಸ್ತ್ರಿ ಕೃತಿಯನ್ನು ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ನಿವೃತ್ತ ಅಭಿಯಂತರ ನಾಗರಾಜಪ್ಪ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ, ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್ ವಾಜಂತ್ರಿ, ಕೇಂದ್ರೀಯ ಸಂಚಾಲಕ ವಿ. ಲಿಂಗಣ್ಣ, ಅಕ್ಕಮಹಾದೇವಿ ಮರಮ್ಕಲ್, ಉಷಾ, ನಾಗೇಶ್, ನೀಲಾಂಬಿಕಾದೇವಿ, ಪುಟ್ಟ ವೀರಪ್ಪ, ಸುಮಾಪ್ರಕಾಶ್, ಪರಶಿವ ಮೂರ್ತಿ, ಲಲಿತ, ರಶ್ಮಿ, ಮಾನಸ, ವಚನ, ಗಿರಿಜೇಶ್ ಉಪಸ್ಥಿತರಿದ್ದರು.

## ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಸೆ.15– 2023–24 ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ (ವೃತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅ.11 ಕೊನೆಯ ದಿನಾಂಕವಾಗಿದ್ದು, https://shp.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in ಅಥವಾ ದೂ.8050770005 ಅನ್ನು ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ನೀರಿನ ಮಟ್ಟ

| | ಕೆಆರ್‌ಎಸ್ ಅಣೆಕಟ್ಟು | ಕಬಿನಿ ಅಣೆಕಟ್ಟು | ಹಾರಂಗಿ ಅಣೆಕಟ್ಟು |
|---|---|---|---|
| ಗರಿಷ್ಠ ಮಟ್ಟ | 124.80 ಅಡಿ | 2284.00 ಅಡಿ | 2859.00 ಅಡಿ |
| ಇಂದಿನ ಮಟ್ಟ | 97.38 ಅಡಿ | 2276.25 ಅಡಿ | 2858.32 ಅಡಿ |
| ಹಿಂದಿನ ವರ್ಷದ ಮಟ್ಟ | 124.24 ಅಡಿ | 2283.10 ಅಡಿ | 2858.02 ಅಡಿ |
| ನಿನ್ನೆಯ ಮಟ್ಟ | 97.52 ಅಡಿ | 2776.08 ಅಡಿ | 2858.38 ಅಡಿ |



## ದಸರಾ ಚಲನ ಚಿತ್ರೋತ್ಸವ ಅಂಗವಾಗಿ ಕಿರುಚಿತ್ರ ಸ್ಪರ್ಧೆ

ಮೈಸೂರು, ಸೆ.15– 2023ರ ಮೈಸೂರು ದಸರಾ ಚಲನಚಿತ್ರೋತ್ಸವ ಉಪ ಸಮಿತಿ ವತಿಯಿಂದ ಕಿರುಚಿತ್ರ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ಕಿರು ಚಿತ್ರವು 10 ನಿಮಿಷಗಳ ಅವಧಿ ಮೀರಿರಬಾರದು. 5 ನಗದು ಬಹುಮಾನಗಳು ಹಾಗೂ ಎಲ್ಲಾ ಸ್ಪರ್ಧಿಗಳಿಗೂ ಪ್ರಮಾಣ ಪತ್ರ ವಿತರಿಸಲಾಗುವುದು. ಕಿರುಚಿತ್ರವನ್ನು ಗೂಗಲ್ ಡ್ರೈವ್ ಅಥವಾ ಯೂಟ್ಯೂಬ್‌ಗೆ ಅಪ್ಲೋಡ್ ಮಾಡಿ ಅದರ ಲಿಂಕ್ ಅನ್ನು ಅರ್ಜಿಯಲ್ಲಿ ನಮೂದಿಸಬೇಕು. ನೋಂದಣಿಗೆ ಸೆ.30 ಕೊನೆಯ ದಿನಾಂಕವಾಗಿದ್ದು, ನೋಂದಣಿ ಶುಲ್ಕ 100 ರೂ. ಪಾವತಿಸಬೇಕು. ಹೆಚ್ಚಿನ ವಿವರಗಳಿಗೆ myDFF2023 2023 ಫೇಸ್‌ಬುಕ್ ಹಾಗೂ ಇನ್ಸ್ಟಾಗ್ರಾಮ್ ಪೇಜ್ ಫಾಲೋ ಮಾಡುವುದು ಹಾಗೂ ದೂ.ಸಂ:7411564510 ಅನ್ನು ಸಂಪರ್ಕಿಸಬಹುದು ಎಂದು ದಸರಾ ಚಲನಚಿತ್ರೋತ್ಸವ ಉಪ ವಿಶೇಷಾಧಿಕಾರಿ ಹಾಗೂ ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕರಾದ ಸವಿತಾ ಎಂ.ಕೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಹಕಾರ ಸಂಘಗಳು ಡೆಲಿಗೇಟ್ ಫಾರಂ ಸಲ್ಲಿಸದಿರಲು ಸೂಚನೆ

ಮೈಸೂರು, ಸೆ.15– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಚುನಾವಣಾ ಪ್ರಕ್ರಿಯೆಯ ಅಧಿಸೂಚನೆಯನ್ನು ಹಿಂಪಡೆದಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ನಿಯಮಾವಳಿಗಳು 1960ರ ನಿಯಮ 13(ಡಿ)ರ ಅವಕಾಶದಂತೆ ಸದಸ್ಯ ಸಹಕಾರ ಸಂಘಗಳು ತನ್ನ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಡೆಲಿಗೇಟ್ ಫಾರಂಗಳನ್ನು ಸಲ್ಲಿಸುವ ಪ್ರಕ್ರಿಯೆಯನ್ನು ಮುಂದಿನ ಅಧಿಸೂಚನೆ ಹೊರಡಿಸುವವರೆಗೂ ಸಲ್ಲಿಸದಂತೆ ಬ್ಯಾಂಕಿನ ವ್ಯಾಪ್ತಿಗೆ ಒಳಪಡುವ ಎಲ್ಲಾ ಸದಸ್ಯ ಸಹಕಾರ ಸಂಘಗಳಿಗೆ ತಿಳಿಸಲಾಗಿದೆ. ಹೀಗಿದ್ದಾಗ್ಯೂ ಸದಸ್ಯ ಸಹಕಾರ ಸಂಘಗಳು ಡೆಲಿಗೇಟ್ ಫಾರಂಅನ್ನು ಸಲ್ಲಿಸಿದಲ್ಲಿ ಅಸಿಂಧುವಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿಧನ

### ಮೂಡೇರ ಗಂಗಮ್ಮ



ಮೈಸೂರು, ಸೆ. 15–ಮೈಸೂರಿನ ಇಲವಾಲದ ಐಟಿಸಿ ಫ್ಯಾಕ್ಟರಿ ಹಿಂಭಾಗದಲ್ಲಿರುವ ಬ್ರಹ್ಮಗಿರಿ ಬಡಾವಣೆ ನಿವಾಸಿ ದಿವಂಗತ ಅಪ್ಪಯ್ಯ ಅವರ ಪತ್ನಿ ಮೂಡೇರ ಗಂಗಮ್ಮ (ಕುಂಡ್ಯೋಲಂಡ) ಶುಕ್ರವಾರ ನಿಧನರಾದರು. ಅವರಿಗೆ 93 ವರ್ಷ ವಯಸ್ಸಾಗಿತ್ತು. ಮೃತರು ಪುತ್ರಿ ಪಲೀ, ಅಳಿಯ ಮುಕ್ಕಾಟೀರ ಗಣೇಶ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಸುದೀಪ್



ಮೈಸೂರಿನ ಸುಯೋಗ್ ಆಸ್ಪತ್ರೆಯ ಫಾರ್ಮಾಸಿಸ್ಟ್ ಮತ್ತು ಬೋಗಾದಿಯ ಪೀಪಲ್ ಫಾರ್ ಅನಿಮಲ್ ಸಂಸ್ಥೆ ಸಮೀಪದ ನಿವಾಸಿ ಸುದೀಪ್ (53) ಗುರುವಾರ ನಿಧನರಾದರು. ಮೃತರು ತಾಯಿ ಪದ್ಮಲತಾ, ಪತ್ನಿ ಸುಗುಣ, ಪುತ್ರ ಸಮಂತ್, ಇಬ್ಬರು ಸಹೋದರಿಯರು, ಓರ್ವ ಸಹೋದರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಮಹಾಲಕ್ಷ್ಮಿ



ಮೈಸೂರು, ಸೆ.15– ಮೈಸೂರಿನ ದೇವರಾಜ ಮೊಹಲ್ಲಾ ನಿವಾಸಿ ಮಹಾಲಕ್ಷ್ಮಿ (72) ಅವರು ಶುಕ್ರವಾರ ನಿಧನರಾದರು.

ಮೃತರು ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಶನಿವಾರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**16.9.2023 ಶನಿವಾರ, ಮಳೆ ನಕ್ಷತ್ರ: ಉತ್ತರಾ 14.09.2023 ರಿಂದ 27.09.2023**
**ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ**

- **ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಪರಿಚಯ ಕಾರ್ಯಕ್ರಮದ ಅಂಗವಾಗಿ ವಾಕಾಥಾನ್, ಚಾಲನೆ : ಹಿರಿಯ ಅಥ್ಲೀಟ್ ಕೆ.ಎನ್.ಕೇಶವಮೂರ್ತಿ, ಭಾಗವಹಿಸುವವರು : ಎನ್‌ಐಇ ಪ್ರಾಂಶುಪಾಲೆ ಡಾ. ರೋಹಿಣಿ ನಾಗಪದ್ಮ, ಉಪ ಪ್ರಾಂಶುಪಾಲ ಡಾ. ಗಣೇಶ್ ಪ್ರಸಾದ್, ಡಾ. ಲಕ್ಷ್ಮೀ ರಂಗನಾಥ್, ಎನ್‌ಎಸ್‌ಎಸ್ ಅಧಿಕಾರಿ ಡಾ.ಚಂದ್ರು, ದೈಹಿಕ ಶಿಕ್ಷಣ ನಿರ್ದೇಶಕರಾದ ಆರ್.ಕಾವ್ಯ ಮತ್ತು ಎಚ್.ಸಿ. ಸುದಿನ, ಸ್ಥಳ: ಡೈಮಂಡ್ ಜ್ಯೂಬಿಲಿ ಬ್ಲಾಕ್, ಎನ್‌ಐಇ ಆವರಣ, ಬೆಳಗ್ಗೆ 6ಕ್ಕೆ.
- **ಅಂತರರಾಷ್ಟ್ರೀಯ ಲಯನ್ಸ್ ಕ್ಲಬ್ ಸಂಸ್ಥೆ, ಲಯನ್ಸ್ ಕ್ಲಬ್ ಆಫ್ ಬೆಂಗಳೂರು ಈಸ್ಟ್ ಪ್ರಾಜೆಕ್ಟ್ :** ವಾಕ್ ಮತ್ತು ಶ್ರವಣ ದೋಷವಿರುವವರಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುಂಬಾರಕೊಪ್ಪಲು, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸ್ತ್ರೀ ರೋಗ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.
- **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ ಆರ್ಟ್ :** ಎಂ.ಎಲ್. ಪವನ್‌ಕುಮಾರ್ ಅವರಿಂದ ಸ್ಥಿರ ಚಿತ್ರಣ ಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10 ರಿಂದ.
- **ರಾಮ್‌ಸನ್ಸ್ :** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ವಿವಿ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ, ಜೆ.ಕೆ. ಟೈರ್ಸ್ ಇಂಡಸ್ಟ್ರೀಸ್ ಲಿಮಿಟೆಡ್ :** ನೂತನವಾಗಿ ನಿರ್ಮಿಸಿರುವ ಶೌಚಾಲಯ ಕಟ್ಟಡಗಳ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ಶಾಸಕ ಹರೀಶ್‌ಗೌಡ, ಮುಖ್ಯ ಅತಿಥಿಗಳು : ಜೆ.ಕೆ. ಟೈರ್ಸ್ ಉಪಾಧ್ಯಕ್ಷ ವಿ. ಈಶ್ವರರಾವ್, ಹಿರಿಯ ಪ್ರಧಾನ ವ್ಯವಸ್ಥಾಪಕ ಆರ್. ಜಗದೀಶ್, ಸ್ಥಳ: ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿ ನಿಲಯ ಬ್ಲಾಕ್, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ಶ್ರೀ ಸತ್ಯಸಾಯಿ ಬಾಬಾ ಸ್ಕೂಲ್ ಮತ್ತು ಪದವಿಪೂರ್ವ ಕಾಲೇಜು :** ಪಿಯು ಕಾಲೇಜು ಲ್ಯಾಬೋರೇಟರಿ ಬ್ಲಾಕ್ ಉದ್ಘಾಟನೆ ಮತ್ತು ನೂತನ ಹಾಸ್ಟೆಲ್ ನಿರ್ಮಾಣಕ್ಕೆ ಭೂಮಿಪೂಜೆ, ಉದ್ಘಾಟನೆ : ಶ್ರೀ ಸತ್ಯ ಸಾಯಿ ಸೆಂಟ್ರಲ್ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಆರ್.ಜೆ. ರತ್ನಾಕರ್, ಗೌರವ ಅತಿಥಿಗಳು : ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಮಹಿಳಾ ಮತ್ತು ಮಕ್ಕಳ ಕೂಟ ಟ್ರಸ್ಟ್ ಗೌರವ ಅಧ್ಯಕ್ಷ ಪ್ರೊ. ಕೆ.ಬಿ. ಪ್ರಭು ಪ್ರಸಾದ್, ಅಧ್ಯಕ್ಷತೆ : ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಮಹಿಳಾ ಮತ್ತು ಮಕ್ಕಳ ಕೂಟ ಟ್ರಸ್ಟ್ ಛೇರ್ಮನ್ ಡಾ. ಎಂ.ಎನ್. ಸುಂದರೇಶನ್, ಸ್ಥಳ: ಕಾಲೇಜು ಆವರಣ, ಜಯಲಕ್ಷ್ಮಿಪುರಂ, ಬೆಳಗ್ಗೆ 11ಕ್ಕೆ.
- **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಶರಣ ನುಲಿಯ ಚಂದಯ್ಯ ಜಯಂತಿ ಆಚರಣಾ ಸಮಿತಿ :** ಶ್ರೀ ಶರಣ ನುಲಿಯ ಚಂದಯ್ಯನವರ 916ನೇ ಜಯಂತಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಗೌರವ ಉಪಸ್ಥಿತರು: ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಸ್ಥಳ: ಕರ್ನಾಟಕ ಕಲಾಮಂದಿರ, ಮಧ್ಯಾಹ್ನ 12ಕ್ಕೆ.
- **ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಕಾನೂನು ಘಟಕ :** ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಶಾಸಕ ಎ.ಎಸ್. ಪೊನ್ನಣ್ಣ ಅವರಿಗೆ ಅಭಿನಂದನಾ ಸಮಾರಂಭ ಹಾಗೂ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷ ತಿಮ್ಮಯ್ಯ ಹಾಗೂ ಇನ್ನಿತರ ವಕೀಲ ಪದಾಧಿಕಾರಿಗಳ ಪದಗ್ರಹಣ ಸಮಾರಂಭ, ಉದ್ಘಾಟನೆ : ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಮುಖ್ಯ ಅತಿಥಿಗಳು : ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್, ವಿಶೇಷ ಆಹ್ವಾನಿತರು : ಶಾಸಕರಾದ ಅನಿಲ್ ಚಿಕ್ಕಮಾದು, ಡಿ. ರವಿಶಂಕರ್, ಡಾ. ಮಂಥರ್‌ಗೌಡ, ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಶಾಸಕ ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಡಾ. ಡಿ. ತಿಮ್ಮಯ್ಯ, ಮಧು ಜಿ. ಮಾದೇಗೌಡ, ಮಾಜಿ ವಿಧಾನ ಪರಿಷತ್ ಸದಸ್ಯ ಧರ್ಮಸೇನಾ, ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್, ಕೆಡಿಪಿ ಸದಸ್ಯ ಸುನೀಲ್ ಬೋಸ್, ಸ್ಥಳ:ಇಂದಿರಾ ಗಾಂಧಿ ಕಾಂಗ್ರೆಸ್ ಭವನ, ಮಧ್ಯಾಹ್ನ 3ಕ್ಕೆ.
- **ಮೈಸೂರು ಧಾರ್ಮಿಕ ಪ್ರತಿಷ್ಠಾನ, ಮೈಸೂರು ಕಲಾ ಪ್ರತಿಷ್ಠಾನ:** ಮೈಸೂರು ಗಣೇಶ ಉತ್ಸವ, ಪರಿಸರ ಸ್ನೇಹಿ ಗಣೇಶ ವಿಗ್ರಹ ತಯಾರಿಕೆಯ ಕಾರ್ಯಾಗಾರ, ಸ್ಥಳ: ಮಾಧವಕೃಪ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3ರಿಂದ.
- **ಕಲಾಸುರುಚಿ ಸಂಸ್ಥೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ–793, ಕಥೆ ಹೇಳುವವರು ವಿಜಯಾ ಸಿಂಧುವಳ್ಳಿ, ಸ್ಥಳ: ಸುರುಚಿ ರಂಗ ಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ಗಾನಭಾರತೀ:** ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮ, ಕಲಾವಿದರಿಗೆ ಹಾಗೂ ಕಲಾ ಪೋಷಕರಿಗೆ ಸನ್ಮಾನ, ಮುಖ್ಯ ಅತಿಥಿಗಳು: ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಸನ್ಮಾನಿತರು: ವಿದ್ವಾನ್ ವೈ.ಎಂ. ಪುಟ್ಟಣ್ಣಯ್ಯ, ವಿದ್ವಾನ್ ಎಂ.ಎಸ್. ಜಯರಾಂ, ಮುಳಿಯ ರಾಘವಯ್ಯ, ನಾರಾಯಣಮೂರ್ತಿ, ನಾಟ್ಯಾಚಾರ್ಯ ಉಳ್ಳಾಲ ಮೋಹನ ಕುಮಾರ್, ಸ್ಥಳ: ರಮಾ ಗೋವಿಂದ ರಂಗಮಂದಿರ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5ಕ್ಕೆ.
- **ರಾಗಾ ಮ್ಯೂಸಿಕ್ ಅಕಾಡೆಮಿ :** ವಿದ್ವಾನ್ ಬಾಲು ಮಸ್ತಿ ಅವರಿಂದ ವೀಣಾವಾದನ, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ರಘುನಂದನ್ ವ್ಯಾಸರಾವ್–ಘಟಂ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣ ಶಾಸ್ತ್ರಿ ರಸ್ತೆ, ಸಂಜೆ 6ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಪರಿವರ್ತನ ರಂಗ ಸಮಾಜ :** 'ಅಂಗಳದಲ್ಲಿ ಮಂಗಳ ಹಕ್ಕಿಯ ನೆರಳು' ನಾಟಕ ಪ್ರದರ್ಶನ, ನಿರ್ದೇಶನ : ಪ್ರೊ. ಎಸ್.ಆರ್. ರಮೇಶ್, ಸ್ಥಳ: ನಮನ ಕಲಾಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 6.30ಕ್ಕೆ.
- **ಶ್ರೀ ಉತ್ತರಾದಿ ಮಠ, ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಶ್ರೀ ಧನ್ವಂತರಿ ಜಯಂತಿ ಪ್ರಯುಕ್ತ ಸಪ್ತ ರಾತ್ರೋತ್ಸವ, ಬೆಳಗ್ಗೆ ಶ್ರೀ ಧನ್ವಂತರಿ ದೇವರಿಗೆ ಫಲ ಅಲಂಕಾರ, ಸಂಜೆ ರಾಜನ ಪಲ್ಲಕ್ಕಿ ಉತ್ಸವ, ಪಂಡಿತ್ ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರಿಂದ ಶ್ರೀ ಮದ್ಭಾಗವತ ಸಪ್ತಾಹ ಪ್ರವಚನ, ಸ್ಥಳ: ರೋಗ ಮೋಚನ ಶ್ರೀ ಧನ್ವಂತರಿ ಸನ್ನಿದನ, ಉತ್ತರಾದಿ ಮಠ, ಸಂಜೆ 7 ರಿಂದ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ–ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿಎಫ್‌ಟಿಆರ್‌ಐ ಶೋಧ ಅನುಶೋಧ–ಪ್ರಾಯೋಜಿತ ಕಾರ್ಯಕ್ರಮ, ಪ್ರಸ್ತುತಿ– ಡಾ. ಆಶಾ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು–ಸಿ. ಅಶ್ವಥ್, ರತ್ನಮಾಲಾ ಪ್ರಕಾಶ್ ಮತ್ತು ಸಂಗಡಿಗರು, 8.30 ವಿಶಿಷ್ಟ ವ್ಯಕ್ತಿ – ವಿಶೇಷ ಯತ್ನ, ಬಾನುಲಿ ಸರಣಿ–ವನವಾಸಿ ಕಲ್ಯಾಣದ ಪುಟ್ಟಮ್ಮ ಅವರೊಡನೆ ಸಂವಾದದಲ್ಲಿ ಭಾಗವಹಿಸುತ್ತಾರೆ ದಿವಾಕರ ಹೆಗಡೆ, 10.00ಆರ್. ಪಾಥಸಾರಥಿ–ನಾಗಸ್ವರ ವಾದನ, 11.00 "ಸ್ವರಾಜ್" ಭಾರತ ಸ್ವಾತಂತ್ಯ ಸಂಗ್ರಾಮದ ಸಮಗ್ರಗಾಥೆ

**ಮಧ್ಯಾಹ್ನ:** 12.30 ದೇವರನಾಮ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 12.45 ಜನಪದಗೀತೆ, 1.20 ಭಾವಗೀತೆ–ಡಾ. ಶಿಲ್ಪಾ ಹೆಗ್ಡೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ– ಪ್ರತಿಭಾ ಪಲ್ಲವ, ಬಹುಮುಖ ಪ್ರತಿಭೆಯ ಗೌತಮ್ ರಾಜ್ ಪರಿಚಯ, 4.30 ನೆನಪಿನಂಗಳ–ಸಂಗೀತ ಶಾಸ್ತ್ರಜ್ಞರು, ಆಕಾಶವಾಣಿಯ ನಿವೃತ್ತ ಅಧಿಕಾರಿ ಎಸ್. ಕೃಷ್ಣಮೂರ್ತಿ ಅವರೊಂದಿಗೆ ಜಿ. ರಾಜಲಕ್ಷ್ಮಿ ಶ್ರೀಧರ್ ಅವರು ನಡೆಸಿದ ಸಂವಾದ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್.ಕೇಶವಮೂರ್ತಿ, ಡಾ. ಮೈಸೂರು ಉಮೇಶ್, ಆರ್. ಲೋಕೇಶ್ವರಿ, ಪರಾಗ, ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಸುರೇಶ್ ಗಂಧರ್ವ – ಗಾಯನ

3ನೇ ಬಾರಿ ಶೇ.50 ವಿನಾಯಿತಿ ಅವಕಾಶ

## ಜು.5ರಿಂದ ಸೆ.9ರವರೆಗೆ 1.54 ಕೋಟಿ ರೂ. ಸಂಚಾರ ನಿಯಮ ಉಲ್ಲಂಘನೆ ದಂಡ ಸಂಗ್ರಹ

ಮೈಸೂರು, ಸೆ.15(ಆರ್‌ಕೆ)– ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಬಾಕಿ ದಂಡ ಪಾವತಿಸಲು 3ನೇ ಬಾರಿ ನೀಡಿದ ಅವಕಾಶಕ್ಕೆ ವಾಹನ ಮಾಲೀಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೈಸೂರು ನಗರದಲ್ಲಿ ಜುಲೈ 5ರಿಂದ ಸೆಪ್ಟೆಂಬರ್ 9ರವರೆಗೆ 78,280 ಪ್ರಕರಣಗಳಲ್ಲಿ ಒಟ್ಟು 1,53,85,600 ರೂ. ದಂಡ ವಸೂಲಾಗಿದೆ. 2019ರಿಂದ 2023ರ ಜುಲೈ 4 ರವರೆಗೆ 25,98,759 ಪ್ರಕರಣಗಳು ಬಾಕಿ ಇದ್ದು, 130,19,25,200 ರೂ. ದಂಡ ಸಂಗ್ರಹವಾಗಿತ್ತು. 2023ರ ಫೆಬ್ರವರಿ 11ಕ್ಕಿಂತ ಮೊದಲು ದಾಖಲಾಗಿದ್ದ ಪ್ರಕರಣಗಳಲ್ಲಿ ದಂಡ ಪಾವತಿಸಲು ಶೇ. 50ರಷ್ಟು ರಿಯಾಯಿತಿ ಘೋಷಿಸಿದ ಬಳಿಕ ಜುಲೈ 5ರಿಂದ ಸೆಪ್ಟೆಂಬರ್ 9ರವರೆಗೆ 78,270 ಪ್ರಕರಣಗಳಲ್ಲಿ 1,53,85,600 ರೂ. ದಂಡ ಸಂಗ್ರಹವಾಯಿತು. 2023ರ ಸೆಪ್ಟೆಂಬರ್ 10ರವರೆಗೆ ಮೈಸೂರು ನಗರದಲ್ಲಿ 28,43,443 ಪ್ರಕರಣಗಳು ಬಾಕಿ ಉಳಿದಿದ್ದು, ಒಟ್ಟು 142,86,01,000 ರೂ. ದಂಡ ಪಾವತಿಸಬೇಕಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಸೆ.15– 2023–24ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ (ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅ.11 ಕೊನೆಯ ದಿನಾಂಕವಾಗಿದ್ದು, https://shp.karnataka.gov.in ಮೂಲಕ ಅರ್ಜಿ ಸಲ್ಲಿಸಲಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in ಅಥವಾ ದೂ.ಸಂ: 8050770005 ಅನ್ನು ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ಕಿನಾರಾ ಸಂಸ್ಥೆಯಿಂದ 575 ಕೋಟಿ ವ್ಯಾಪಾರ ಸಾಲ ವಿತರಣೆ ಯೋಜನೆ

ಮೈಸೂರು, ಸೆ. 15– ಕಿನಾರಾ ಸಂಸ್ಥೆಯು ಕರ್ನಾಟಕದಲ್ಲಿ ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 575 ಕೋಟಿಗೂ ಹೆಚ್ಚು ವ್ಯಾಪಾರ ಸಾಲ ವಿತರಣೆಗೆ ಮುಂದಾಗಿದೆ ಎಂದು ಸಂಸ್ಥೆ ಹೇಳಿದೆ. ಯೋಜನೆ ಕುರಿತು ಸುದ್ದಿಗೋಷ್ಠಿಯಲ್ಲಿ ವಿವರಿಸಿದ ಕಿನಾರಾ ಕ್ಯಾಪಿಟಲ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆರ್. ತಿರುನಾವುಕ್ಕರಸು, ಕರ್ನಾಟಕ ವೈವಿಧ್ಯಮಯ ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಹೊಂದಿ ವೇಗವಾಗಿ ಬೆಳೆಯುತ್ತಿರುವ ಪ್ರದೇಶ. ಕಿನಾರಾ ಕ್ಯಾಪಿಟಲ್ ಕರ್ನಾಟಕದಲ್ಲಿ ಪ್ರಧಾನ ಕಛೇರಿ ಹೊಂದಿದೆ. 2024 ಹಣಕಾಸು ವರ್ಷದಲ್ಲಿ 575 ಕೂಟಿ ರೂ. ಗೂ ಹೆಚ್ಚು ಹಣ ವಿತರಿಸಲು ಉದ್ದೇಶಿಸಿರುವುದು ಇನ್ನಷ್ಟು ಸಣ್ಣ ಉದ್ಯಮಗಳ ಬೆಳವಣಿಗೆಗೆ ನೆರವಾಗಲಿದೆ ಮತ್ತು ಸ್ಥಳೀಯವಾಗಿ 6000 ಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗಲಿದೆ ಎಂದರು.

ಸಣ್ಣ, ಕಿರು ಮತ್ತು ಮಧ್ಯಮ ಕೈಗಾರಿಕೆಗಳ ಮಾಲೀಕರು ಕನ್ನಡದಲ್ಲಿ ಲಭ್ಯವಿರುವ ಹಾಗೂ ಬಳಸಲು ಸುಲಭವಾಗಿರುವ ಮೈ ಕಿನಾರಾ ಅಪ್ಲಿಕೇಶನ್ ಮೂಲಕ ತಮ್ಮ ಮೊಬೈಲ್‌ನಲ್ಲೇ ಈ ಪ್ರಕ್ರಿಯೆ ನಡೆಸಬಹುದು. 2023 ಹಣಕಾಸು ವರ್ಷದಲ್ಲಿ ಕಿನಾರಾ ಸಂಸ್ಥೆ 341 ಕೋಟಿ ರೂ. ಉದ್ಯಮ ಸಾಲ ವಿತರಿಸಿದೆ. ಇದು 2022 ರಲ್ಲಿ ವಿತರಿಸಿದ ಮೊತ್ತಕ್ಕಿಂತ ಶೇ.141 ಹೆಚ್ಚಾಗಿದೆ.

ಕಿನಾರಾ ಕ್ಯಾಪಿಟಲ್ ಇತ್ತೀಚೆಗೆ ಹಾವೇರಿ, ಹುಮನಾಬಾದ್ ಮತ್ತು ರಾಮನಗರದಲ್ಲಿ 3 ಹೊಸ ಶಾಖೆಗಳನ್ನು ತೆರೆದಿದೆ. 28 ಶಾಖೆಗಳು ಮತ್ತು 658 ಪಿನ್ಕೋಡ್ ಗಳಿಗೆ ತನ್ನ ಭೌಗೋಳಿಕ ಅಸ್ತಿತ್ವವನ್ನು ವಿವರಿಸಿದೆ. ಅಲ್ಲದೆ, ಸಂಸ್ಥೆ ಕರ್ನಾಟಕದಲ್ಲಿ ತನ್ನ ಉದ್ಯೋಗಿಗಳ ಸಂಖ್ಯೆಯನ್ನು 930 ಕ್ಕೆ ಏರಿಸಲು ಯೋಜಿಸಿದೆ. 300 ಉದ್ಯೋಗಿಗಳನ್ನು ಹೊಸದಾಗಿ ನೇಮಿಸಲು ಸಿದ್ಧವಾಗಿದೆ ಎಂದರು.

## ಅಕ್ಟೋಬರ್ 16ರಿಂದ ದಸರಾ ಚಲನಚಿತ್ರೋತ್ಸವ

ಮೈಸೂರು, ಸೆ.15–ಈ ಬಾರಿಯ ದಸರಾ ಚಲನಚಿತ್ರೋತ್ಸವದಲ್ಲಿ ಕಿರು ಚಿತ್ರ ತಯಾರಿಕೆ ಸ್ಪರ್ಧೆ ಸೇರಿದಂತೆ ಹಲವು ವಿಶೇಷತೆಗಳನ್ನು ನೀಡಲು, ದಸರಾ ಚಲನ ಚಿತ್ರೋತ್ಸವ ಉಪ ಸಮಿತಿ ಸಿದ್ಧತೆ ನಡೆಸಿದೆ. ಇಂದು ಪ್ರವಾಸೋದ್ಯಮ ಇಲಾಖೆಯ ಕಚೇರಿಯಲ್ಲಿ ದಸರಾ ಚಲನಚಿತ್ರೋತ್ಸವ ಸಮಿತಿಯ ಉಪ ವಿಶೇಷಾಧಿಕಾರಿ ಹಾಗೂ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದಸರಾ ಚಲನಚಿತ್ರೋತ್ಸವಕ್ಕೆ ಸಂಬಂಧ ಮೊದಲ ಪೂರ್ವಭಾವಿ ಸಭೆ ನಡೆಸಲಾಯಿತು. ಅಕ್ಟೋಬರ್ 16ರಿಂದ 22ರವರೆಗೆ ನಗರದ ಮಾಲ್ ಆಫ್ ಮೈಸೂರಿನಲ್ಲಿರುವ ಐನಾಕ್ಸ್ ಹಾಗೂ ಡಿಆರ್‌ಸಿ ಮಲ್ಟಿಪ್ಲೆಕ್ಸ್ ಚಿತ್ರಮಂದಿರದಲ್ಲಿ ದಸರಾ ಚಲನ ಚಿತ್ರೋತ್ಸವವನ್ನು ಆಯೋಜಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಅಕ್ಟೋಬರ್ 15ರಂದು ಕಲಾಮಂದಿರದಲ್ಲಿ ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಚಿತ್ರರಂಗದ ಗಣ್ಯರು ದಸರಾ ಚಲನಚಿತ್ರೋತ್ಸವ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಈ ಹಿನ್ನೆಲೆಯಲ್ಲಿ ಸಿನಿಮಾ ನಟರು ಕಾರ್ಯಕ್ರಮದಲ್ಲಿ ಭಾಗವಹಿಸಿ, ತಾರಾ ರಂಗು ನೀಡಲು ಹಾಗೂ ಅವರನ್ನು ಆಹ್ವಾನಿಸಲು ಸಮಿತಿಯಿಂದ ಅಗತ್ಯ ಕ್ರಮವಹಿಸುವ ಬಗ್ಗೆ ಚರ್ಚಿಸಲಾಯಿತು.

ರಾಷ್ಟ್ರಮಟ್ಟದ ಪ್ರಶಸ್ತಿ ಪುರಸ್ಕೃತ ಕನ್ನಡ ಸಿನಿಮಾಗಳು ಸೇರಿದಂತೆ ಜನಪ್ರಿಯ ಕನ್ನಡ ಸಿನಿಮಾ, ಕಲಾತ್ಮಕ ಸಿನಿಮಾಗಳು, ಜನಪ್ರಿಯಗೊಂಡಿರುವ ಭಾರತೀಯ ಸಿನಿಮಾಗಳು ಹಾಗೂ ಅಂತರಾಷ್ಟ್ರೀಯ ಖ್ಯಾತಿಯ ಸಿನಿಮಾಗಳನ್ನು ಪ್ರದರ್ಶಿಸಲು ಸಮಿತಿಯಿಂದ ತೀರ್ಮಾನಿಸಲಾಯಿತು.

2023ರ ಮೈಸೂರು ದಸರಾ ಚಲನಚಿತ್ರೋತ್ಸವ ಉಪ ಸಮಿತಿ ವತಿಯಿಂದ ಕಿರುಚಿತ್ರ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ಕಿರುಚಿತ್ರವನ್ನು ಗೂಗಲ್ ಡ್ರೈವ್ ಅಥವಾ ಯೂಟ್ಯೂಬ್‌ಗೆ ಅಪ್ಲೋಡ್ ಮಾಡಿ ಅದರ ಲಿಂಕ್ ಅನ್ನು ಅರ್ಜಿಯಲ್ಲಿ ನಮೂದಿಸಬೇಕು. ನೋಂದಣಿಗೆ ಸೆ.30 ಕೊನೆಯ ದಿನಾಂಕವಾಗಿದ್ದು, ನೋಂದಣಿ ಶುಲ್ಕ 100 ರೂ. ಪಾವತಿಸಬೇಕು. ಹೆಚ್ಚಿನ ವಿವರಗಳಿಗೆ myDFF2023 2023 ಫೇಸ್‌ಬುಕ್ ಹಾಗೂ ಇನ್ಸ್ಟಾಗ್ರಾಮ್ ಪೇಜ್ ಫಾಲೋ ಮಾಡುವುದು ಹಾಗೂ ದೂ.ಸಂ:7411564510 ಅನ್ನು ಸಂಪರ್ಕಿಸಬಹುದಾಗಿದೆ.

ಸಭೆಯಲ್ಲಿ ದಸರಾ ಚಲನಚಿತ್ರೋತ್ಸವ ಉಪ ವಿಶೇಷಾಧಿಕಾರಿ ಹಾಗೂ ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕರಾದ ಸವಿತಾ ಎಂ.ಕೆ ಸಮಿತಿಯ ಕಾರ್ಯಾಧ್ಯಕ್ಷರು ಹಾಗೂ ಕೆಐಎಡಿಬಿ ವಿಶೇಷ ಭೂ ಸ್ವಾಧೀನಾಧಿಕಾರಿಯಾದ ವಿ.ಪ್ರಿಯದರ್ಶಿನಿ, ಕಾರ್ಯದರ್ಶಿ ಹಾಗೂ ವಾರ್ತಾ ಇಲಾಖೆ ಉಪ ನಿರ್ದೇಶಕ ಅಶೋಕ್ ಕುಮಾರ್, ಸಹ ಕಾರ್ಯದರ್ಶಿ ಹಾಗೂ ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಶ್ರೇಯಸ್ ಉಪಸ್ಥಿತರಿದ್ದರು.

# 'ತೆರೆದಿದೆ ಬನ್ನಿ! ರಾಮ್‌ಸನ್ಸ್ ಬೊಂಬೆ ಮನೆ

### ಪ್ರಖ್ಯಾತ ಚಿತ್ರಕಲಾವಿದೆ ಪ್ರೊ.ಎಂ.ಜೆ.ಕಮಲಾಕ್ಷಿ ಅವರಿಂದ ವಿದ್ಯುಕ್ತ ಚಾಲನೆ

ಮೈಸೂರು, ಸೆ.15(ಎಸ್‌ಬಿಡಿ)– ಮೈಸೂರಿನಲ್ಲಿ ದಸರಾ ಮಹೋತ್ಸವಕ್ಕೆ ಮುನ್ನವೇ ಅತ್ಯಾಕರ್ಷಕ ಹಾಗೂ ವಿಭಿನ್ನ ಬೊಂಬೆಗಳ ಪ್ರಪಂಚ ಅನಾವರಣಗೊಂಡಿದೆ.

ಮೈಸೂರಿನ ನಜರ್‌ಬಾದ್ ಮುಖ್ಯರಸ್ತೆ, ಆಮ್ರಪಾಲಿ ಮಳಿಗೆ ಮೇಲಿನ 'ರಾಮ್‌ಸನ್ಸ್ ಬೊಂಬೆ ಮನೆ'ಯಲ್ಲಿ ಆಯೋಜಿಸಿರುವ 19ನೇ ವರ್ಷದ ಬೊಂಬೆ ಪ್ರದರ್ಶನದಲ್ಲಿ ವಿವಿಧ ರಾಜ್ಯಗಳ ವೈವಿಧ್ಯಮಯ ಮಾದರಿ ಬೊಂಬೆಗಳು ಮನಸೂರೆಗೊಳ್ಳುತ್ತಿವೆ. ಈ ಬಾರಿ ನಾಲ್ಕು ಅಂತಸ್ತಿನಲ್ಲಿ ಬೊಂಬೆಗಳನ್ನು ಅಚ್ಚುಕಟ್ಟಾಗಿ ಜೋಡಿಸಿರುವುದು ವಿಶೇಷವಾಗಿದೆ. ವಿಭಿನ್ನ ಗಾತ್ರ, ಎತ್ತರದ ವರ್ಣಮಯ ಬೊಂಬೆಗಳು ನೋಡುಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ. ಬೊಂಬೆ ಮನೆಯನ್ನು ಒಂದು ಸುತ್ತು ಹಾಕಿದರೆ ಬೊಂಬೆಗಳ ಶ್ರೇಷ್ಠ ಪರಂಪರೆ ತನ್ನಂತಾನೆ ಮನಸ್ಸಿಗೆ ನಾಟುತ್ತದೆ.

**ವಿದ್ಯುಕ್ತ ಚಾಲನೆ:** ಕರ್ನಾಟಕ ಲಲಿತಾ ಕಲಾ ಅಕಾಡೆಮಿ ಮಾಜಿ ಅಧ್ಯಕ್ಷರಾದ ಪ್ರಖ್ಯಾತ ಚಿತ್ರ ಕಲಾವಿದೆ ಪ್ರೊ.ಎಂ.ಜೆ.ಕಮಲಾಕ್ಷಿ ಅವರು ದೀಪ ಬೆಳಗುವ ಮೂಲಕ 'ಬೊಂಬೆ ಮನೆ–2023'ಕ್ಕೆ ವಿದ್ಯುಕ್ತ ಚಾಲನೆ ನೀಡಿ, ರಾಮ್‌ಸನ್ಸ್ ಬೊಂಬೆ ಮನೆ ಸಾರ್ಥಕ ಕೊಡುಗೆಯನ್ನು ಬಣ್ಣಿಸಿದರು.

ದೇವರ ಮೂರ್ತಿಯನ್ನು ನೋಡಿದಾಕ್ಷಣ ಕೈಮುಗಿದು ಅಥವಾ ಮನಸ್ಸಿನಲ್ಲಿ ನೆನೆದು ಭಕ್ತಿ ತೋರುತ್ತೇವೆ. ರಾಮ್‌ಸನ್ ಬೊಂಬೆ ಮನೆಯಲ್ಲಿ ಅಪಾರ ಸಂಖ್ಯೆಯಲ್ಲಿರುವ ದೇವರ ಮೂರ್ತಿಗಳನ್ನು ಕಂಡು ದೈವಸ್ಥಳಕ್ಕೆ ಬಂದಂತೆ ಭಾವನೆ ಮೂಡಿತು. ಇಷ್ಟೊಂದು ಸಂಖ್ಯೆಯ ಬೊಂಬೆಗಳನ್ನು ನೋಡಿ ಖುಷಿಯ ಜೊತೆಗೆ ಅಚ್ಚುಕಟ್ಟಾಗಿ ಜೋಡಿಸಿರುವುದು ಆಶ್ಚರ್ಯ ತಂದಿತು. ಹಿಂದೆ ದೇವರು ಕರುಣಿಸಿರುವ ಒಡವೆ–ವಸ್ತ್ರಗಳಿಂದ ದೇವಿ ಮೂರ್ತಿಯನ್ನು ಸಿಂಗರಿಸಿ, ಎಲ್ಲರೂ ಕೂಡಿ ನವರಾತ್ರಿ ಆಚರಿಸಲಾಗುತ್ತಿತ್ತು. ಆದರೆ ಈಗ ಎಲ್ಲರೂ ಬೆರೆಯುವುದೇ ಅಪರೂಪವಾಗಿದೆ ಎಂದರು.

ಬೊಂಬೆಗಳನ್ನು ಕೂರಿಸುವುದು ಸುಲಭವಲ್ಲ, ಅದಕ್ಕೆ ಸಾಕಷ್ಟು ಸಿದ್ಧತೆ ಬೇಕು. ಆದರೆ ಬೊಂಬೆ ಮನೆಗೆ ಬಂದಾಕ್ಷಣ ನನಗೆ ರೋಮಾಂಚನವಾಯಿತು. ಪುಟ್ಟ ಬೊಂಬೆಗಳಿಂದ ಹಿಡಿದು ಆರು ಅಡಿ ಎತ್ತರದ ಬೊಂಬೆಗಳನ್ನು ತುಂಬಾ ಅಚ್ಚುಕಟ್ಟಾಗಿ, ಶ್ರದ್ಧೆಯಿಂದ ಜೋಡಿಸಲಾಗಿದೆ. ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ಈ ಸಂಸ್ಥೆಯ ಸೇವೆ ಅವಿಸ್ಮರಣೀಯ. ಪುರಾಣ, ಪರಂಪರೆ, ಸಂಸ್ಕೃತಿಯ ಆಗರವಾಗಿರುವ ಈ ಬೊಂಬೆ ಮನೆಗೆ ಎಲ್ಲರೂ ಭೇಟಿ ನೀಡಿ, ವೀಕ್ಷಿಸಬೇಕು. ಮುಖ್ಯವಾಗಿ ಮುಂದಿನ ತಲೆ ಮಾರಿನವರು ನಮ್ಮ ಆಚರಣೆ, ಸಂಸ್ಕೃತಿಯನ್ನು ಮುಂದುವರೆಸಬೇಕು ಎಂದು ಆಶಿಸಿದರು.

**ರಾಷ್ಟ್ರೀಯ ಪ್ರಶಸ್ತಿ ಲಭಿಸಲಿ:** ಇದೇ ವೇಳೆ ದಿ ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕ ಸಂಸ್ಥೆಯ ಅಧ್ಯಕ್ಷೆ ಮಂಗಳಾ ನರಸಿಂಹನ್ ಅವರು ವಿಶೇಷ ಪ್ರದರ್ಶನ ವಿಭಾಗವನ್ನು ಉದ್ಘಾಟಿಸಿ, ರಾಮ್‌ಸನ್ಸ್ ಬೊಂಬೆ ಮನೆಗೆ ಭೇಟಿ ನೀಡಿದರೆ ಕರಕುಶಲ ಕಲೆಯ ಜೀವಂತಿಕೆ ಅರಿವಿಗೆ ಬರುತ್ತದೆ. ಈ ನೆಲದ ಪಾರಂಪರಿಕ ಆಚರಣೆಗಳನ್ನು ಅನಿವಾಸಿ ಭಾರತೀಯರೇ ಹೆಚ್ಚಾಗಿ ಅನುಸರಿಸುತ್ತಿದ್ದಾರೆ. ಬೊಂಬೆ ಮನೆಗೆ ಭೇಟಿ ನೀಡಿದರೆ ಖಂಡಿತವಾಗಿ ಪ್ರಭಾವಿತರಾಗುತ್ತೀರಿ. ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ಈ ಸಂಸ್ಥೆಗೆ ರಾಷ್ಟ್ರೀಯ ಪ್ರಶಸ್ತಿ ಗೌರವ ಸಂದಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ರಾಮ್‌ಸನ್ಸ್ ಸಂಸ್ಥೆಯ ಮಾಲೀಕ ಆರ್.ಜಿ.ಸಿಂಗ್, ಬೊಂಬೆ ಡಿಸೈನರ್ ಹಾಗೂ ಕ್ಯೂರೇಟರ್ ರಘು ಧರ್ಮೇಂದ್ರ ಮತ್ತಿತರರು ಉಪಸ್ಥಿತರಿದ್ದರು.

**ವಿವಿಧ ರಾಜ್ಯಗಳ ಬೊಂಬೆಗಳು:** ಹಿಂದೆ ಹಿರಿಯರು ತೀರ್ಥಯಾತ್ರೆಗೆ ಹೋದಾಗ ಮದುರೈ, ತಿರುಚ್ಚಿ, ಕೊಲ್ಹಾಪುರ ಸೇರಿದಂತೆ ವಿವಿಧೆಡೆಯಿಂದ ಬೊಂಬೆಗಳನ್ನು ತಂದು ನವರಾತ್ರಿಯಲ್ಲಿ ಮೆಟ್ಟಿಲಿನ ಮೇಲಿಟ್ಟು, ಆರತಿ ಮಾಡಿ ನೆರೆಹೊರೆಯವರಿಗೆ ಬೊಂಬೆ ಬಾಗಿನ ನೀಡುವ ಆಚರಣೆ ಇತ್ತು. ಆದರೆ ಈಗ ಸ್ಥಳೀಯವಾಗಿ ಲಭ್ಯವಾಗುವ ಬೊಂಬೆಗಳನ್ನು ಕೂರಿಸಿ ಪೂಜಿಸಲಾಗುತ್ತದೆ. ಆದರೆ ರಾಮ್‌ಸನ್ಸ್ ಬೊಂಬೆ ಮನೆಯಲ್ಲಿ ವಿವಿಧ ರಾಜ್ಯಗಳ ವೈವಿಧ್ಯಮಯ ಬೊಂಬೆಗಳಿವೆ. ಒರಿಸ್ಸಾ ಬೊಂಬೆಗಳು, ಪಶ್ಚಿಮ ಬಂಗಾಳದಲ್ಲಿ ಬಟ್ಟೆಯಿಂದ ತಯಾರಿಸಿರುವ ಬೊಂಬೆಗಳು(ಸ್ಟಫ್ಡ್ ಡಾಲ್), ಪೇಪರ್ ಮೆಶ್‌ನಿಂದ ತಯಾರಿಸಿದ ತಮಿಳುನಾಡಿನ ಬೊಂಬೆಗಳು, ಮಹಾರಾಷ್ಟ್ರದ ಪಿಓಪಿ ಬೊಂಬೆಗಳು, ಒರಿಸ್ಸಾ ಪುರಿ ಜಗನ್ನಾಥನ ರಥಯಾತ್ರೆ ಮಾದರಿ, ಪಂಡರಾಪುರಿ ವಿಠಲ ಮೂರ್ತಿ ಹೀಗೆ ವಿವಿಧ ರಾಜ್ಯಗಳ ಬೊಂಬೆಗಳು ಅತ್ಯಾಕರ್ಷಕವಾಗಿವೆ.

**ನವರಸ ಬೊಂಬೆ:** ಶೃಂಗಾರ, ಹಾಸ್ಯ, ಕರುಣಾ, ರೌದ್ರ, ವೀರ, ಭಯಾನಕ, ಭೀಬತ್ಸ, ಅದ್ಭುತ ಹಾಗೂ ಶಾಂತ, ಈ ನವರಸಗಳನ್ನು ಬಿಂಬಿಸುವಂತಹ ನವರಸ ಬೊಂಬೆಗಳು ಈ ಬಾರಿ ವಿಶೇಷವಾಗಿವೆ. ಒಂದೊಂದು ಬೊಂಬೆಯಲ್ಲೂ ಒಂದೊಂದು ರಸ ಕಾಣುವುದು ಡಿಸೈನರ್ ರಘು ಧರ್ಮೇಂದ್ರ ಅವರ ಪ್ರಾವಿಣ್ಯತೆಗೆ ಸಾಕ್ಷಿಯಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್, ಜಯಚಾಮರಾಜೇಂದ್ರ ಒಡೆಯರ್, ಶ್ರೀಕಂಠದತ್ತ ಚಾಮರಾಜ ಒಡೆಯರ್ ಹಾಗೂ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಪಿಓಪಿ ಪುಟ್ಟ ಬೊಂಬೆಗಳು ಅತ್ಯಾಕರ್ಷವಾಗಿವೆ. ಒಟ್ಟಾರೆ ದೇವರುಗಳು, ಮಹಾನ್ ಸಾಧಕರು, ಪೌರಾಣಿಕ ಸನ್ನಿವೇಶಗಳನ್ನು ಪ್ರತಿಬಿಂಬಿಸುವ ಬೊಂಬೆಗಳು ಸೇರಿದಂತೆ ಬಗೆ ಬಗೆಯ ಬೊಂಬೆಗಳು ಕಣ್ಮನ ಸೆಳೆಯುತ್ತವೆ.

**ಪ್ರದರ್ಶನ ಮತ್ತು ಮಾರಾಟ**

ಕಳೆದ 19 ವರ್ಷಗಳಿಂದ ಬೊಂಬೆ ಕಲೆಯನ್ನು ಜೀವಂತವಾಗಿರಿಸಿರುವ ರಾಮ್‌ಸನ್ಸ್ ಬೊಂಬೆ ಮನೆಗೆ ಸೆ.16ರಿಂದ ವರ್ಷವಿಡೀ ನಿತ್ಯ ಬೆಳಗ್ಗೆ 10ರಿಂದ ಸಂಜೆ 7ರವರೆಗೆ ಭೇಟಿ ನೀಡಿ, ವೀಕ್ಷಿಸಬಹುದು. ಜೊತೆಗೆ ತಮಗಿಷ್ಟವಾದ ಬೊಂಬೆಗಳನ್ನು ಕೊಳ್ಳಬಹುದು.



ಮೈಸೂರಿನ ರಾಮ್‌ಸನ್ಸ್ ಬೊಂಬೆ ಮನೆಯಲ್ಲಿ ಏರ್ಪಡಿಸಿರುವ 'ಬೊಂಬೆ ಮನೆ–2023' ಪ್ರದರ್ಶನ ಮತ್ತು ಮಾರಾಟಕ್ಕೆ ಚಾಲನೆ ನೀಡಿದ ಪ್ರಖ್ಯಾತ ಚಿತ್ರ ಕಲಾವಿದೆ ಪ್ರೊ.ಎಂ.ಜೆ.ಕಮಲಾಕ್ಷಿ, ಗಣಪತಿ ವಿಗ್ರಹ ವೀಕ್ಷಿಸುತ್ತಿರುವುದು. ದಿ ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕ ಸಂಸ್ಥೆಯ ಅಧ್ಯಕ್ಷೆ ಮಂಗಳಾ ನರಸಿಂಹನ್, ರಾಮ್‌ಸನ್ಸ್ ಸಂಸ್ಥೆಯ ಮಾಲೀಕ ಆರ್.ಜಿ.ಸಿಂಗ್, ಬೊಂಬೆ ಡಿಸೈನರ್ ರಘು ಧರ್ಮೇಂದ್ರ ಮತ್ತಿತರರಿದ್ದರು.









## ನಕ್ಕರೆ ಅದೇ ಸ್ವರ್ಗ

ಖಾಸಗಿ ಶಾಲೆಯ ವಿದ್ಯಾರ್ಥಿ : "ನನ್ನನ್ನು ಶಾಲೆಗೆ ಕರೆದುಕೊಂಡು ಹೋಗಲು ಸ್ಕೂಲ್ ವ್ಯಾನ್ ಬರುತ್ತದೆ ಗೊತ್ತಾ?"
ಸರಕಾರಿ ಶಾಲೆಯ ವಿದ್ಯಾರ್ಥಿ : "ನನ್ನನ್ನು ಶಾಲೆಗೆ ಕರೆದುಕೊಂಡು ಹೋಗಲು ಹೆಡ್ ಮಾಸ್ಟರೇ ಮನೆಗೆ ಹುಡುಕಿಕೊಂಡು ಬರುತ್ತಾರೆ ಗೊತ್ತಾ?!"


ಮೈಸೂರು ಮಿತ್ರ

ಶನಿವಾರ, 16 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*


**ಅಮೃತವಾಹಿನಿ..........**

ಒಬ್ಬ ಒಳ್ಳೆಯ ವ್ಯಕ್ತಿಗೆ ಮೋಸ ಮಾಡುವುದು ಎಂದರೆ ಕೈಯ್ಯಲ್ಲಿರುವ ವಜ್ರವನ್ನು ಎಸೆದು ಕಲ್ಲನ್ನು ಎತ್ತಿಕೊಂಡಂತೆ. – ಡಾ.ಎಪಿಜೆ ಅಬ್ದುಲ್ ಕಲಾಂ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಿತ್ತಲ ಗಿಡ ಮದ್ದಲ್ಲ

## ನಿಮ್ಮ ಪತ್ರಗಳು

### ಕಾವೇರಿ ವಿವಾದ : ಹಳೇ ಒಪ್ಪಂದ ಕೈಬಿಟ್ಟು, ಮರು ಒಪ್ಪಂದ ಮಾಡಿಕೊಂಡರೆ ಒಳಿತು

ಮಾನ್ಯರೆ,

ತಮಿಳುನಾಡಿಗೆ ನಮ್ಮ ಕಾವೇರಿ ನದಿಯಿಂದ ನೀರು ಬಿಡುವ ವಿಚಾರವೇ ಇರಲಿ, ರಾಜ್ಯದ ಸರ್ವತೋಮುಖ ಅಭಿವೃದ್ಧಿಯ ವಿಷಯವೇ ಇರಲಿ ಸಂಸದರಾದ ಪ್ರತಾಪಸಿಂಹ ಅವರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರೇ ಮುಂದಿನ ಚುನಾವಣೆಯಲ್ಲಿ ಮತ್ತೆ ಮೈಸೂರಿನ ಸಂಸದ ಸ್ಥಾನಕ್ಕೆ ಸ್ಪರ್ಧಿಸಲಿ ಎಂಬುದು ಬಹು ಜನರ ಅಭಿಲಾಷೆ.

ಕಾವೇರಿ ನೀರು ಬಿಡುವ ವಿಚಾರದಲ್ಲಿ ಪ್ರತಾಪ್ ಸಿಂಹ ಉತ್ತಮ ನಿರ್ಧಾರ ಪ್ರಕಟಿಸಿದ್ದಾರೆ. ರಾಜ್ಯ ಸರ್ಕಾರ ಕಾವೇರಿ ವಿಚಾರದಲ್ಲಿ ಉತ್ತಮ ಹಾಗೂ ಸರಿಯಾದ ನಿಲುವನ್ನು ತೆಗೆದುಕೊಂಡಿದ್ದು, ರಾಜ್ಯ ಸರ್ಕಾರ ಯಾವುದೇ ನಿರ್ಧಾರ ತೆಗೆದುಕೊಂಡರೂ ಅದಕ್ಕೆ ಬದ್ಧ. 2018ರಲ್ಲೇ ಸುಪ್ರಿಂ ಕೋರ್ಟ್ ಕಾವೇರಿ ನೀರು ಹಂಚಿಕೆಯ ವಿಚಾರದಲ್ಲಿ ಅಂತಿಮ ತೀರ್ಪು ನೀಡಿರುವುದರಿಂದ ಈ ವಿಷಯದಲ್ಲಿ ಪ್ರಧಾನಿ ನರೇಂದ್ರಮೋದಿ ಅವರನ್ನು ಎಳೆದು ತಂದು ರಾಜಕೀಯ ಮಾಡುವುದು ಬೇಡ ಎಂದು ಸತ್ಯದ ನುಡಿಗಳನ್ನು ಅವರು ಹೇಳಿದ್ದಾರೆ.

ಒಂದಕ್ಕಾದರೆ ಕೇಂದ್ರದ ಸಹಾಯಬೇಕು. ಇನ್ನೊಂದಕ್ಕಾದರೆ ಬೇಡ ಎನ್ನುವ ರಾಜ್ಯದ ಮುಖ್ಯಮಂತ್ರಿಗಳ ನಿಲುವು ಅದೆಷ್ಟು ಸರಿ. ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಬಿಡಲಾಗದು. ಪ್ರಧಾನಿಗಳ ಬಳಿಗೆ ಸರ್ವ ಪಕ್ಷ ನಿಯೋಗವನ್ನು ಕರೆದೊಯ್ಯುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಉಭಯ ರಾಜ್ಯದವರನ್ನೂ ಕರೆದು ಪ್ರಧಾನಿ ಮೋದಿಯವರು ಚರ್ಚೆ ಮಾಡುವರೇ? ಅಥವಾ ಕರ್ನಾಟಕ ಮಾತ್ರ ಇಲ್ಲಿನ ಪರಿಸ್ಥಿತಿಯನ್ನು ಪ್ರಧಾನಿ ಮೋದಿಯವರಿಗೆ ತಿಳಿಸುವುದಾ? ಎಂಬುದರ ಬಗ್ಗೆ ಕ್ಲಾರಿಟಿ ಇಲ್ಲ ಎಂದು ಮಂಡ್ಯ ಸಂಸದೆ ಹೇಳಿರುವುದು ಸರಿಯಾಗಿಯೇ ಇದೆ. ವಸ್ತು ಸ್ಥಿತಿ ವಿವರಿಸಿ ಪ್ರಧಾನಿ ಮೋದಿ ಅವರಿಗೆ ಮತ್ತೊಮ್ಮೆ ಪತ್ರ ಬರೆಯುವುದಾಗಿ ಹೇಳಿದ್ದಾರೆ. ಆದಷ್ಟು ಬೇಗ ಈ ಪತ್ರವನ್ನು ಬರೆಯಲಿ. ಒಟ್ಟಿನಲ್ಲಿ ಆದಷ್ಟು ಬೇಗ ಈ ಬಿಕ್ಕಟ್ಟು ಬಗೆಹರಿಯಲಿ. ಮಳೆಯಾದರೆ ಯಾವುದೇ ತೊಂದರೆ ಆಗುವುದಿಲ್ಲ. ಎರಡು ರಾಜ್ಯಗಳೂ ಹಳೆಯದಾದ ಒಪ್ಪಂದವನ್ನು ಕೈಬಿಟ್ಟು ಈಗಿನ ಪರಿಸ್ಥಿತಿಗೆ ತಕ್ಕಂತೆ, ತಜ್ಞರೊಡನೆ ಪರಿಶೀಲಿಸಿ ಮರು ಒಪ್ಪಂದವನ್ನು ಮಾಡಿಕೊಳ್ಳುವುದು ಒಳ್ಳೆಯದು.

–ಬೇಲೂರು ದ.ಶಂ. ಪ್ರಕಾಶ್. ಮೈಸೂರು

### ಕುಲಪತಿಗಳ ಆಯ್ಕೆ ಪಾರದರ್ಶಕವಾಗಿರಲಿ

ಮಾನ್ಯರೆ,

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರ ನೇಮಕಾತಿಯನ್ನು ರಾಜ್ಯ ಹೈಕೋರ್ಟಿನ ನ್ಯಾಯಮೂರ್ತಿ ಎನ್.ಎಸ್.ಸಂಜಯ್ ಗೌಡ ನೇತೃತ್ವದ ಏಕ ಸದಸ್ಯ ಪೀಠ ರದ್ದುಪಡಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಅವರ ಆಯ್ಕೆಯನ್ನು ಪ್ರಶ್ನಿಸಿ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಆ ಹುದ್ದೆಯ ಆಕಾಂಕ್ಷಿಗಳಲ್ಲಿ ಒಬ್ಬರಾಗಿದ್ದ ಪ್ರೊ. ಶರತ್ ಅನಂತಮೂರ್ತಿ ಆಕ್ಷೇಪಣಾ ಅರ್ಜಿಯನ್ನು ಸಲ್ಲಿಸಿದ್ದರು. ಅದನ್ನು ಪುರಸ್ಕರಿಸಿರುವ ಹೈಕೋರ್ಟ್, ನೂತನ ಕುಲಪತಿ ಆಯ್ಕೆಗೆ ಹೊಸದಾಗಿ ಪ್ರಕ್ರಿಯೆ ಪ್ರಾರಂಭಿಸುವಂತೆ ರಾಜ್ಯ ಸರ್ಕಾರಕ್ಕೆ ಆದೇಶ ನೀಡಿದೆ. ಕುಲಪತಿಯ ಆಯ್ಕೆಯಲ್ಲಿ ನಿಯಮಗಳನ್ನು ಅನುಸರಿಸಲಾಗಿಲ್ಲ ಎಂದು ದೂರಿದ್ದ ಪ್ರೊ.ಶರತ್ ಅನಂತಮೂರ್ತಿ, ಆಯ್ಕೆ ಸಮಿತಿಯಲ್ಲಿ ಇಲ್ಲದಿದ್ದ ವ್ಯಕ್ತಿಯನ್ನು ಕುಲಪತಿಯನ್ನಾಗಿ ನೇಮಿಸುವ ಮೂಲಕ ಯುಜಿಸಿ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಿದ್ದರು.

ದೇಶದ ಹಲವಾರು ರಾಜ್ಯಗಳಲ್ಲಿ ಕುಲಪತಿಗಳ ನೇಮಕಾತಿ ವಿಚಾರದಲ್ಲಿ ಆಗಿಂದಾಗ್ಗೆ ಗೊಂದಲ ಉಂಟಾಗುತ್ತಿದೆ. ಇತ್ತೀಚೆಗೆ ಕೇರಳ ರಾಜ್ಯಪಾಲರಿಗಿದ್ದ ಕುಲಪತಿಗಳನ್ನು ನೇಮಕ ಮಾಡುವ ಅಧಿಕಾರವನ್ನು ಹಿಂಪಡೆದು ಆ ಅಧಿಕಾರವನ್ನು ರಾಜ್ಯ ಸರ್ಕಾರವೇ ಚಲಾಯಿಸುತ್ತಿದೆ. ವಿಶ್ವವಿದ್ಯಾನಿಲಯಗಳ ಕುಲಾಧಿಪತಿ ರಾಜ್ಯಪಾಲರೇ ಆಗಿರುವುದರಿಂದ, ಹಿಂದೆಲ್ಲಾ ಅವರೇ ನೇರವಾಗಿ ಕುಲಪತಿಗಳನ್ನು ಆಯ್ಕೆ ಮಾಡುತ್ತಿದ್ದರು. ಆದರೆ ಕೆಲವು ರಾಜ್ಯಗಳು ರಾಜ್ಯಪಾಲರ ಈ ವಿಶೇಷಾಧಿಕಾರವನ್ನು ಮೊಟಕುಗೊಳಿಸಿವೆ. ನಮ್ಮ ರಾಜ್ಯದ ಬಗ್ಗೆ ಹೇಳುವುದಾದರೆ, ಕುಲಪತಿಗಳನ್ನು ಆಯ್ಕೆ ಮಾಡಲು ಒಂದು ಸಮಿತಿ ರಚಿಸಲಾಗುತ್ತದೆ ಹಾಗೂ ಇದರಲ್ಲಿ ಒಬ್ಬ ರಾಜ್ಯ ಸರ್ಕಾರದ ಪ್ರತಿನಿಧಿ, ಹಾಗೂ ಮತ್ತೊಬ್ಬರು ರಾಜ್ಯಪಾಲರ ಪ್ರತಿನಿಧಿ ಸೇರಿದಂತೆ, ಮೂವರು ಸದಸ್ಯರಿದ್ದು, ಇವರು ಒಮ್ಮತದಿಂದ ಶಿಫಾರಸ್ಸು ಮಾಡುವ ಅಭ್ಯರ್ಥಿಯನ್ನು ರಾಜ್ಯಪಾಲರು ಕುಲಪತಿಯಾಗಿ ನೇಮಿಸುವ ಸಂಪ್ರದಾಯವಿದೆ. ಈಗಲೂ ಸಹ ಇದೇ ಪದ್ಧತಿ ಜಾರಿಯಲ್ಲಿದೆ. ವಿಷಾದಕರ ಸಂಗತಿಯೆಂದರೆ, ಕುಲಪತಿಗಳ ನೇಮಕಾತಿಯಲ್ಲಿ ಸಹ ದೊಡ್ಡ ಮಟ್ಟದಲ್ಲಿ ಭ್ರಷ್ಟಾಚಾರ ನಡೆಯುತ್ತದೆ ಎಂದು ಈ ಹಿಂದೆ ಸಂಸದರೊಬ್ಬರು ಆರೋಪಿಸಿದ್ದರು. ಹಲವಾರು ಕುಲಪತಿಗಳ ವಿರುದ್ಧ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಧಿಕಾರ ದುರ್ಬಳಕೆ, ಮುಂತಾದ ಆರೋಪಗಳು ಆಗಿಂದಾಗ್ಗೆ ಕೇಳಿ ಬರುತ್ತವೆ.

ನಮ್ಮ ರಾಜ್ಯದಲ್ಲಿ ಜಿಲ್ಲೆಗೊಂದು ವಿಶ್ವವಿದ್ಯಾನಿಲಯ ಸ್ಥಾಪಿಸುವ ಒಂದು ಅವೈಜ್ಞಾನಿಕ ನಿರ್ಧಾರವನ್ನು ಹಿಂದಿನ ಬಿಜೆಪಿ ಸರ್ಕಾರ ಕೈಗೊಂಡಿತ್ತು. ಅದರ ಪ್ರಕಾರ ಪ್ರತಿಯೊಂದು ಜಿಲ್ಲೆಯಲ್ಲೂ ವಿಶ್ವವಿದ್ಯಾನಿಲಯ ಸ್ಥಾಪಿತವಾಗುತ್ತದೆ. ಆದರೆ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಮೂಲಭೂತ ಸೌಕರ್ಯಗಳೇ ಇಲ್ಲ. ಎಷ್ಟೋ ವಿವಿಗಳಲ್ಲಿ ಖಾಯಂ ನೌಕರರಿಲ್ಲದೇ ಹಂಗಾಮಿ ನೌಕರರೇ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರತಿಯೊಂದು ವಿವಿಗೂ ಅದರದ್ದೇ ಆದ ಸಮಸ್ಯೆಗಳಿವೆ. ಇವುಗಳಿಗೆಲ್ಲಾ ಪರಿಹಾರ ಹುಡುಕಬೇಕಾದವರು ಅದರ ಸಾರಥಿ ಕುಲಪತಿಗಳೇ. ಅವರು ವಿಶ್ವವಿದ್ಯಾನಿಲಯದ ರಿಂಗ್ ಮಾಸ್ಟರ್ ಇದ್ದ ಹಾಗೆ. ಅವರು ವಿಶ್ವವಿದ್ಯಾನಿಲಯವನ್ನು ಉನ್ನತ ಮಟ್ಟಕ್ಕೆ ಏರಿಸುವ ಜವಾಬ್ದಾರಿ ಹೊಂದಿರುವುದರ ಜೊತೆಗೆ ಸ್ವಚ್ಛ ಹಾಗೂ ಪಾರದರ್ಶಕ ಆಡಳಿತ ಮತ್ತು ವಿದ್ಯಾರ್ಥಿ ಸ್ನೇಹಿ ದೃಷ್ಟಿಕೋನವನ್ನು ಹೊಂದಿರಬೇಕಾಗುತ್ತದೆ. ಇನ್ನು ಮುಂದಾದರೂ, ಈ ಹುದ್ದೆಯ ನೇಮಕಾತಿಯಲ್ಲಿ ರಾಜ್ಯ ಸರ್ಕಾರ ಎಚ್ಚರಿಕೆಯ ನಡೆ ಇಡುವಂತಾಗಲಿ.


–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

### ರಾಜ್ಯದಲ್ಲಿ ಬರವಿದೆ, ಅದ್ದೂರಿ ದಸರಾ ಬೇಡ

ಮಾನ್ಯರೆ,

ರಾಜ್ಯದಲ್ಲಿ ವಾಡಿಕೆಯಷ್ಟು ಮಳೆಯಾಗದ ಕಾರಣ ರಾಜ್ಯ ಸರ್ಕಾರ 195 ತಾಲೂಕುಗಳನ್ನು ಬರ ಪೀಡಿತ ತಾಲೂಕುಗಳು ಎಂದು ಘೋಷಿಸಿದೆ. ಏತನ್ಮಧ್ಯೆ ಈ ಬಾರಿ ನಾಡಹಬ್ಬ ದಸರಾವನ್ನು ಅದ್ದೂರಿಯಾಗಿ ಆಚರಿಸಲು ಸರ್ಕಾರ ನಿರ್ಧಾರ ಮಾಡಿದೆ. ಬರ ಪರಿಹಾರ ನೀಡುವ ದೊಡ್ಡ ಸವಾಲು ರಾಜ್ಯ ಸರ್ಕಾರದ ಮುಂದಿದ್ದು, ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸುವ ಜವಾಬ್ದಾರಿ ಸರ್ಕಾರದ ಮುಂದಿದೆ. ಈ ಹಿನ್ನೆಲೆಯಲ್ಲಿ ಈ ಬಾರಿಯ ದಸರಾ ಆಚರಣೆಯನ್ನು ಮೈಸೂರು ಅರಮನೆಗೆ ಸೀಮಿತಗೊಳಿಸಿ, ಸಾಂಪ್ರದಾಯಿಕ ಹಾಗೂ ಸರಳವಾಗಿ ಆಚರಿಸಿದರೆ ಒಳ್ಳೆಯದು. ದಸರಾ ಆಚರಣೆಗೆ ಖರ್ಚು ಮಾಡುವ ಮೊತ್ತವನ್ನು ಬರ ಪೀಡಿತ ಪರಿಹಾರಕ್ಕೆ ವಿನಿಯೋಗಿಸಿದರೆ ಉತ್ತಮ.

–ಜಿ.ಎಂ.ಪ್ರಸಾದ್, ಮೈಸೂರು.




ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000


ಚಿಂತನೆ

# ಪಾಲಿಗೆ ಬಂದದ್ದು ಪಂಚಾಮೃತ !

> "ನಾವು ಜೀವನವನ್ನು, ಅಂದರೆ ಆ ಕೆಲಸವನ್ನು ಹೇಗೆ ಸ್ವೀಕರಿಸುತ್ತೇವೆ? ಎಂಬುದರ ಮೇಲೆ ಮುಂದಿನ ಜೀವನ ಅವಲಂಬಿತವಾಗುತ್ತದೆ. ಜೀವನ ಮಾಡಬೇಕು ಎಂದಾದಾಗ ಯಾವುದಾದರೂ ಕೆಲಸ ಮಾಡಲೇಬೇಕು. ಅದು ಇಷ್ಟವಾಗಿರಲಿ, ಕಷ್ಟವಾಗಿರಲಿ. ಎಲ್ಲರಿಗೂ ಅವರು ಅಪೇಕ್ಷೆಪಟ್ಟಂತಹ ಉದ್ಯೋಗ ಸಿಗುವುದಿಲ್ಲ. ಆದರೆ ಸಿಕ್ಕ ಅವಕಾಶವನ್ನು ಹೇಗೆ ಬಳಸಿಕೊಳ್ಳುತ್ತಾರೆ ಎಂಬುದರ ಮೇಲೆ ಜೀವನ ನಿರ್ಧಾರವಾಗುತ್ತದೆ.

ನಮ್ಮ ಜೀವನ ನಮ್ಮದು ಎಂಬುದು ನಿಜವಾದರೂ, ಅದರ ನಿರ್ವಹಣೆಯ ಹೊಣೆಯೂ ನಮ್ಮದೇ ಆಗಿರುತ್ತದೆ. ನಾವು ಜೀವನದಲ್ಲಿ ಏನಾಗಬೇಕು ಎಂದು ಮೊದಲು ನಿರ್ಧರಿಸಿಕೊಂಡು ಅದಕ್ಕೆ ತಕ್ಕಂತೆ ಜೀವನ ರೂಪಿಸಿಕೊಳ್ಳಬೇಕು. ಸಾಮಾನ್ಯವಾಗಿ ನಗರ ಪ್ರದೇಶದಲ್ಲಿನ ಶಾಲೆಗಳ ಮಕ್ಕಳನ್ನು, ನೀವು ಮುಂದೆ ಏನಾಗಬೇಕೆಂದಿದ್ದೀರಿ? ಎಂದು ಪ್ರಶ್ನಿಸಿದರೆ ಅವರು ಸಾಮಾನ್ಯವಾಗಿ ಇಂಜಿನಿಯರ್, ಡಾಕ್ಟರ್ ಎಂದೇ ಉತ್ತರಿಸುತ್ತಾರೆ. ಅದೇ ಗ್ರಾಮೀಣ ಪ್ರದೇಶಗಳ ಮಕ್ಕಳಿಗೆ ಬೇಟಿಯಾಗಿ ಇದೇ ಪ್ರಶ್ನೆಯನ್ನು ಕೇಳಿದರೆ ಅವರು ಶಾಲಾ ಶಿಕ್ಷಕ ಆಗಬೇಕು, ಅಧಿಕಾರಿಯಾಗಬೇಕು ಎಂದು ಹೇಳುತ್ತಾರೆ. ಎಲ್ಲೋ ಕೆಲವು ಮಕ್ಕಳು ಮಾತ್ರ ತಾವು ವಿಜ್ಞಾನಿಯಾಗಬೇಕು, ಸಂಶೋಧಕನಾಗಬೇಕು ಎಂದು ಉತ್ತರಿಸಬಹುದು. ಇದು ಏಕೆ ಹೀಗೆ ಎಂದರೆ ಅವರು ತಮ್ಮ ಸುತ್ತಾ ಯಾರು ಇರುತ್ತಾರೋ ಅವರಂತೆ ಅಥವಾ ತಮ್ಮ ತಂದೆ–ತಾಯಿಯರು ಯಾರ ಬಗ್ಗೆ ಹೆಚ್ಚು ಅಭಿಮಾನದಿಂದ ಮಾತನಾಡುತ್ತಾರೆಯೋ ಅವರಂತೆ ಆಗಬೇಕೆಂದು ಬಯಸುತ್ತಾರೆ. ಏಕೆಂದರೆ ತಂದೆ–ತಾಯಿಯರು ಯಾರನ್ನಾದರೂ ಅವರ ಉದ್ಯೋಗದ ಕಾರಣಕ್ಕಾಗಿ ಹೊಗಳಿ ಮಾತನಾಡಿದಾಗ, ತಾವೂ ಹಾಗೇ ಆದರೆ ಒಳ್ಳೆಯದು ಎಂದು ಯೋಚಿಸಿ, ಅದರಂತೆ ನೀನು ಏನಾಗಬೇಕು? ಎಂದರೆ ಮೇಲ್ಕಂಡಂತೆ ಉತ್ತರವನ್ನು ನೀಡುತ್ತಾರೆ.

ಕೆಲ ವರ್ಷಗಳ ನಂತರ, ಅಂದರೆ ಅವರಿಗೆ ಸ್ವಲ್ಪ ಜವಾಬ್ದಾರಿ ಬಂದ ನಂತರ ಇದೇ ಪ್ರಶ್ನೆ ಕೇಳಿದರೆ ಅವರು ಮೊದಲು ತಾನು ಏನಾಗಬೇಕು ಎಂದು ಹೇಳಿದ್ದರೋ, ಅದನ್ನು ಹೇಳದೆ ತಾನು ಇನ್ನೇನೋ ಆಗಬೇಕು ಎಂದು ಹೇಳುತ್ತಾರೆ. ಇದಕ್ಕೆ ಅವರ ಅನುಭವ ಹಾಗೂ ಅವರಿಗೆ ಸಿಕ್ಕ ಸ್ನೇಹಿತರ ಅಭಿಪ್ರಾಯಗಳು ಕಾರಣವಾಗಿರುತ್ತವೆ. ಅದೇ ಒಂದು ಹಂತದ ವಿದ್ಯಾಭ್ಯಾಸದ ನಂತರ ಅವರು ಏನಾಗಬೇಕು ಎಂದುಕೊಂಡಿದ್ದರೋ, ಅದಾಗದೇ ಅನೇಕರು ಮುಂದೆ ಬೇರೆ ರೀತಿಯ ವಿದ್ಯಾಭ್ಯಾಸಕ್ಕೆ ಸೇರಬೇಕಾಗುತ್ತದೆ. ಇದಕ್ಕೆ ಕಾರಣ ಅವರು ಹಿಂದಿನ ಪರೀಕ್ಷೆಯಲ್ಲಿ ಅಪೇಕ್ಷಿಸಿದಷ್ಟು ಅಂಕ ಸಿಗದಿರುವುದು ಅಥವಾ ತಂದೆ ತಾಯಿ ತಾವು ಇಷ್ಟಪಟ್ಟ ಕೋರ್ಸ್‌ನಲ್ಲೇ ಮುಂದುವರೆಯಬೇಕು ಎಂದು ಮಕ್ಕಳನ್ನು ಒತ್ತಾಯಿಸಿರುವುದು ಕಾರಣವಾಗಿರಬಹುದು. ವಿದ್ಯಾರ್ಥಿಗೆ ಆ ಕೋರ್ಸ್ ಇಷ್ಟವಾದರೆ ಸರಿ ಮುಂದುವರೆಯಬಹುದು. ಆದರೆ ಅದು ಅವನಿಗೆ ಇಷ್ಟವಾಗದು ಎಂದಾದಾಗ ಅವನಲ್ಲಿ ವಿಮುಖತೆ ಹೆಚ್ಚಾಗಿ ಓದಿನಲ್ಲಿ ನಿರಾಸಕ್ತಿ ಕಂಡುಬರಬಹುದು.

ಹೀಗೆ ಜೀವನ ನಾವು ಎಣಿಸಿದಂತೆಯೇ ನಡೆಯುತ್ತದೆ ಎಂದೇನಿಲ್ಲ. ಒಮ್ಮೆ ಹೀಗೇ ಇರಬೇಕು ಎಂದುಕೊಂಡಿದ್ದು ಆಗದಿರಬಹುದು. ಪರಿಸ್ಥಿತಿ ಕೊನೆಗೆ ತಾನು ಮೊದಲಿನಿಂದಲೂ ಇಷ್ಟಪಡದೆ ಇದ್ದಂತಹ ಕೆಲಸಕ್ಕೆ ಸೇರಬೇಕಾಗಬಹುದು. ಹಾಗಾದಾಗ ನಾವು ಜೀವನವನ್ನು, ಅಂದರೆ ಆ ಕೆಲಸವನ್ನು ಹೇಗೆ ಸ್ವೀಕರಿಸುತ್ತೇವೆ? ಎಂಬುದರ ಮೇಲೆ ಮುಂದಿನ ಜೀವನ ಅವಲಂಬಿತವಾಗುತ್ತದೆ. ಜೀವನ ಮಾಡಬೇಕು ಎಂದಾದಾಗ ಯಾವುದಾದರೂ ಕೆಲಸ ಮಾಡಲೇಬೇಕು. ಅದು ಇಷ್ಟವಾಗಿರಲಿ, ಕಷ್ಟವಾಗಿರಲಿ. ಎಲ್ಲರಿಗೂ ಅವರು ಅಪೇಕ್ಷೆಪಟ್ಟಂತಹ ಉದ್ಯೋಗ ಸಿಗುವುದಿಲ್ಲ.



ಆದರೆ ಸಿಕ್ಕ ಅವಕಾಶವನ್ನು ಹೇಗೆ ಬಳಸಿಕೊಳ್ಳುತ್ತಾರೆ ಎಂಬುದರ ಮೇಲೆ ಜೀವನ ನಿರ್ಧಾರವಾಗುತ್ತದೆ. ಇಲ್ಲಿ ಸ್ವಲ್ಪ ಹೊಂದಾಣಿಕೆಯ ಮನೋಭಾವವೂ ಬೇಕಾಗುತ್ತದೆ. ಅಲ್ಲದೆ ಯಾವುದೇ ಕೆಲಸವು ಕನಿಷ್ಠವಲ್ಲ ಎಂಬ ಭಾವನೆಯೂ ಬೇಕಾಗುತ್ತದೆ. ಅನೇಕ ಕೆಳಮಟ್ಟದ ಕೆಲಸಕ್ಕೆ ಸೇರಿದವರು, ನಂತರ ಛಲಬಿಡದೆ, ಬಿಡುವಿನ ಸಮಯದಲ್ಲಿ ಓದನ್ನು ಮುಂದುವರೆಸಿ ದೊಡ್ಡ ಹುದ್ದೆಗೆ ಏರಿದವರು ಸಾಕಷ್ಟು ಸಂಖ್ಯೆಯಲ್ಲಿ ನಮಗೆ ಕಾಣಸಿಗುತ್ತಾರೆ. ಬದಲಿಗೆ ನನ್ನ ಹಣೇಬರಹವೇ ಹೀಗೆ, ನಾನೂ ಏನೋ ಆಗಬೇಕೆಂದುಕೊಂಡಿದ್ದೆ, ಆದರೆ ಆಗಿದ್ದೇ ಬೇರೆ ಎಂದು ಖಿನ್ನ ಮನಸ್ಕರಾಗಿ ಕೊಟ್ಟ ಕೆಲಸವನ್ನೂ ಸರಿಯಾಗಿ ನಿರ್ವಹಿಸದೆ, ಯಾರಿಗೂ ಬೇಡದ ವ್ಯಕ್ತಿಯಾಗಿ ಬಿಡುವವರೂ ನಮಗೆ ಸಾಕಷ್ಟು ಜನ ಕಾಣಸಿಗುತ್ತಾರೆ. ಯಾವುದೇ ಕೆಲಸವಾಗಲೀ ಅದರಲ್ಲಿ ಮುಂದುವರೆಯುವುದು ಅನಿವಾರ್ಯ ಎಂದಾದಾಗ, ಅದನ್ನು ನಾವು ಪ್ರೀತಿ ಹಾಗೂ ವಿಶ್ವಾಸದಿಂದ ಸ್ವೀಕರಿಸಿ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಾ ಹೋಗಬೇಕು. ನಮ್ಮ ಅನುಭವ ಮಾಗಿದಂತೆ ನಾವು ಮಾಡುವ ಕೆಲಸ ಸಣ್ಣದಲ್ಲ, ಅದನ್ನೇ ನಾನು ಉತ್ತಮವಾಗಿ ನಿರ್ವಹಿಸುತ್ತೇನೆ ಎಂದುಕೊಂಡರೆ ಖಂಡಿತಾ ಅವರು ಜೀವನದಲ್ಲಿ ಯಶಸ್ವಿಯಾಗುತ್ತಾರೆ. ನನಗೆ ಇಂತಹುದೇ ಕೆಲಸ ಬೇಕು ಎಂದು ನಾವೇ ತೀರ್ಮಾನಿಸಿ ಅಂತಹ ಕೆಲಸಕ್ಕಾಗಿ ಕಾದರೆ, ಅದು ಸಿಗದೆ ಜೀವನದಲ್ಲಿ ಪರಿತಪಿಸಬೇಕಾಗುತ್ತದೆ.

ನನ್ನ ಸ್ನೇಹಿತರೊಬ್ಬರು ಹೀಗೇ ಗಣಿತ ಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ಮಾಡಿದರು. ಅದರಲ್ಲಿ ಅವರಿಗೆ ಪ್ರಥಮ ರ್‍ಯಾಂಕ್ ಸಹಾ ಬಂದಿತು. ಅವರಿಗೆ ರ್‍ಯಾಂಕ್ ಬಂದಿತು ಎಂದರೆ ಅವರು ಬುದ್ಧಿವಂತರೆಂದೇ ಅರ್ಥವಲ್ಲವೇ? ಆಗ ಅವರಿಗೆ ತಾನು ರ್‍ಯಾಂಕ್ ಗಳಿಸಿರುವುದರಿಂದ ತನಗೆ ದೊಡ್ಡ ಹುದ್ದೆಯೇ ಸಿಗಬೇಕು ಎಂದುಕೊಂಡು ಅರಸಿ ಬರುತ್ತಿದ್ದ ಎಲ್ಲಾ ಅವಕಾಶಗಳನ್ನೂ ಬಿಡುತ್ತಾ ಹೋದರು. ಯಾವುದೇ ಕೆಲಸ ಬಂದರೂ ಅದಕ್ಕಿಂತ ಉತ್ತಮ ಕೆಲಸ ನನಗೆ ಸಿಗಬೇಕು ಎಂದೇ ಅವರು ಭಾವಿಸುತ್ತಾ ಹೋದರು. ಕೊನೆಗೆ ವಯಸ್ಸಾಯಿತು, ಅವರು ಅಂದುಕೊಂಡ ಯಾವುದೇ ಉನ್ನತ ಕೆಲಸ ಅವರಿಗೆ ಸಿಗಲೇ ಇಲ್ಲ. ಕೊನೆಗೆ ಮನೆಮನೆಗೆ ಪತ್ರಿಕೆ ವಿತರಿಸುವ ಹಾಗೂ ಕೆಲ ಪ್ರಾಥಮಿಕ ಶಾಲಾಮಕ್ಕಳಿಗೆ ಮನೆ ಪಾಠ ಮಾಡುತ್ತಾ ಕಾಲ ಕಳೆಯಬೇಕಾಯಿತು. ಇದಕ್ಕೆ ಬದಲಾಗಿ ಮೊದಮೊದಲು ಬಂದಿದ್ದ ಕೆಲಸಕ್ಕೆ ಅವರು ಸೇರಿದ್ದರೆ, ಮುಂದೆ ಪದೋನ್ನತಿ ಹೊಂದಿ ಅವರು ಬಯಸಿದ್ದ ಉನ್ನತ ಹುದ್ದೆಯೂ ಸಿಗಬಹುದಾಗಿತ್ತು. ಇಂತಹ ಸಂದರ್ಭದಲ್ಲಿ ನಮ್ಮ ವಿವೇಕ ಕೆಲಸ ಮಾಡಬೇಕು. ಕೆಲಸ ಯಾವುದಾದರೇನು? ಅದನ್ನು ನಾವು ಹೇಗೆ ಮಾಡುತ್ತೇವೆ? ಎಂಬುದರ ಮೇಲೆಯೇ ನಮ್ಮ ವ್ಯಕ್ತಿತ್ವ ನಿರ್ಧಾರವಾಗುತ್ತದೆ. ಅದರಂತೆ ಜೀವನ ಸಾಗುತ್ತದೆ.

ಇತ್ತೀಚೆಗೆ ಒಂದು ಕಚೇರಿಯ ಮುಖ್ಯಸ್ಥರನ್ನು ಭೇಟಿಯಾಗುವ ಅವಕಾಶ ಲಭಿಸಿತ್ತು. ಅವರು ದೊಡ್ಡ ಹುದ್ದೆಯಲ್ಲಿದ್ದರು. ಅವರ ಕೆಳಗೆ ನೂರಾರು ಕೆಲಸಗಾರರಿದ್ದರು. ಒಂದಿಬ್ಬರಿಗೆ ಪದೋನ್ನತಿಯಾದರೆ ಅವರೂ ಇವರ ಹುದ್ದೆಗೆ ಅರ್ಹರಾಗುತ್ತಿದ್ದರು. ಅಂತಹ ಕೆಳಹಂತದ ಪತ್ರಾಂಕಿತ ಅಧಿಕಾರಿಗಳು ಇದ್ದರು. ಆದರೆ ಇವರು ಅನೇಕ ವೇಳೆ ಸಲಹೆ ತೆಗೆದುಕೊಳ್ಳುತ್ತಿದ್ದುದು ತಮ್ಮ ಆಪ್ತಸಹಾಯಕರಿಂದ. ಆ ಆಪ್ತಸಹಾಯಕರು ಒಂದು ಪದವಿಯನ್ನೂ ಪಡೆದವರಲ್ಲ. ಆದರೆ ತನಗೆ ಕೊಟ್ಟ ಕೆಲಸವನ್ನು ನಿಷ್ಠೆಯಿಂದ ಮಾಡಿಕೊಂಡು ಹೋಗುತ್ತಿದ್ದವರು. ಹಾಗಾಗಿ ಅವರ ಬಳಿ ಯಾವುದೇ ವಿಷಯದ ಬಗ್ಗೆ ಕೇಳಿದರೂ ಅವರು ನಿಖರವಾದ ಮಾಹಿತಿ ನೀಡುತ್ತಿದ್ದರು. ಇದರಿಂದಾಗಿ ಆ ಮುಖ್ಯಾಧಿಕಾರಿ ತನ್ನ ಆಪ್ತ ಸಹಾಯಕರನ್ನು ನಂಬಿ ಅವರ ಸಲಹೆ ಪಡೆಯುತ್ತಿದ್ದರು. ಇದು ಹೇಗೆ ಸಾಧ್ಯವಾಗುತ್ತದೆ? ಎಂದರೆ ಅದೇ ಉತ್ತರ ತನಗೆ ದೊರಕಿದ ಕೆಲಸವನ್ನು ಅವರು ನಿಷ್ಠೆಯಿಂದ ಮಾಡುತ್ತಿರುವುದರಿಂದ. ನನಗೆ ಆ ಹುದ್ದೆ ಬೇಕಾಗಿತ್ತು, ಈ ಹುದ್ದೆ ಬೇಕಾಗಿತ್ತು ಎಂದುಕೊಳ್ಳದೇ ಸಿಕ್ಕ ಹುದ್ದೆಯಲ್ಲಿ ಕೆಲಸ ಮಾಡಿದರೆ ಹೀಗೆ ಅವರು ಎಲ್ಲರಿಗೂ ಬೇಕಾಗುವವರಾಗುತ್ತಾರೆ.

ಇದು ಕೆಲಸಕ್ಕೆ ಸಂಬಂದಿಸಿದ್ದು. ಇನ್ನು ನಮ್ಮ ಜೀವನಕ್ಕೆ ಸಂಬಂಧಿಸಿದಂತೆಯೂ ನಾವು ನಮಗೆ ಬಂದಿದ್ದನ್ನು ಸ್ವೀಕರಿಸಿ, ಅದರಲ್ಲೇ ತೃಪ್ತಿ ಕಂಡರೆ ಜೀವನ ಯಶಸ್ವಿಯಾಗುತ್ತದೆ. ಅನೇಕರು ತಾವು ದುಡಿಯುತ್ತಿದ್ದಾಗ ಎಲ್ಲವೂ ತಾವು ಹೇಳಿದಂತೆ ನಡೆಯಬೇಕು ಎಂದು ಬಯಸಿ, ಹಾಗೇ ಜೀವನ ಮಾಡುತ್ತಿರುತ್ತಾರೆ. ಆದರೆ ಅವರು ವಯಸ್ಸಿನ ಕಾರಣದಿಂದ ನಿವೃತ್ತಿ ಪಡೆದ ನಂತರವೂ ತನ್ನ ಮನೆಯಲ್ಲಿ ತಾನು ಹೇಳಿದಂತೆ ನಡೆಯಬೇಕು ಎಂದು ಬಯಸಲಾಗುವುದಿಲ್ಲ. ಮಕ್ಕಳು ಬೆಳೆದಂತೆ ಅವರ ಆಸೆ ಆಕಾಂಕ್ಷೆಗಳು ಬೇರೆಯದ್ದೇ ಆಗಿರುತ್ತದೆ. ಅವರೂ ಸಂಪಾದನೆ ಮಾಡಲು ಪ್ರಾರಂಭಿಸಿದ ನಂತರ ಹಾಗೂ ಅವರು ಮದುವೆಯಾದ ನಂತರ ಅವರು ತಮ್ಮ ಇಷ್ಟದಂತೆ ಜೀವನ ನಡೆಸಲು ಬಯಸುವುದು ಸಹಜ. ಆಗ ನಾವು ಅವರಿಗೆ ಹಾಗೆ ಮಾಡಬೇಡ, ಹೀಗೆ ಮಾಡಬೇಡ ಎಂದು ಹೇಳುತ್ತಾ ಹೊರಟರೆ, ಪ್ರಾರಂಭದಲ್ಲಿ ಬೇಸರದಿಂದ ಕೇಳಿಸಿಕೊಂಡು ನಡೆಯುತ್ತಿದ್ದವರು, ಕ್ರಮೇಣ ನಮ್ಮನ್ನು ಕಡೆಗಣಿಸಲಾರಂಭಿಸುತ್ತಾರೆ. ಹಿರಿಯರು ಕೇವಲ ಸಲಹೆ ನೀಡುವವರು ಆಗಬೇಕೇ ವಿನಃ ಅವರು ಹಿಂದಿನಂತೆ ತಮ್ಮ ಗತ್ತು ತೋರಬಾರದು. ಹಾಗೇ ಆಗ್ರಹ ಪಡಿಸುತ್ತಾ ಹೋದರೆ ಕೊನೆಗೆ ಏಕಾಂಗಿಯಾಗಬೇಕಾಗಬಹುದು.


ಇಂತಹ ಹಂತದಲ್ಲಿ ನಾವು ಕೆಲವು ಸೂತ್ರಗಳನ್ನು ಅಳವಡಿಸಿಕೊಳ್ಳುವುದು ಅವಶ್ಯಕವಾಗಿರುತ್ತದೆ. ತಾನು ತಂದೆ ಅಥವಾ ತಾತ ಆದ ನಂತರ ಅದಕ್ಕೆ ತಕ್ಕಂತಹ ಮನೋಭಾವ ಬೆಳೆಸಿಕೊಳ್ಳಬೇಕು. ಇಂತಹವರ ಬಗ್ಗೆ ಇತ್ತೀಚೆಗೆ ಓದಿದ ಮಾತುಗಳು ಸರಿ ಎನ್ನಿಸುತ್ತದೆ. ಮೊದಲನೆಯದಾಗಿ ನಾವು ನಮ್ಮ ಮಗನ ಮೇಲೆ ಚಲಾಯಿಸುವ ಹಕ್ಕನ್ನು ಸೊಸೆಯ ಮೇಲೆ ಚಲಾಯಿಸಬಾರದು ಎಂಬುದು. ಬೇರೆ ಮನೆಯಿಂದ, ಬೇರೆಯದೇ ವಾತಾವರಣದಲ್ಲಿ ಬೆಳೆದುಬಂದ ಆಕೆಯ ಮನೋಭಾವ ಅರಿಯದೇ ಅವಳ ಮೇಲೆ ಹಕ್ಕು ಚಲಾಯಿಸುವುದು ಕ್ರಮೇಣ ಸಂಘರ್ಷಕ್ಕೆ ಎಡೆಮಾಡಿಕೊಡಬಹುದು. ಇಲ್ಲಿ ಹಕ್ಕಿಗಿಂತ ಅರ್ಥ ಮಾಡಿಕೊಳ್ಳುವುದು ಮುಖ್ಯವಾಗಿರುತ್ತದೆ. ಆಕೆ ಬರುತ್ತಿದ್ದಂತೆಯೇ ದಬಾಯಿಸುವ, ಬೈಯ್ಯುವ ಕೆಲಸ ಮಾಡಿದರೆ ಆರಂಭದಲ್ಲಿ ಆಕೆ ಸಹಿಸಬಹುದಾದರೂ ಅದು ಆಕೆಯ ಮನಸ್ಸಿಗೆ ಘಾಸಿ ಉಂಟು ಮಾಡಿ, ಕ್ರಮೇಣ ನಮ್ಮನ್ನು ದ್ವೇಷಿಸುವಂತೆ ಆಗಿಬಿಡಬಹುದು. ಸೊಸೆಗೆ ಏನಾದರೂ ಹೇಳಬೇಕಾದರೆ ಅದನ್ನು ಮಗನ ಮೂಲಕ ಹೇಳಿಸುವುದು ಬುದ್ಧಿವಂತಿಕೆ ಎನ್ನಿಸುತ್ತದೆ.

ಮಕ್ಕಳು ದೊಡ್ಡವರಾದ ನಂತರ ಅವರ ಉಸಾಬರಿಯನ್ನು ನಾವು ತೆಗೆದುಕೊಳ್ಳದೆ, ಅವರಿಗೇ ಬಿಡಬೇಕು. ಇಲ್ಲದಿದ್ದರೆ ಅವರು ಜವಾಬ್ದಾರಿ ಕಲಿಯುವುದು ಯಾವಾಗ? ಹಾಗೆಯೇ ಮೊಮ್ಮಕ್ಕಳ ಬಗ್ಗೆಯೂ ನಾವು ನಿರ್ಧರಿಸಿದಂತೆಯೇ ಆಗಬೇಕು ಎಂದು ಹಠ ಮಾಡಲು ಹೋಗಬಾರದು. ಅದು ಅವರ ತಂದೆ–ತಾಯಿಯರ ಜವಾಬ್ದಾರಿ. ನಾವು ನೀಡಬಹುದಾದದ್ದು ಮೊಮ್ಮಕ್ಕಳಿಗೆ ಪ್ರೀತಿಯನ್ನು ಮಾತ್ರ ಎಂದು ಅರ್ಥ ಮಾಡಿಕೊಳ್ಳಬೇಕು. ನನಗೇ ಎಲ್ಲ ಗೊತ್ತು ಎಂಬ ಅಹಂಭಾವವೂ ನಮಗೆ ತೊಂದರೆ ನೀಡಬಹುದು. ಜೀವನದಲ್ಲಿ ನನಗೆ ಎಲ್ಲವೂ ಗೊತ್ತು ಎಂದು ಹೇಳಿಕೊಳ್ಳುವಂತಿಲ್ಲ. ಹಾಗೆಯೇ ನಮ್ಮ ಮಕ್ಕಳು ನಮಗಿಂತ ದಡ್ಡರು ಎಂದೂ ಸಹಾ ಅಂದುಕೊಳ್ಳಬಾರದು.

ಹೀಗೆ ಜೀವನದಲ್ಲಿ ಕೆಲವು ಸೂತ್ರಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಜೀವನ ಎಂದರೆ ಒಂದಷ್ಟು ಹೊಂದಾಣಿಕೆ ಎಂಬುದನ್ನೂ ಅರ್ಥ ಮಾಡಿಕೊಳ್ಳಬೇಕು. ಎಲ್ಲವೂ ತಾವು ಅಂದುಕೊಂಡಂತೇ ಆಗುವುದು ಕೆಲವರ ಜೀವನದಲ್ಲಿ ಮಾತ್ರ. ಉಳಿದಂತೆ ಪರಿಸ್ಥಿತಿಗೆ ತಕ್ಕಂತೆ ಹಾಗೂ ವಯಸ್ಸಿಗೆ ತಕ್ಕಂತೆ ನಾವು ಬದಲಾಗಲೇಬೇಕು. ನಾವು ಯಾವ ವಯೋಮಾನದವರಾಗುತ್ತೇವೆಯೋ ಅದಕ್ಕೆ ತಕ್ಕಂತೆ ನಮ್ಮ ಜೀವನವನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ನಮ್ಮ ಕನ್ನಡ ಚಲನಚಿತ್ರವೊಂದರ ಗೀತೆ "ಇಲ್ಲೇ ಸ್ವರ್ಗ, ಇಲ್ಲೇ ನರಕ, ಮೇಲೇನಿಲ್ಲಾ ಸುಳ್ಳು" ಎಂಬಂತೆ ಸ್ವರ್ಗ ಹಾಗೂ ನರಕ ಸೃಷ್ಟಿಕೊಳ್ಳುವುದು ನಮ್ಮ ಕೈಯಲ್ಲೇ ಇದೆ. 'ಅತಿಯಾಸೆ ಗತಿಕೇಡು' ಎಂಬ ನಾಣ್ಣುಡಿ ಎಲ್ಲ ಕಾಲಕ್ಕೂ, ಎಲ್ಲ ವಯೋಮಾನಕ್ಕೂ ಸರಿಹೊಂದುತ್ತದೆ. ಅದನ್ನೂ ಅರ್ಥ ಮಾಡಿಕೊಳ್ಳಬೇಕು.

## ಅಕ್ರಮ ಚಟುವಟಿಕೆ, ಅಪರಾಧಗಳಿಗೆ ಡಿಸಿಪಿ, ಎಸ್‌ಪಿಗಳೇ ಹೊಣೆ

ಬೆಂಗಳೂರು ಸೆ.15(ಕೆಎಂಶಿ)–ಆಯಾ ಠಾಣಾ ವ್ಯಾಪ್ತಿಗಳಲ್ಲಿ ಅಕ್ರಮ ಚಟುವಟಿಕೆಗಳು, ಕಾನೂನು ಬಾಹಿರ ಸಂಘಟಿತ ಅಪರಾಧಗಳು ನಡೆಯುತ್ತಿದ್ದರೆ ಡಿಸಿಪಿ, ಎಸ್‌ಪಿ ಮಟ್ಟದ ಅಧಿಕಾರಿಗಳನ್ನೂ ಹೊಣೆ ಮಾಡಿ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.



ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದಲ್ಲಿ ಪೊಲೀಸ್ ಅಧಿಕಾರಿಗಳಿಗೆ ನೀಡಿದ ಸೂಚನೆಗಳ ಕುರಿತಂತೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಸರ್ಕಾರ ಕೇವಲ ಕೆಳ ಹಂತದ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಕ್ರಮ ಕೈಗೊಂಡು ಕೈ ತೊಳೆದುಕೊಳ್ಳುವುದಿಲ್ಲ, ಹಿರಿಯ ಅಧಿಕಾರಿಗಳ ಮೇಲೂ ಕ್ರಮ ಕೈಗೊಳ್ಳುತ್ತೇವೆ ಎಂದರು.

ಸುಳ್ಳು ಸುದ್ದಿ, ವದಂತಿಗಳ ಮೂಲಕ ಸಮಾಜದ ಶಾಂತಿ ಕದಡುವವರ ವಿರುದ್ಧ ಸ್ವಯಂಪ್ರೇರಿತ ಎಫ್‌ಐಆರ್ ದಾಖಲಿಸಿಕೊಂಡು ಕ್ರಮ ಕೈಗೊಳ್ಳಬೇಕು. ಸೂಕ್ಷ್ಮ ಪ್ರಕರಣಗಳಲ್ಲಿ ದೂರು ಕೊಡುವವರು ಬರಲಿ ಎಂದು ಕಾಯುತ್ತಾ ಕೂರಬಾರದು ಎನ್ನುವ ಎಚ್ಚರಿಕೆ ನೀಡಲಾಗಿದೆ ಎಂದರು.

ಸಿಸಿಬಿಯನ್ನು ಇನ್ನಷ್ಟು ಸದೃಢಗೊಳಿಸಲು 230 ಸಿಬ್ಬಂದಿಯನ್ನು ಹೊಸದಾಗಿ ನೇಮಿಸಿಕೊಳ್ಳಲು ಒಪ್ಪಿಗೆ ನೀಡಲಾಗಿದೆ. ಸಿಬ್ಬಂದಿಗೆ ಅಗತ್ಯವಾದರೆ ಹೊಸ ಕಟ್ಟಡಗಳನ್ನು ಒದಗಿಸಲಾಗುವುದು ಎಂದರು.

ಹಿರಿಯ ಅಧಿಕಾರಿಗಳು ಜನ ಸಂಪರ್ಕಕ್ಕೆ ಸಿಗದೇ ಹೋದರೆ, ಜನಸ್ನೇಹಿ ಆಗದೇ ಹೋದರೆ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಅನೈತಿಕ ಪೊಲೀಸ್ ಗಿರಿ ವಿಚಾರದಲ್ಲಿ ಸರ್ಕಾರ zero tolarence ವಹಿಸಲಿದೆ ಎಂದು ಸ್ಪಷ್ಟ ಮಾತುಗಳಲ್ಲಿ ಎಚ್ಚರಿಸಿದರು. ಠಾಣಾಧಿಕಾರಿಗಳ ಗಮನಕ್ಕೆ ಬರದಂತೆ ಯಾವ ಅಪರಾಧಗಳೂ, ಕರಾಳ ದಂಧೆಗಳೂ ನಡೆಯಲು ಸಾಧ್ಯವಿಲ್ಲ. ಹಿರಿಯ ಅಧಿಕಾರಿಗಳು ಠಾಣೆಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸುವುದು ಕಡ್ಡಾಯ. ಪೊಲೀಸರು ದರ್ಪ ಬಿಟ್ಟು ಜನಸ್ನೇಹಿಯಾಗಿ ಕೆಲಸ ಮಾಡಬೇಕು. ಠಾಣೆಗೆ ಬರುವ ಬಡವರು, ಜನಸಾಮಾನ್ಯರಿಗೆ ಪೊಲೀಸ್ ವ್ಯವಸ್ಥೆ ಬಗ್ಗೆ ಭರವಸೆ ಹುಟ್ಟುವ ರೀತಿಯಲ್ಲಿ ಜನಸ್ನೇಹಿ ಪೊಲೀಸ್ ವ್ಯವಸ್ಥೆ ರೂಪಿಸಿ ಎಂದರು.



## ಇಂದು ಡಾ.ಎನ್.ನಿತ್ಯಾನಂದ ರಾವ್ ನೇತೃತ್ವದಲ್ಲಿ ಓಆರ್‌ಪಿ ಟ್ರೈನಿಂಗ್

ಮೈಸೂರು, ಸೆ.15– ಜಾನ್ಸನ್ ಅಂಡ್ ಜಾನ್ಸನ್ ಆರ್ಥೋಪೆಡಿಕ್ ಕಂಪನಿ ಡೇಪ್ ಪ್ಯೈ ಸಿಂಥಿಸ್ ವತಿಯಿಂದ ಆರ್ಥೋಪೆಡಿಕ್ ಶಸ್ತ್ರಕ್ರಿಯೆಗೆ ಸಂಬಂಧಿಸಿದಂತೆ ಬೇಸಿಕ್ ಒಂದು ದಿನದ ಓಆರ್‌ಪಿ ಟ್ರೈನಿಂಗ್ ಅನ್ನು ನಾಳೆ (ಶನಿವಾರ) ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಏರ್ಪಡಿಸಲಾಗಿದೆ.

ದಕ್ಷಿಣ ಭಾರತ ರಾಜ್ಯಗಳ ಆರ್ಥೋಪೆಡಿಕ್ಸ್ ಅಸೋಸಿಯೇಷನ್‌ನ ಅಧ್ಯಕ್ಷರೂ ಆದ ಖ್ಯಾತ ಮೂಳೆ ತಜ್ಞ ಡಾ. ಎನ್.ನಿತ್ಯಾನಂದ ರಾವ್ ನೇತೃತ್ವದಲ್ಲಿ ಈ ಟ್ರೈನಿಂಗ್ ನಡೆಯುತ್ತಿದೆ. ಇದರಲ್ಲಿ ಪಾಲ್ಗೊಳ್ಳಲು ಈಗಾಗಲೇ 50ಕ್ಕೂ ಅಧಿಕ ಶಸ್ತ್ರಕ್ರಿಯೆ ಸಿಬ್ಬಂದಿಗಳು ನೋಂದಾಯಿಸಿಕೊಂಡಿದ್ದಾರೆ. ಇಲ್ಲಿ ಡಾ.ಶೈಲೇಶ್ ಪೈ, ಮಂಗಳೂರಿನ ಡಾ. ಪಹಿಮಾ, ಸೆಲ್ವಿ ಮಾಣಿಕ್ಯಂ, ಬೀನಾ ಆಂಟೋನಿ ಉಪನ್ಯಾಸ ನೀಡಲಿದ್ದಾರೆ.

## ಇಂದು ಪಿಎಂ ಸ್ವ–ನಿಧಿ, ಸ್ವ–ನಿಧಿ ಸೇ ಸಮೃದ್ಧಿ ಮಾಸಾಚರಣೆ

ಮೈಸೂರು, ಸೆ.15– ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಬ್ಯಾಂಕುಗಳ ಸಹಯೋಗದೊಂದಿಗೆ ಪಿ.ಎಂ ಸ್ವ–ನಿಧಿ ಮತ್ತು ಸ್ವ–ನಿಧಿ ಸೇ ಸಮೃದ್ಧಿ ಮಾಸ ಆಚರಣೆಯನ್ನು ಸೆ.16 ರಂದು ಮಧ್ಯಾಹ್ನ 12 ಗಂಟೆಗೆ ದೊಡ್ಡ ಗಡಿಯಾರದ ಎದುರಿನ ಪುರಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸದರಿ ಕಾರ್ಯಕ್ರಮದಲ್ಲಿ ಪಿಎಂ ಶ್ರೀನಿಧಿ ಯೋಜನೆ ಅಡಿ ಬ್ಯಾಂಕುಗಳಿಂದ ಸಾಲ ಮಂಜೂರಾತಿ ಮತ್ತು ವಿತರಣೆ ಕ್ಯೂಆರ್ ಕೋಡ್ ವಿತರಣೆ ವಿವಿಧ ಇಲಾಖೆಗಳಿಂದ ಕೇಂದ್ರ ಸರ್ಕಾರದ 8 ಕಲ್ಯಾಣ ಕಾರ್ಯಕ್ರಮಗಳ ಜೋಡಣೆ ಪಿಎಂ ಶ್ರೀನಿಧಿ ಯೋಜನೆಗೆ ಹಾಲು ಮಾರಾಟ ಮತ್ತು ದಿನಪತ್ರಿಕೆ ಮಾರಾಟಗಾರರನ್ನು ಸೇರ್ಪಡೆ ಮಾಡಿಕೊಂಡು ನೋಂದಾಯಿಸಲಾಗುವುದು. ವಿವಿಧ ಬೀದಿಬದಿ ವ್ಯಾಪಾರಿಗಳನ್ನು ಸಹ ನೋಂದಾಯಿಸಲು ಕ್ರಮ ವಹಿಸಲಾಗುವುದು. ಅಲ್ಲದೆ ಬೀದಿಬದಿ ವ್ಯಾಪಾರಿಗಳಿಗೆ ವೈದ್ಯಕೀಯ ಶಿಬಿರ ಏರ್ಪಡಿಸಲಾಗುವುದು.

ಆದ್ದರಿಂದ ಸದರಿ ಕಾರ್ಯಕ್ರಮಕ್ಕೆ ನಗರ ವ್ಯಾಪ್ತಿಯೊಳಗಿನ ಬೀದಿಬದಿ ವ್ಯಾಪಾರಸ್ಥರು ಮತ್ತು ಫಲಾನುಭವಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಮೈಸೂರು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರು ಪ್ರಕಟಣೆಯಲ್ಲಿ ಕೋರಿದ್ದಾರೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

## ಲಾಭದ ಆಸೆ ತೋರಿಸಿ ಸರ್ಕಾರಿ ಅಧಿಕಾರಿ ಪತ್ನಿಗೆ 55 ಸಾವಿರ ವಂಚನೆ

ಮೈಸೂರು, ಸೆ.15–ಬಿಟ್ ಕಾಯಿನ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಬರುತ್ತದೆ ಎಂದು ನಂಬಿಸಿ ಸರ್ಕಾರಿ ಅಧಿಕಾರಿಯ ಪತ್ನಿಗೆ ಆನ್‌ಲೈನ್ ಮೂಲಕ 55 ಸಾವಿರ ರೂ. ವಂಚಿಸಲಾಗಿದೆ.

ಸರ್ಕಾರಿ ಅಧಿಕಾರಿಯಾಗಿರುವ ಮೈಸೂರಿನ ಕುವೆಂಪುನಗರ ನಿವಾಸಿ ಎನ್.ಎಸ್. ರೋಹಿತ್ ಅವರ ಪತ್ನಿ ತನ್ನ ಸ್ನೇಹಿತೆಯ ಇನ್‌ಸ್ಟಾಗ್ರಾಂ ಸ್ಟೇಟಸ್‌ನಲ್ಲಿ ಬಿಟ್ ಕಾಯಿನ್ ಬಗ್ಗೆ ಮಾಹಿತಿ ಇರುವುದನ್ನು ನೋಡಿ ವಿಚಾರಿಸಿದಾಗ @oliva_smith_788_ಗೆ ಸಂದೇಶ ಕಳುಹಿಸಿದರೆ ಸಂಪೂರ್ಣ ಮಾಹಿತಿ ನೀಡುವುದಾಗಿ ತಿಳಿಸಲಾಗಿದೆ. ಅದರಂತೆ ಅವರು ಸಂದೇಶ ಕಳುಹಿಸಿದಾಗ ಬಿಟ್ ಕಾಯಿನ್‌ನಲ್ಲಿ 15 ಸಾವಿರ ರೂ. ಹೂಡಿಕೆ ಮಾಡಿದರೆ 1.70 ಲಕ್ಷ ರೂ. ನೀಡುವುದಾಗಿ ಅಮಿಷವೊಡ್ಡಿ ಟ್ರೇಡಿಂಗ್ ಅಕೌಂಟ್ ರಿಜಿಸ್ಟರ್‌ಗೆ ಎಂದು 55 ಸಾವಿರ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಇವರು ವಂಚನೆಗೊಳಗಾದ ನಂತರವಷ್ಟೇ ಸ್ನೇಹಿತೆಯ ಇನ್‌ಸ್ಟಾಗ್ರಾಂ ಖಾತೆಯ ಹ್ಯಾಕ್ ಮಾಡಿ ಬಿಟ್ ಕಾಯಿನ್ ಬಗ್ಗೆ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗಿತ್ತು ಎಂಬ ವಿಚಾರ ತಿಳಿದು ಬಂದಿದೆ.

ಮತ್ತೊಂದು ಪ್ರಕರಣದಲ್ಲಿ ಬೋಗಾದಿಯ ಬ್ಯಾಂಕ್ ಕಾಲೋನಿ ನಿವಾಸಿ ಪಿ.ಪ್ರಶಾಂತ್ ಕುಮಾರ್(40) ಎಂಬುವರಿಗೆ ಪಾರ್ಟ್ ಟೈಮ್ ಜಾಬ್ ಹೆಸರಿನಲ್ಲಿ 4.91 ಲಕ್ಷ ರೂ. ವಂಚಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ಮೈಸೂರಿನ ಮಂಚೇಗೌಡನಕೊಪ್ಪಲು ನಿವಾಸಿ ಮಧುಸೂದನ(30) ಎಂಬುವರಿಗೆ ಕೆಲವು ಪ್ರಾಡಕ್ಟ್‌ಗಳ ಮೇಲೆ ಹೂಡಿಕೆ ಮಾಡಿದರೆ ಹೆಚ್ಚು ಲಾಭ ನೀಡುವುದಾಗಿ ನಂಬಿಸಿ ಆನ್‌ಲೈನ್ ಮೂಲಕ 88 ಸಾವಿರ ರೂ. ವಂಚಿಸಲಾಗಿದೆ. ಈ ಎಲ್ಲಾ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

## ಬೈಕ್‌ಗೆ ಟಾಟಾ ಏಸ್ ಡಿಕ್ಕಿ ಹೊಡೆದು ಓರ್ವ ಸಾವು; ಇಬ್ಬರಿಗೆ ಗಾಯ

ಮೈಸೂರು, ಸೆ.15–ಬೈಕ್‌ಗೆ ಟಾಟಾ ಏಸ್ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೋರ್ವ ಸಾವನ್ನಪ್ಪಿ ಇಬ್ಬರು ಗಾಯಗೊಂಡ ಘಟನೆ ಮೈಸೂರಿನ ಕುರ್ಗಳ್ಳಿ ಕೈಗಾರಿಕಾ ಪ್ರದೇಶದ ಎಕ್ಸೆಲ್ ಪಬ್ಲಿಕ್ ಸ್ಕೂಲ್ ಮುಂಭಾಗ ಸಂಭವಿಸಿದೆ.

ಮೈಸೂರು ತಾಲೂಕು ದೊಡ್ಡಮಾರಗೌಡನಹಳ್ಳಿ ನಿವಾಸಿ ಸ್ವಾಮಿಗೌಡ(32) ಅಪಘಾತದಲ್ಲಿ ಸಾವನ್ನಪ್ಪಿದ್ದು, ಇದೇ ಗ್ರಾಮದ ಜಿ.ಮಂಜುನಾಥ (35) ಮತ್ತು ಕುಮಾರ (33) ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸೆ.14ರಂದು ಅಮಾವಾಸ್ಯೆ ಪೂಜೆಗಾಗಿ ದೊಡ್ಡಮಾರಗೌಡನಹಳ್ಳಿ ಗ್ರಾಮದ ಕುಮಾರ್ ಎಂಬುವರೊಂದಿಗೆ ಬೈಕ್‌ನಲ್ಲಿ (ಕೆಎ 04 ಇಎನ್ 6724) ಸ್ವಾಮಿಗೌಡ ಮತ್ತು ಮಂಜುನಾಥ ಆರತಿ ಉಕ್ಕಡಕ್ಕೆ ತೆರಳಿ, ಸ್ವಗ್ರಾಮಕ್ಕೆ ಹಿಂತಿರುಗುತ್ತಿದ್ದರು. ಇವರು, ಅಂದು ಮಧ್ಯಾಹ್ನ 2.15ರ ಸುಮಾರಿನಲ್ಲಿ ಕುರ್ಗಳ್ಳಿ ಕೈಗಾರಿಕಾ ಪ್ರದೇಶದ ಎಕ್ಸೆಲ್ ಪಬ್ಲಿಕ್ ಸ್ಕೂಲ್ ಪೂರ್ವ ಗೇಟ್ ಮುಂಭಾಗ ಬರುತ್ತಿದ್ದಾಗ ಬೈಕ್‌ಗೆ ಶಿವಕುಮಾರ ಎಂಬಾತ ಚಾಲನೆ ಮಾಡಿಕೊಂಡು ಬಂದ ಟಾಟಾ ಏಸ್ ಗೂಡ್ಸ್ ವಾಹನ (ಕೆಎ 09 ಎಎ 2013) ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿದ್ದ ಮೂವರು ಗಾಯಗೊಂಡಿದ್ದಾರೆ. ಇವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲು ಕರೆತರುವಾಗ ಸ್ವಾಮಿಗೌಡರು ಮಾರ್ಗ ಮಧ್ಯದಲ್ಲೇ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ. ಈ ಸಂಬಂಧ ವಿವಿ ಪುರಂ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮನೆಯ ಬೀರುವಿನಲ್ಲಿಟ್ಟಿದ್ದ ಚಿನ್ನಾಭರಣ ಕಳವು; ಮುಂದಿನ ಮನೆಯವರ ಮೇಲೆ ಶಂಕೆ

ಬನ್ನೂರು, ಸೆ.15–ಮನೆಯ ಬೀರುವಿನಲ್ಲಿಟ್ಟಿದ್ದ ಚಿನ್ನಾಭರಣ ಕಳವು ಮಾಡಿರುವ ಘಟನೆ ತಿ.ನರಸೀಪುರ ತಾಲೂಕು ಲಾಕನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಈ ಗ್ರಾಮದ ಗೃಹಿಣಿ ಜಯಲಿಂಗಮ್ಮ(32) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಎಲ್ಲಾದರೂ ಹೊರಗೆ ಹೋಗಬೇಕಾದರೆ ಮನೆ ಬೀಗ ಹಾಕಿ ಕೀ ಅನ್ನು ಮನೆ ಮುಂಭಾಗವಿರುವ ಮೆಟ್ಟಿಲಿನ ಕೆಳಗೆ ಇಟ್ಟು ಹೋಗುತ್ತಿದ್ದರು. ಅದರಂತೆ ಅವರು ಸೆ.12ರಂದು ಮಧ್ಯಾಹ್ನ ಮನೆ ಬೀಗ ಹಾಕಿಕೊಂಡು ಬನ್ನೂರಿಗೆ ಹೋಗಿ ಬಂದಿದ್ದಾರೆ. ಪರಿಚಯಸ್ಥರ ಮನೆಯ ಕಾರ್ಯಕ್ರಮಕ್ಕೆ ಹೋಗಲು ಜು.14ರಂದು ಬೆಳಗ್ಗೆ ಬೀರುವನ್ನು ತೆರೆದು ನೋಡಿದಾಗ ಲಾಕರ್‌ನಲ್ಲಿಟ್ಟಿದ್ದ ಒಟ್ಟು 27.5 ಗ್ರಾಂ ಚಿನ್ನಾಭರಣವಿದ್ದ ಪರ್ಸ್ ಕಳುವಾಗಿರುವುದು ಗೊತ್ತಾಗಿದೆ.

ಕಳೆದ 15 ದಿನದ ಹಿಂದೆ ಇವರ ಮನೆಯ ಮುಂಭಾಗದ ಮನೆಯಲ್ಲಿ ವಾಸವಿರುವ ಜಗದೀಶ ಎಂಬುವರ ಪತ್ನಿ ಶಶಿಕಲಾ ಎಂಬುವರು ಇವರ ಮನೆಗೆ ಬಂದು ಒಡವೆಗಳ ಡಿಸೈನ್ ತೋರಿಸಿ ಎಂದು ಕೇಳಲಾಗಿ ಆಕೆಯ ಎದುರೇ ಬೀರುವನ್ನು ತೆರೆದು ಒಡವೆಗಳನ್ನು ತೋರಿಸಿದ್ದಾಗಿಯೂ ತಾನು ಚಿನ್ನಾಭರಣ ಇಡುವ ಸ್ಥಳ ಗೊತ್ತಿರುವ ಶಶಿಕಲಾ ಅವರೇ ತಮ್ಮ ಚಿನ್ನಾಭರಣವನ್ನು ಕಳವು ಮಾಡಿರಬಹುದು ಎಂದು ಜಯಲಿಂಗಮ್ಮ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಬನ್ನೂರು ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

## ಕಮಿಷನ್ ಆಸೆಗೆ ಬಿದ್ದ ಅರಣ್ಯ ಇಲಾಖೆ ಗುತ್ತಿಗೆ ನೌಕರನಿಗೆ 11.33 ಲಕ್ಷ ವಂಚನೆ

ಮಡಿಕೇರಿ, ಸೆ.15–ಯೂ–ಟ್ಯೂಬ್ ಚಾನಲ್ ಸಬ್‌ಸ್ಕ್ರೈಬ್ ಮಾಡಿದರೆ ಕಮಿಷನ್ ದೊರೆಯುತ್ತದೆ ಎಂದು ನಂಬಿಸಿ ಅರಣ್ಯ ಇಲಾಖೆಯ ಗುತ್ತಿಗೆ ಸಿಬ್ಬಂದಿಯಿಂದ 11.33 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮಡಿಕೇರಿ ಅರಣ್ಯ ಭವನದಲ್ಲಿ ಗುತ್ತಿಗೆ ಆಧಾರದಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡುತ್ತಿರುವ ಮೂರ್ನಾಡು ನಿವಾಸಿ ಕೆ.ಎಸ್.ವಿನಯ(30) ವಂಚನೆಗೊಳಗಾದವರಾಗಿದ್ದು, ಸೆ.5ರಂದು ನಂದಿನಿ ಎಂಬ ಹೆಸರಿನಲ್ಲಿ ಇವರ ಮೊಬೈಲ್‌ಗೆ 8011053147 ಸಂಖ್ಯೆಯಿಂದ ಕರೆ ಮಾಡಿದ ವಂಚಕಿ ಯೂ–ಟ್ಯೂಬ್ ಚಾನಲ್ ಸಬ್‌ಸ್ಕ್ರೈಬ್ ಮಾಡಿ ಸ್ಕ್ರೀನ್ ಶಾಟ್ ಕಳುಹಿಸುವಂತೆ ತಿಳಿಸಿದ್ದಾರೆ. ವಿನಯ ಅವರು ಹಾಗೆ ಮಾಡಿದಾಗ ಟೆಲಿಗ್ರಾಂ ಪೇಜ್ ತೆರೆದುಕೊಂಡಿದ್ದು, ಅದರಲ್ಲಿ ಹಣ ಹೂಡಿಕೆ ಮಾಡಿ ಚಾನಲ್ ಸಬ್‌ಸ್ಕ್ರೈಬ್ ಮಾಡಿದರೆ ಹೆಚ್ಚಿನ ಕಮಿಷನ್ ನೀಡುವುದಾಗಿ ತಿಳಿಸಲಾಗಿತ್ತು. ಅದರಂತೆ ಅವರು ಹಂತ ಹಂತವಾಗಿ 11.33 ಲಕ್ಷ ರೂ. ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ. ಈ ಸಂಬಂಧ ಕೊಡಗು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸುಲಭ ಸಾಲಕ್ಕೆ ಆಸೆಪಟ್ಟ ಉದ್ಯಮಿಗೆ ಬ್ಲಾಕ್‌ಮೇಲ್ ಮಾಡಿ 79,750 ರೂ. ಸುಲಿಗೆ

ಕುಶಾಲನಗರ, ಸೆ.15–ಆನ್‌ಲೈನ್ ಮೂಲಕ 2350 ರೂ. ಸಾಲ ನೀಡಿದ ನಂತರ ಬಟ್ಟೆ ಅಂಗಡಿ ಮಾಲೀಕರೊಬ್ಬರಿಗೆ ಬ್ಲಾಕ್‌ಮೇಲ್ ಮಾಡಿ 79,750 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಕುಶಾಲನಗರದ ಕುವೆಂಪು ಬಡಾವಣೆ ನಿವಾಸಿ ಎಸ್.ಐ. ಸಾನಿಯಾ (26) ವಂಚನೆಗೊಳಗಾದವರಾಗಿದ್ದು, ಕಳೆದ ಆ.3ರಂದು ಇವರನ್ನು ವಾಟ್ಸಾಪ್ ಮೂಲಕ ಸಂಪರ್ಕಿಸಿದ ಅಪರಿಚಿತರು ಲೋನ್ ಕೊಡುವುದಾಗಿ ಲಿಂಕ್‌ವೊಂದನ್ನು ರವಾನಿಸಿದ್ದರು. ಲಿಂಕ್ ಮೇಲೆ ಕ್ಲಿಕ್ ಮಾಡಿ ಅಲ್ಲಿ ಕೇಳಲಾಗಿದ್ದ ವಿವರಗಳನ್ನು ನಮೂದಿಸಿದ ತಕ್ಷಣ ಇವರ ಬ್ಯಾಂಕ್ ಖಾತೆಗೆ 2350 ರೂ. ಜಮೆ ಆಗಿದೆ. ಇದಾದ ಎರಡೇ ದಿನದಲ್ಲಿ ಸಾಲದ ಹಣ ಮರುಪಾವತಿ ಮಾಡುವಂತೆ ವಾಟ್ಸಾಪ್‌ಗೆ ಮೆಸೇಜ್ ಬಂದಿದೆ. ಅದರಂತೆ ಸಾನಿಯಾ ಅವರು 3 ಸಾವಿರ ರೂ. ವರ್ಗಾವಣೆ ಮಾಡಿದಾಗ, ನಿಮ್ಮ ಲೋನ್ ಇನ್ನೂ ಮುಗಿದಿಲ್ಲ. ಇನ್ನೂ 5 ಸಾವಿರ ರೂ. ವರ್ಗಾವಣೆ ಮಾಡಬೇಕು. ಇಲ್ಲದಿದ್ದರೆ ನಿಮ್ಮ ಸಂಪರ್ಕದಲ್ಲಿರುವ ಮೊಬೈಲ್ ನಂಬರ್‌ಗಳಿಗೆ ನಿಮ್ಮ ಫೋಟೋಗಳನ್ನು ಶೇರ್ ಮಾಡುತ್ತೇವೆ ಎಂದು ಬ್ಲಾಕ್‌ಮೇಲ್ ಮಾಡಲಾಗಿದೆ. ಇದೇ ರೀತಿ ಪದೇ ಪದೆ ಬ್ಲಾಕ್‌ಮೇಲ್ ಮಾಡಿ ಸೆ.10ರವರೆಗೆ ಹಂತ ಹಂತವಾಗಿ 79,750 ರೂ. ವರ್ಗಾವಣೆ ಮಾಡಿಸಿಕೊಂಡಿದ್ದು, ಈ ಸಂಬಂಧ ಸಾನಿಯಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೊಡಗು ಜಿಲ್ಲಾ ಸೆನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

## ನಿಂತಿದ್ದ ವಾಹನಕ್ಕೆ ಬೈಕ್ ಡಿಕ್ಕಿ: ಕಾಲೇಜು ಉಪನ್ಯಾಸಕ ಸಾವು

ಬನ್ನೂರು, ಸೆ.15–ನಿಂತಿದ್ದ ಗೂಡ್ಸ್ ವಾಹನಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಕಾಲೇಜು ಉಪನ್ಯಾಸಕ ಸಾವನ್ನಪ್ಪಿದ ಘಟನೆ ತಿ.ನರಸೀಪುರ ತಾಲೂಕು ಮಳವಳ್ಳಿ–ಮಳ್ಳೂರು ಮುಖ್ಯ ರಸ್ತೆಯ ಬಸವನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ತಿ.ನರಸೀಪುರ ತಾಲೂಕು ಹನುಮನಾಳು ನಿವಾಸಿ, ಕಾಲೇಜು ಉಪನ್ಯಾಸಕ ಸತೀಶ (37) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಸೆ.13ರಂದು ಸಂಜೆ 7 ಗಂಟೆ ಸುಮಾರಿನಲ್ಲಿ ಬೈಕ್‌ನಲ್ಲಿ (ಕೆಎ 55 ಎಕ್ಸ್ 2836) ತಮ್ಮ ಗ್ರಾಮಕ್ಕೆ ತೆರಳುತ್ತಿದ್ದಾಗ ಬಸವನಹಳ್ಳಿ ಗ್ರಾಮದ ಮುಖ್ಯ ರಸ್ತೆಯ ಮಧ್ಯ ಭಾಗದಲ್ಲಿ ಇಂಡಿಕೇಟರ್ ಹಾಕದೇ ನಿಲ್ಲಿಸಿದ್ದ ಮರ ತುಂಬಿದ್ದ ಗೂಡ್ಸ್ ವಾಹನ (ಕೆಎಲ್ 32 4148)ಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸತೀಶ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಬನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮೈಸೂರಿನ ಉದಯಗಿರಿ, ಬಲ್ಲಾಳ್ ಸರ್ಕಲ್ ಬಳಿ ಫುಡ್ ಸ್ಟ್ರೀಟ್ ನಿರ್ಮಾಣ ಕಾಮಗಾರಿ ಆರಂಭ

**●ಮೈಸೂರಿನ ಮೊದಲ ಫುಡ್ ಸ್ಟ್ರೀಟ್ ●ಹಲವು ವರ್ಷಗಳ ಕನಸಿನ ಯೋಜನೆ ಸಾಕಾರ**
**●ಒಂದೇ ಸ್ಥಳದಲ್ಲಿ ಹಲವು ರೀತಿಯ ತಿಂಡಿ–ತಿನಿಸು ●ಅಚ್ಚುಕಟ್ಟಾದ ವ್ಯವಸ್ಥೆ, ಶುಚಿತ್ವಕ್ಕೆ ಆದ್ಯತೆ**





ಮೈಸೂರು, ಸೆ.15(ಬಿಎಲ್‌ಯು)– ಸಿಲಿಕಾನ್ ಸಿಟಿ ಬೆಂಗಳೂರಿನಂತೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕೂಡ ಫುಡ್ ಸ್ಟ್ರೀಟ್ ನಿರ್ಮಾಣ ಮಾಡಲಾಗುತ್ತಿದೆ. ಮೈಸೂರಿನ ಉದಯಗಿರಿ ಹಾಗೂ ಬಲ್ಲಾಳ್ ವೃತ್ತದಲ್ಲಿ ನಿರ್ಮಾಣ ಮಾಡುತ್ತಿರುವ ಫುಡ್ ಸ್ಟ್ರೀಟ್ ಕಾಮಗಾರಿ ಭರದಿಂದ ಸಾಗಿದೆ. ಇದು ಮೈಸೂರಿನ ಮೊದಲ ಫುಡ್ ಸ್ಟ್ರೀಟ್ ಆಗಿದ್ದು, ಬೀದಿ ಬದಿ ವ್ಯಾಪಾರ ಮಾಡುವ ಫಾಸ್ಟ್ ಫುಡ್ ನವರಿಗೆ ಇದರಿಂದ ಅತ್ಯಂತ ಅನುಕೂಲವಾಗಲಿದೆ.

ಮೈಸೂರಿನ ಜನ ಸಂಖ್ಯೆ 10 ಲಕ್ಷ ಮೀರಿದೆ. ದಿನ ಕಳೆದಂತೆ ಮೈಸೂರು ನಗರ ಅಭಿವೃದ್ಧಿ ಹೊಂದುತ್ತಿದ್ದು, ನಗರ ವ್ಯಾಪ್ತಿ ವಿಸ್ತಾರಗೊಳ್ಳುತ್ತಿದೆ. ಮೈಸೂರು ರಾಜರ ಕಾಲದಲ್ಲಿ ಯೋಜನಾಬದ್ಧವಾಗಿ ನಿರ್ಮಾಣಗೊಂಡಿದೆ. ಆದರೆ ಇತ್ತೀಚಿಗೆ ಮೈಸೂರಿನಲ್ಲಿ ಬೀದಿ ಬದಿ ಫಾಸ್ಟ್‌ಫುಡ್‌ಗಳ ವ್ಯಾಪಾರವೇ ಹೆಚ್ಚಾಗಿರುವ ಕಾರಣ ಅವ್ಯವಸ್ಥೆ ತಾಂಡವವಾಡುತ್ತಿದೆ.

ವ್ಯಾಪಾರಕ್ಕೆ ನಿಗದಿತ ಸ್ಥಳ ಇಲ್ಲದ ಕಾರಣ ಸಿಕ್ಕ ಸಿಕ್ಕ ಸ್ಥಳಗಳಲ್ಲಿ ತಳ್ಳುವ ಗಾಡಿ ಹಾಗೂ ಪೆಟ್ಟಿ ಅಂಗಡಿಗಳು ನಿರ್ಮಾಣವಾಗಿವೆ. ಕಿರಿದಾದ ರಸ್ತೆಯಲ್ಲಿ ಬೀದಿ ಬದಿ ವ್ಯಾಪಾರ ಮಾಡುತ್ತಿರುವ ಕಾರಣ ವಾಹನ ಸಂಚಾರಕ್ಕೂ ತೊಂದರೆಯಾಗುತ್ತಿದೆ. ಬೀದಿ ಬದಿಯಲ್ಲಿ ಫಾಸ್ಟ್‌ಫುಡ್‌ಗಳಂತೂ ನಾಯಿ ಕೊಡೆಗಳಂತೆ ತಲೆ ಎತ್ತಿವೆ. ಇದರಿಂದ ಮೈಸೂರಿನಲ್ಲಿ ಬೀದಿ ಬದಿ ವ್ಯಾಪಾರ ಸ್ಥಳಗಳು ಅವ್ಯವಸ್ಥೆಯ ತಾಣವಾಗಿದೆ.

ಈ ಹಿನ್ನೆಲೆಯಲ್ಲಿ ಮೈಸೂರಿನ ಮೂರು ಬಡಾವಣೆಗಳಲ್ಲಿ ನಗರ ಪಾಲಿಕೆ ಫುಡ್ ಸ್ಟ್ರೀಟ್ ನಿರ್ಮಾಣ ಮಾಡುತ್ತಿದೆ. ಫಾಸ್ಟ್ ಫುಡ್, ಇತರೆ ತಿಂಡಿ ತಿನಿಸುಗಳ ವ್ಯಾಪಾರಿಗಳಿಗೆ ಮಾತ್ರ ಇಲ್ಲಿ ಜಾಗ ಮೀಸಲಿಡಲಾಗುತ್ತಿದೆ.

ಮೈಸೂರಿನ ಉದಯಗಿರಿಯ ಪಿ ಅಂಡ್ ಟಿ ಕ್ವಾಟ್ರರ್ಸ್ ಬಳಿ 96 ಲಕ್ಷ ರೂಪಾಯಿ ವೆಚ್ಚದಲ್ಲಿ ಫುಡ್ ಸ್ಟ್ರೀಟ್ ನಿರ್ಮಾಣ ಮಾಡಲಾಗುತ್ತಿದೆ. 95 ವ್ಯಾಪಾರಸ್ಥರಿಗೆ ಇಲ್ಲಿ ಅವಕಾಶ ಕಲ್ಪಿಸಲಾಗುತ್ತಿದೆ. ವ್ಯವಸ್ಥಿತವಾಗಿ ನಿರ್ಮಾಣ ಮಾಡುತ್ತಿರುವ ಫುಡ್ ಸ್ಟ್ರೀಟ್‌ನಲ್ಲಿ ದೀಪದ ವ್ಯವಸ್ಥೆ, ಕಲ್ಲು ಆಸನಗಳ ನಿರ್ಮಾಣ, ಶೌಚಾಲಯ ಸೇರಿದಂತೆ ಇತರೆ ಸೌಲಭ್ಯ ಕಲ್ಪಿಸಲಾಗುತ್ತಿದೆ. ಊಟ ತಿಂಡಿ ಮಾಡಲು ಟೇಬಲ್‌ಗಳನ್ನು ಕೂಡ ನಿರ್ಮಿಸಲಾಗುತ್ತಿದೆ. ನೆಲಕ್ಕೆ ಆಕರ್ಷಕ ಟೈಲ್ಸ್‌ಗಳನ್ನು ಕೂಡ ಅಳವಡಿಸಲಾಗುತ್ತಿದೆ. ಅತ್ಯಾಕರ್ಷಕವಾದ ಈ ಫುಡ್ ಸ್ಟ್ರೀಟ್‌ನಲ್ಲಿ ಎಲ್ಲಾ ರೀತಿಯ ತಿಂಡಿ ತಿನಿಸುಗಳು ಒಂದೇ ಕಡೆ ಸಿಗುವಂತೆ ಮಾಡಲಾಗುತ್ತಿದೆ

ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಇತರೆ ಸೌಲಭ್ಯ ಕಲ್ಪಿಸುವ ಮೂಲಕ ಶುಚಿತ್ವ ಕಾಪಾಡಿಕೊಳ್ಳುವ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗುತ್ತಿದೆ.

ಒಂದು ತಿಂಗಳ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಲಾಗುವುದು ಎಂದು ಸ್ಥಳೀಯ ಕಾರ್ಪೊರೇಟರ್ ಸಹುದ್ ಖಾನ್ ತಿಳಿಸಿದ್ದಾರೆ.

ಮೈಸೂರಿನ ಬಲ್ಲಾಳ್ ಸರ್ಕಲ್ ಬಳಿ ಕೂಡ ಮತ್ತೊಂದು ಫುಡ್ ಸ್ಟ್ರೀಟ್ ನಿರ್ಮಾಣ ಮಾಡಲಾಗುತ್ತಿದ್ದು, ಇಲ್ಲಿ ಕೂಡ ಕಾಮಗಾರಿ ಭರದಿಂದ ಸಾಗುತ್ತಿದೆ. ಅರ್ಧಕ್ಕೆ ನಿಂತಿರುವ ಮಯೂರ ಕಾಂಪ್ಲೆಕ್ಸ್ ಮುಂಭಾಗದಲ್ಲಿ 50 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ ಫುಡ್ ಸ್ಟ್ರೀಟ್‌ನಲ್ಲಿ ಸುಮಾರು 50ಕ್ಕೂ ಹೆಚ್ಚು ವ್ಯಾಪಾರಸ್ಥರಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ಫಾಸ್ಟ್ ಫುಡ್ ವ್ಯಾಪಾರಿಗಳನ್ನು ಬೀದಿ ಬದಿಯಿಂದ ತೆರವು ಮಾಡಿ ಇಲ್ಲಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಸ್ಥಳೀಯ ಕಾರ್ಪೊರೇಟರ್ ಪಲ್ಲವಿ ತಿಳಿಸಿದರು.

ಈಗಾಗಲೇ ಬೀದಿ ಬದಿ ವ್ಯಾಪಾರಿ ಕಾರ್ಡ್ ಪಡೆದಿರುವ ವ್ಯಾಪಾರಸ್ಥರಿಗೆ ಮಾತ್ರ ಈ ಎರಡು ಫುಡ್ ಸ್ಟ್ರೀಟ್‌ನಲ್ಲಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ನಗರ ಪಾಲಿಕೆ ರಿಯಾಯಿತಿ ದರದಲ್ಲಿ ತಿಂಗಳಿಗೆ ಬಾಡಿಗೆ ನಿಗದಿ ಮಾಡಲಿದೆ. ಫುಡ್ ಸ್ಟ್ರೀಟ್ ನಿರ್ಮಾಣ ಮಾಡಿದ ನಂತರ ಮತ್ತೆ ಹೊಸದಾಗಿ ಬೀದಿ ಬದಿ ಫಾಸ್ಟ್ ಫುಡ್‌ಗಳು ತಲೆ ಎತ್ತದಂತೆ ನಗರ ಪಾಲಿಕೆ ಕ್ರಮ ಕೈಗೊಳ್ಳಲಿದೆ.

ಮೈಸೂರಿನ ಸರಸ್ವತಿಪುರಂ ಹಾಗೂ ಜೆಎಲ್ ಬಿ ರಸ್ತೆಯ ತುಳಸಿದಾಸ್ ಆಸ್ಪತ್ರೆ ಪಕ್ಕದ ಶಾರದಾವಿಲಾಸ ರಸ್ತೆಯಲ್ಲಿ ಕೂಡ ಫುಡ್ ಸ್ಟ್ರೀಟ್ ನಿರ್ಮಿಸಲು ಪ್ರಸ್ತಾವನೆ ಇದೆ. ಶೀಘ್ರದಲ್ಲೆ ಇಲ್ಲಿ ಕೂಡ ಕಾಮಗಾರಿ ಆರಂಭಿಸಲು ನಗರ ಪಾಲಿಕೆ ನಿರ್ಧರಿಸಿದೆ.

ಹೀಗೆ ಮೈಸೂರಿನ ಹಲವು ಕಡೆ ಫುಡ್ ಸ್ಟ್ರೀಟ್ ನಿರ್ಮಾಣವಾದರೆ ಫಾಸ್ಟ್ ಫುಡ್‌ಗಳ ವ್ಯಾಪಾರದ ಅವ್ಯವಸ್ಥೆಯನ್ನು ಮುಕ್ತ ಮಾಡಬಹುದಾಗಿದೆ. ಜೊತೆಗೆ ಶುಚಿತ್ವದ ವಾತಾವರಣದಲ್ಲಿ ತಿಂಡಿ ತಿನಿಸುಗಳ ವ್ಯಾಪಾರಕ್ಕೆ ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ.

ಮೈಸೂರಿನಲ್ಲಿ ಫುಡ್ ಸ್ಟ್ರೀಟ್ ಮಾಡಬೇಕೆಂಬ ಹಲವು ವರ್ಷಗಳ ಯೋಜನೆ ಈಗ ಸಾಕಾರಗೊಳ್ಳುತ್ತಿದೆ.

**ಮತದಾರರ ಪಟ್ಟಿ ತಯಾರಿಸದ ಹಿನ್ನೆಲೆ**

## ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ ರದ್ದು

**ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಪ್ರಕಟ**



ಮೈಸೂರು, ಸೆ. 15(ಆರ್‌ಕೆ)– ಮತದಾರರ ಪಟ್ಟಿ ತಯಾರಿಕೆ ಪ್ರಕ್ರಿಯೆ ನಡೆಯದಿರುವುದರಿಂದ ನವೆಂಬರ್ 4ರಂದು ನಿಗದಿಯಾಗಿದ್ದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಚುನಾವಣೆಯನ್ನು ರದ್ದುಪಡಿಸಲಾಗಿದೆ.

ಈ ಸಂಬಂಧ ಇಂದು ಪ್ರಕಟಣೆ ಹೊರಡಿಸಿರುವ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ನಿಯಮಾವಳಿಗಳು 1960ರ ನಿಯಮ 13(ಡಿ) (1), (2) ರನ್ವಯ ಮತದಾರರ ಪಟ್ಟಿ ತಯಾರಿಕಾ ಕಾರ್ಯ ನಡೆಸದೇ ಇರುವುದರಿಂದ ಸೆಪ್ಟೆಂಬರ್ 1ರಂದು ನಡೆದ ಸಭಾ ನಡಾವಳಿಗಳ ರೀತ್ಯಾ ಚುನಾವಣಾ ಅಧಿಸೂಚನೆಯನ್ನು ಹಿಂಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ಅದಾಗ್ಯೂ ಬ್ಯಾಂಕಿನ ಡೆಲಿಗೇಟ್ ಫಾರಂಗಳನ್ನು ಸಲ್ಲಿಸುವಂತೆ ಸದಸ್ಯ ಸಹಕಾರ ಸಂಘಗಳಿಗೆ ನಿರ್ದೇಶನಗಳನ್ನು ನೀಡಿರುವ ಬಗ್ಗೆ ದೂರುಗಳು ಸ್ವೀಕೃತವಾಗಿದ್ದು, ಪ್ರಸ್ತುತ ಬ್ಯಾಂಕಿನ ಚುನಾವಣಾ ಪ್ರಕ್ರಿಯೆಯ ಅಧಿಸೂಚನೆಯನ್ನು ಹಿಂಪಡೆದಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ನಿಯಮಾವಳಿಗಳು 1960ರ ನಿಯಮ 13(ಡಿ)ದ ಅವಕಾಶದಂತೆ ಸದಸ್ಯ ಸಹಕಾರ ಸಂಘಗಳು ತನ್ನ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಡೆಲಿಗೇಟ್ ಫಾರಂಗಳನ್ನು ಸಲ್ಲಿಸುವ ಪ್ರಕ್ರಿಯೆಯನ್ನು ಮುಂದಿನ ಅಧಿಸೂಚನೆ ಹೊರಡಿಸುವವರೆಗೂ ಸಲ್ಲಿಸದಂತೆ ಬ್ಯಾಂಕಿನ ವ್ಯಾಪ್ತಿಗೆ ಒಳಪಡುವ ಎಲ್ಲಾ ಸದಸ್ಯ ಸಹಕಾರ ಸಂಘಗಳಿಗೆ ತಿಳಿಸಲಾಗಿದೆ ಎಂದಿರುವ ಅವರು, ಹೀಗಿದ್ದಾಗ್ಯೂ ಸಂಘಗಳು ಡೆಲಿಗೇಟ್ ಫಾರಂಗಳನ್ನು ಸಲ್ಲಿಸಿದಲ್ಲಿ ಅಥವಾ ಸಲ್ಲಿಸುತ್ತಿದ್ದಲ್ಲಿ ಅಸಿಂಧುವಾಗುತ್ತವೆ ಎಂದು ತಿಳಿಸಿದ್ದಾರೆ.

ಪ್ರಸ್ತುತ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿರುವ ಶಾಸಕ ಜಿ.ಡಿ. ಹರೀಶ್‌ಗೌಡ ನೇತೃತ್ವದ ಆಡಳಿತ ಮಂಡಳಿ ಅಧಿಕಾರಾವಧಿಯು ನವೆಂಬರ್ 10ಕ್ಕೆ ಅಂತ್ಯವಾಗಲಿದೆ.

> **ಚುನಾವಣಾ ಅಧಿಸೂಚನೆ ಹಿಂಪಡೆದಿರುವ ಸಂಬಂಧ ನಾವು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೇವೆ. ಸೆಪ್ಟೆಂಬರ್ 19ರಂದು ಅರ್ಜಿ ವಿಚಾರಣೆ ಇರುವುದರಿಂದ ಅಲ್ಲಿಯವರೆಗೆ ಯಾವ ಪ್ರಕ್ರಿಯೆಯನ್ನೂ ನಡೆಸಬಾರದೆಂದು ನ್ಯಾಯಾಧೀಶರು ಮೌಖಿಕ ಸೂಚನೆ ನೀಡಿದ್ದಾರೆ. ಅದಾಗ್ಯೂ ಚುನಾವಣಾಧಿಕಾರಿಗಳು ಇಂದು ಅಧಿಸೂಚನೆ ಹಿಂಪಡೆದಿರುವುದಕ್ಕೆ ಪೂರಕವಾಗಿ ಡೆಲಿಗೇಟ್ ಫಾರಂ ಅನ್ನು ಸಲ್ಲಿಸಬಾರದೆಂದು ಪ್ರಕಟಣೆ ಹೊರಡಿಸಿರುವುದು ಅಚ್ಚರಿ ಮೂಡಿಸಿದೆ. ಆದರೆ ಡೆಲಿಗೇಟ್ ಫಾರಂ ಸಲ್ಲಿಸಲು ಅಭ್ಯಂತರವೇನೂ ಇಲ್ಲ. ನಾವು ಕಾನೂನು ಹೋರಾಟ ಮುಂದುವರೆಸುತ್ತೇವೆ.**
> 
> **- ಜಿ.ಡಿ. ಹರೀಶ್‌ಗೌಡ,**
> **ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ**

## ಮುಕ್ತ ವಿವಿಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆ



ಮೈಸೂರು,ಸೆ.15(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಗಂಗಾ ಸಭಾಂಗಣದಲ್ಲಿ ಶುಕ್ರವಾರ ನಡೆದ ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮದಲ್ಲಿ ಮುಕ್ತ ವಿವಿ ಸಿಬ್ಬಂದಿ ಪಾಲ್ಗೊಂಡು, ಪ್ರತಿಜ್ಞೆ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಮುಕ್ತ ವಿವಿ ಕುಲಪತಿ ಶರಣಪ್ಪ ವಿ. ಹಲಸೆ ಸಂವಿಧಾನದ ಪೀಠಿಕೆಯನ್ನು ಸಿಬ್ಬಂದಿಗಳೊಂದಿಗೆ ಓದುವ ಮೂಲಕ ಸಂವಿಧಾನದ ಆಶಯದ ರಕ್ಷಣೆಗಾಗಿ ಶ್ರಮಿಸುವ ಪ್ರತಿಜ್ಞೆ ಬೋಧಿಸಿದರು.

ಬಳಿಕ ಮಾತನಾಡಿದ ಶರಣಪ್ಪ ವಿ ಹಲಸೆ, ಪ್ರಜಾಪ್ರಭುತ್ವ ಪೀಠಿಕೆಯನ್ನು ಓದುವುದರೊಂದಿಗೆ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಂವಿಧಾನದಲ್ಲಿರುವ ತತ್ವಗಳನ್ನು ಕರ್ತವ್ಯದಲ್ಲಿ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಸಂವಿಧಾನದ ನೈಜ ಆಶಯ ಪಾಲನೆಯಾಗುತ್ತದೆ. ಈ ಕಾರ್ಯಕ್ರಮ ಜನರಲ್ಲಿ ಜಾಗೃತಿ ಮೂಡಿಸಲು ಸಹಕಾರಿಯಾಗಲಿದೆ. ಪ್ರತಿಯೊಬ್ಬ ನಾಗರಿಕರೂ ಪ್ರಜಾಪ್ರಭುತ್ವದ ಆಶಯವನ್ನು ಪಾಲಿಸಬೇಕು ಎಂದರು.

ಕುಲ ಸಚಿವ ಕೆ.ಎಲ್.ಎನ್.ಮೂರ್ತಿ ಮಾತನಾಡಿ, ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಇರುವ ಪ್ರಜಾಪ್ರಭುತ್ವವನ್ನು ಪಾಲಿಸಿ ಪೋಷಿಸುವ ಮಹತ್ತರ ಜವಾಬ್ದಾರಿ ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪರೀಕ್ಷಾಂಗ ಕುಲಸಚಿವ ಕೆ.ಬಿ.ಪ್ರವೀಣ್, ಹಣಕಾಸು ಅಧಿಕಾರಿ ಖಾದರ್ ಪಾಷಾ, ಡೀನ್ ಲಕ್ಷ್ಮಿ, ರಾಮನಾಥಂ ನಾಯ್ಡು, ಅಂಬೇಡ್ಕರ್ ಅಧ್ಯಯನ ಕೇಂದ್ರದ ಶಿವಕುಮಾರ ಸ್ವಾಮಿ, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ, ಸಹಾಯಕ ಪ್ರಾಧ್ಯಾಪಕ ಬೀರಪ್ಪ ಹೆಚ್. ಗಣೇಶ್ ಉಪಸ್ಥಿತರಿದ್ದರು.

## ಅ.1ರಂದು ಶ್ರೀ ದೇವಿ ಮಹಾತ್ಮೆ ಯಕ್ಷಗಾನ ಪ್ರಸಂಗ

ಮೈಸೂರು, ಸೆ. 15– ಮೈಸೂರಿನ ದಕ್ಷಿಣ ಕನ್ನಡ ವೈದ್ಯರ ಸಾಂಸ್ಕೃತಿಕ ಸಂಘದ ವತಿಯಿಂದ ಅ. 1 ರಂದು ಸಂಜೆ 5.30ಕ್ಕೆ ದಕ್ಷಿಣ ಕನ್ನಡದ ಯಕ್ಷ ಕಲಾವಿದರ ಸಮಾಗಮದಿಂದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಶ್ರೀ ದೇವಿ ಮಹಾತ್ಮೆ ಯಕ್ಷಗಾನ ಪ್ರಸಂಗ ಏರ್ಪಡಿಸಲಾಗಿದೆ. ಇದಕ್ಕೆ ಪ್ರವೇಶ ಉಚಿತವಾಗಿರುತ್ತದೆ.

**ದಕ್ಷಿಣ ಕನ್ನಡ ವೈದ್ಯರ ಸಾಂಸ್ಕೃತಿಕ ಸಂಘದ ಪದಾಧಿಕಾರಿಗಳು:** ಡಾ. ಸಿ. ಉಮೇಶ್ ಕಾಮತ್ (ಅಧ್ಯಕ್ಷರು), ಡಾ. ಚಂದ್ರಶೇಖರ್ ಭಟ್ (ಉಪಾಧ್ಯಕ್ಷ), ಡಾ. ಎಂ.ಕೆ. ಶಿವಪ್ರಕಾಶ್ (ಕಾರ್ಯದರ್ಶಿ), ಡಾ. ಗಂಗಾಧರ ಶೆಟ್ಟಿ (ಜಂಟಿ ಕಾರ್ಯದರ್ಶಿ), ಡಾ.ಸಂಜಯ್ ಪೈ (ಖಜಾಂಚಿ), ಡಾ.ಪ್ರಕಾಶ್ ಕೆ.ಪ್ರಭು (ವೈಜ್ಞಾನಿಕ ಸಮಿತಿ ಮುಖ್ಯಸ್ಥರು), ಡಾ. ಯು. ಗಣೇಶ್‌ರಾವ್ (ಸಾಂಸ್ಕೃತಿಕ ಸಮಿತಿ ಮುಖ್ಯಸ್ಥರು).

**ಕಾರ್ಯಕಾರಿ ಸಮಿತಿ ಸದಸ್ಯರು :** ಡಾ. ರೂಪ ಪ್ರಕಾಶ್ ಪ್ರಭು, ಡಾ. ಕೆ. ಸತೀಶ್, ಡಾ. ದಿನೇಶ್ ಶೆಟ್ಟಿ ಡಾ. ಯಶವಂತ ರೈ, ಡಾ. ಡಿ.ಎನ್. ಅರುಣ್‌ಕುಮಾರ್, ಡಾ. ಕೆ.ಕೆ. ಗಣೇಶ್, ಡಾ. ಚಂದ್ರಶೇಖರ್ ಶೆಟ್ಟಿ ಡಾ. ಸನತ್ ಕುಮಾರ್ ಹೆಗ್ಡೆ, ಡಾ. ಸುಬ್ರಹ್ಮಣ್ಯರಾವ್.

**ಸಲಹಾ ಸಮಿತಿ ಸದಸ್ಯರು:** ಡಾ. ಕೆ.ಆರ್. ಕಾಮತ್, ಡಾ.ಸತ್ಯಮೂರ್ತಿ ಭಟ್, ಡಾ. ಮೋಹನ್‌ದಾಸ್ ಭಟ್, ಡಾ.ಶ್ರೀಧರ ಪುರಾಣಿಕ್, ಡಾ.ಎನ್.ಚಂದ್ರಶೇಖರ್, ಡಾ.ಪಿ.ಪ್ರಸನ್ನ, ಡಾ.ಎಸ್.ಎಸ್. ಮೋಹನ್.

## ಗೌರವ ಧನ ಹೆಚ್ಚಳವೂ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅಂಗನವಾಡಿ ಕಾರ್ಯಕರ್ತರ ಪ್ರತಿಭಟನೆ



ಮೈಸೂರು, ಸೆ.15(ಜಿಎ)–ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್, ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟಿಸಲಾಯಿತು.

ಮೈಸೂರಿನ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಜಮಾಯಿಸಿದ ನೂರಾರು ಮಂದಿ ಮೈಸೂರು ಜಿಲ್ಲೆಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಘೋಷಣೆ ಕೂಗಿ ಧರಣಿ ಕುಳಿತರು.

ಅಂಗನವಾಡಿ ಕಾರ್ಯಕರ್ತೆಯರಿಗೆ 15 ಸಾವಿರ ರೂ. ಸಹಾಯಕಿಯರಿಗೆ 10 ಸಾವಿರ ರೂ. ಗೌರವಧನ ಹೆಚ್ಚಿಸಬೇಕು. ನಿವೃತ್ತರಿಗೆ 3 ಲಕ್ಷ ರೂ. ಇಡಿಗಂಟು ನೀಡುವ ಭರವಸೆಯ 6ನೇ ಗ್ಯಾರಂಟಿಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಿ, ನಿವೃತ್ತಿ ಹೊಂದಿದ ಕಾರ್ಯಕರ್ತೆ ಮತ್ತು ಸಹಾಯಕಿರಿಗೆ 5 ಸಾವಿರ ರೂ. ಮಾಸಿಕ ಪಿಂಚಣಿ ನೀಡಬೇಕೆಂದು ಆಗ್ರಹಿಸಿದರು.

ಅಂಗನವಾಡಿ ವ್ಯವಸ್ಥೆಗೆ ಪರ್ಯಾಯವಾಗಿ ಶಿಶುಪಾಲನಾ ಕೇಂದ್ರಗಳು ಮತ್ತು ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲು ಸರ್ಕಾರದ ವಿವಿಧ ಇಲಾಖೆಗಳು ಹೊರಡಿಸಿರುವ ಆದೇಶವನ್ನು ಹಿಂಪಡೆದು ಅಂಗನವಾಡಿ ಕೇಂದ್ರಗಳಲ್ಲಿಯೇ ಶಾಲಾ ಪೂರ್ವ ತರಗತಿಗಳನ್ನು (ಯುಕೆಜಿ, ಎಲ್‌ಕೆಜಿ) ನಡೆಸಲು ವಿಶೇಷ ಸವಲತ್ತುಗಳನ್ನು ನೀಡಬೇಕು ಮತ್ತು ಖಾಲಿ ಇರುವ ಕಾರ್ಯಕರ್ತೆಯರು, ಸಹಾಯಕಿಯರ ಹುದ್ದೆಗಳನ್ನು 3 ತಿಂಗಳೊಳಗೆ ಭರ್ತಿ ಮಾಡಿ ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ನಗರ, ಗ್ರಾಮಾಂತರ, ತಿ.ನರಸೀಪುರ, ಹೆಚ್.ಡಿ. ಕೋಟೆ ಮತ್ತು ಪಿರಿಯಾಪಟ್ಟಣ ತಾಲೂಕಿನ ನೂರಾರು ಅಂಗನವಾಡಿ ಕಾರ್ಯಕರ್ತೆರು ಮತ್ತು ಸಹಾಯಕಿಯರು ಭಾಗಿಯಾಗಿದ್ದರು.

## ಶುಲ್ಕ ಏರಿಕೆ, ಗೊಂದಲ ಖಂಡಿಸಿ ವಿದ್ಯಾರ್ಥಿಗಳ ಪ್ರತಿಭಟನೆ




ಮೈಸೂರು, ಸೆ.15(ಜಿಎ)–ಮಹಾರಾಜ ಕಾಲೇಜಿನ ಕೋರ್ಸ್‌ಗಳ ಶುಲ್ಕ ಏರಿಕೆ ವಿರೋಧಿಸಿ ಹಾಗೂ ಪ್ರವೇಶಾತಿ ಶುಲ್ಕದ ಗೊಂದಲದ ವಿರುದ್ಧ ಎಐಡಿಎಸ್‌ಓ ನೇತೃತ್ವದಲ್ಲಿ ಮಹಾರಾಜ ಕಾಲೇಜು ವಿದ್ಯಾರ್ಥಿಗಳು ಶುಕ್ರವಾರ ಮೈಸೂರು ವಿವಿಯ ಕಾರ್ಯಸೌಧ ಕ್ರಾಫರ್ಡ್ ಹಾಲ್ ಮುಂಭಾಗ ಪ್ರತಿಭಟನೆ ನಡೆಸಿದರು.

ಈ ವೇಳೆ ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಸುಭಾಷ್ ಬೆಟ್ಟದಕೊಪ್ಪ ಮಾತನಾಡಿ, ಮಹಾರಾಜ ಕಾಲೇಜಿನ ಪ್ರವೇಶಾತಿ ಶುಲ್ಕವು, ಬೇರೆ ಕಾಲೇಜಿಗೆ ಹೋಲಿಸಿದರೆ ತುಂಬಾ ದುಬಾರಿಯಾಗಿದೆ.

ಮಹಾರಾಜ ಕಾಲೇಜಿನ ಬಿಎ ಕೋರ್ಸ್‌ಗಳ ಶುಲ್ಕ 7,500 ಇದೆ. ಆದರೆ ಕುವೆಂಪು ಪದವಿ ಕಾಲೇಜು, ಮಹಾರಾಣಿ ಕಾಲೇಜಿನಲ್ಲಿ ಅದೇ ಕೋರ್ಸ್‌ಗೆ ಶುಲ್ಕ 4,000 ರೂ.ಗಳು ಇದೆ. ಬಿಎ ಓದುವ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಲ್ಯಾಬ್ ಶುಲ್ಕ ಎಂದು ಹೆಚ್ಚುವರಿಯಾಗಿ 1,200 ರೂ. ಸಂಗ್ರಹಣೆ ಮಾಡಲಾಗುತ್ತಿದ್ದು, ವಿದ್ಯಾರ್ಥಿಗಳಿಗೆ 2 ವರ್ಷಗಳಲ್ಲಿ ಒಂದು ದಿನವೂ ಕಂಪ್ಯೂಟರ್ ಕುರಿತು ತರಗತಿಗಳು ನಡೆದಿಲ್ಲ ಎಂದು ಆರೋಪಿಸಿದರು.

ಕಾಲೇಜಿನಲ್ಲಿ ಎಸ್‌ಸಿ, ಎಸ್ಟಿ, ಓಬಿಸಿ ಮತ್ತು ಜಿಎಂ ವಿದ್ಯಾರ್ಥಿಗಳಿಗೆ ಎಷ್ಟು ಶುಲ್ಕ ಪಾವತಿಸಬೇಕೆಂದು ಸರಿಯಾಗಿ ವಿವರವನ್ನು ನೀಡುತ್ತಿಲ್ಲ. ಹೆಚ್ಚುವರಿಯಾಗಿ ಎಸ್‌ಸಿ, ಎಸ್ಟಿ ವಿದ್ಯಾರ್ಥಿಗಳಿಗೆ ಕಳೆದ 4 ಸೆಮಿಸ್ಟರ್ ಪರೀಕ್ಷೆ ಶುಲ್ಕ ಪಾವತಿಸಬೇಕೆಂದು ಹೇಳುತ್ತಿದ್ದಾರೆ. ಆದರೆ, ಎಸ್‌ಸಿ, ಎಸ್ಟಿ, ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಇಲ್ಲವೆಂದು ಹೇಳಲಾಗಿದೆ. ಅಲ್ಲದೇ 4 ಸೆಮಿಸ್ಟರ್ ಪರೀಕ್ಷೆಗಳು ಮುಗಿದೇ ಹೋಗಿವೆ. ಇಂತಹ ಸಂದರ್ಭದಲ್ಲಿ ಶುಲ್ಕ ಕಟ್ಟಿಸಿಕೊಳ್ಳುವ ಅವಶ್ಯಕತೆಯಾದರು ಏನು!? ಎಂದು ಪ್ರಶ್ನಿಸಿದರು.

ಮಹಾರಾಜ ಕಾಲೇಜಿಗೆ ಬರುವವರು ಬಡವರು, ರೈತ, ಕೂಲಿ ಕಾರ್ಮಿಕರ ಮಕ್ಕಳು. ಹಾಗಾಗಿ ಶುಲ್ಕ ಏರಿಕೆ ಮಾಡಬಾರದು. ಕಳೆದ ಸಾಲಿನ ಪರೀಕ್ಷಾ ಶುಲ್ಕವನ್ನು ಕಟ್ಟಿಸಿಕೊಳ್ಳಬಾರದು ಎಂದು ಅಗ್ರಹಿಸಿದರು.

ನಿರಂತರವಾಗಿ ಶುಲ್ಕವನ್ನು ಏರಿಕೆ ಮಾಡುತ್ತಿರುವುದು ವಿದ್ಯಾರ್ಥಿ ವಿರೋಧಿ ಹಾಗೂ ಶಿಕ್ಷಣ ವಿರೋಧಿ ನಿಲುವು. ಆರ್ಥಿಕ ಬಿಕ್ಕಟ್ಟಿನ ಜೊತೆಗೆ, ಕೋರ್ಸ್‌ಗಳ ಶುಲ್ಕಗಳು ಹೆಚ್ಚಾಗುತ್ತಿರುವುದರಿಂದ ಉನ್ನತ ವ್ಯಾಸಂಗಕ್ಕೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿದೆ. ಹೀಗಿರುವಾಗ, ಕೋರ್ಸ್‌ಗಳ ಶುಲ್ಕ ನಿರಂತರ ಏರಿಕೆ ಆಗುತ್ತಿದ್ದರೆ, ಲಕ್ಷಾಂತರ ಬಡ ಕುಟುಂಬದ ವಿದ್ಯಾರ್ಥಿಗಳು ಉನ್ನತ ಶಿಕ್ಷಣದ ಕನಸನ್ನೇ ಕೈ ಬಿಡುವಂತಾಗುತ್ತದೆ ಈ ಹಿನ್ನೆಲೆಯಲ್ಲಿ ಮೈಸೂರು ವಿವಿಯು ವಿದ್ಯಾರ್ಥಿಗಳ ಮೇಲೆ ಶುಲ್ಕದ ಹೊರೆಯನ್ನು ಹೊರಿಸಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ವಿವಿಯ ರಿಜಿಸ್ಟ್ರಾರ್ ಪ್ರೊ.ಮಹದೇವನ್ ಅವರಿಗೆ ವಿದ್ಯಾರ್ಥಿಗಳು ಮನವಿ ಸಲ್ಲಿಸಿದರು. ಕಳೆದ 2 ವರ್ಷದಿಂದ ಎಸ್‌ಸಿ, ಎಸ್ಟಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಕಟ್ಟಿಸಿಕೊಳ್ಳುತ್ತಿಲ್ಲ ಎಂದು ಪ್ರೊ.ಮಹದೇವನ್ ತಿಳಿಸಿದರು. ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಪದಾಧಿಕಾರಿಗಳಾದ ನಿತಿನ್, ಅಭಿ, ಬಸವ, ವಿದ್ಯಾರ್ಥಿಗಳಾದ ಸಚಿನ್, ರವಿ, ಸುಮನ್, ಅಜಯ್, ರಘು ಇತರರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಶನಿವಾರ 16 ಸೆಪ್ಟೆಂಬರ್ 2023

# ಪ್ರಪಂಚಕ್ಕೆ ಭಾರತದ ಸಂವಿಧಾನ ದೊಡ್ಡದು

## ಉಸ್ತುವಾರಿ ಸಚಿವ ಚಲುವರಾಯಸ್ವಾಮಿ




ಮಂಡ್ಯ, ಸೆ.15– ಭಾರತದ ಸಂವಿಧಾನ ಪ್ರಪಂಚದ ದೊಡ್ಡ ಸಂವಿಧಾನವಾಗಿದೆ. ದೇಶದ ಕಟ್ಟ ಕಡೆ ವ್ಯಕ್ತಿಗೂ ಸಮಾನ ಅವಕಾಶ ಸಂವಿಧಾನದಲ್ಲಿದೆ. ಈ ಮೂಲಕ ಪ್ರಜಾಪ್ರಭುತ್ವದ ಕಲ್ಪನೆ ಕೊಟ್ಟ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಸ್ಮರಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ನಗರದ ವಿಶ್ವವಿದ್ಯಾನಿಲಯದ ಆವರಣದಲ್ಲಿ ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಂವಿಧಾನ ಎಲ್ಲರಿಗೂ ಒಂದೇ ರೀತಿಯ ಅವಕಾಶ ಕೊಟ್ಟಿದೆ. ಯಾರು ಬೇಕಾದರೂ ರಾಷ್ಟ್ರಪತಿ, ಪ್ರಧಾನಿ ಹಾಗೂ ಇನ್ನಿತರ ಗೌರವದ ಹುದ್ದೆಗಳನ್ನು ಪಡೆಯಬಹುದು. ಸಂವಿಧಾನ ಕೊಟ್ಟ ಮತದಾನದ ಅವಕಾಶದಿಂದಲೇ ನಾವಿಂದು ಚುನಾಯಿತ ಪ್ರತಿನಿಧಿಗಳಾಗಿ ಜನಸೇವೆ ಮಾಡುತಿದ್ದೇವೆ ಎಂದರು.

ಸಂವಿಧಾನದ ಪರಿಕಲ್ಪನೆ ಇಲ್ಲದಿದ್ದರೆ ನಮ್ಮ ಸಮಾಜದ ಸ್ಥಿತಿ ಹೀಗಿರುತ್ತಿರಲಿಲ್ಲ. ಬಡವರು ಹಾಗೂ ಶ್ರಮಿಕರು ಬಂಡವಾಳ ಶಾಹಿಗಳ ಹತ್ತಿರ ಕೈಕಟ್ಟಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. ಇಂದು ನಾವು ನಮಗೂ ಹಕ್ಕಿದೆ ನಮಗೂ ಅವಕಾಶ ಕೊಡಿ ಎಂದು ಕೇಳುವುದಕ್ಕೂ ಅಂಬೇಡ್ಕರ್ ಕೊಟ್ಟ ಸಂವಿಧಾನವೇ ಕಾರಣ. ಹಾಗಾಗಿ ಸಂವಿಧಾನದ ಮೇಲೆ ಎಲ್ಲರಿಗೂ ಗೌರವವಿರಲಿ ಎಂದು ಸಲಹೆ ನೀಡಿದರು. ಶಾಲಾ ಹಾಗೂ ಕಾಲೇಜುಗಳಲ್ಲಿ ಇಂದಿನಿಂದ ಸಂವಿಧಾನ ಪೀಠಿಕೆ ಓದು ಕಡ್ಡಾಯವಾಗಿದ್ದು, ಎಲ್ಲಾ ಶಾಲಾ ಕಾಲೇಜುಗಳಲ್ಲಿ ಬೆಳಗಿನ ಪ್ರಾರ್ಥನೆ ನಂತರ ಸಂವಿಧಾನದ ಪೀಠಿಕೆ ಓದಬೇಕು. ಸಂವಿಧಾನದ ವಿರುದ್ಧವಾಗಿ ಮಾತನಾಡುವುದು ಹಾಗೂ ಅದರ ವಿರುದ್ಧ ನಡೆದುಕೊಳ್ಳುವುದನ್ನು ಸರ್ಕಾರ ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ. ಸಂವಿಧಾನ ವಿರೋಧಿ ಚಟುವಟಿಕೆ ನಡೆಸುವವರು ದೇಶ ಹಾಗೂ ರಾಜ್ಯಕ್ಕೆ ಮಾರಕ ಎಂದು ಕಳವಳ ವ್ಯಕ್ತಪಡಿಸಿದರು.

**ಐದು ಸಾವಿರ ವಿದ್ಯಾರ್ಥಿಗಳು ಭಾಗಿ:** ಐದು ಸಾವಿರ ವಿದ್ಯಾರ್ಥಿಗಳೊಂದಿಗೆ ಸಾಮೂಹಿಕವಾಗಿ ಸಂವಿಧಾನ ಪೀಠಿಕೆ ಓದಲಾಯಿತು. ಮಕ್ಕಳು ಬೆಳಗ್ಗೆಯಿಂದಲೇ ಸಂವಿಧಾನ ಪೀಠಿಕೆ ಓದಲು ನಿಗದಿಪಡಿಸಿದ್ದ ಸ್ಥಳದಲ್ಲಿ ಇದ್ದರು. ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಸಂವಿಧಾನ ಪೀಠಿಕೆಯ ಒಂದು ಪ್ರತಿ ನೀಡಲಾಯಿತು.

ವೇದಿಕೆಯಲ್ಲಿ ಶಾಸಕರಾದ ಗಣಿಗ ರವಿಕುಮಾರ್, ಕೆ.ಎಂ.ಉದಯ್‌ಗೌಡ, ಎಂಎಲ್‌ಸಿ ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ.ಕುಮಾರ್, ಮಂಡ್ಯ ವಿವಿ ಕುಲಪತಿ ಡಾ.ಪುಟ್ಟರಾಜು, ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಸಿದ್ದಲಿಂಗೇಶ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶ್ರೀನಿವಾಸ್ ಸೇರಿದಂತೆ ಇನ್ನಿತರರಿದ್ದರು.

# ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ



ಮದ್ದೂರು, ಸೆ.15– ಗ್ರಾಹಕರಿಗೆ ಉತ್ತಮ ಸೇವೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಬೆಸಗರಹಳ್ಳಿ ವಲಯ ಸಮಿತಿಯಿಂದ ಬೆಸಗರಹಳ್ಳಿಯ ಬ್ಯಾಂಕ್ ಆಫ್ ಬರೋಡಾಗೆ ಶುಕ್ರವಾರ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು.

ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಹನುಮೇಶ್ ಮಾತನಾಡಿ, ಆರ್‌ಬಿಐ ನಿರ್ದೇಶನದಂತೆ ಕೂಲಿಕಾರರಿಗೆ 1 ಲಕ್ಷದವರೆಗೆ ಭದ್ರತಾ ರಹಿತ ಸಾಲ ನೀಡಬೇಕು. ಗ್ರಾಹಕರ ಉಳಿತಾಯ ಖಾತೆಯಲ್ಲಿರುವ ಹಣಕ್ಕೆ ಪ್ರತಿ ತಿಂಗಳು ಬಡ್ಡಿ ನೀಡಬೇಕು. ಬ್ಯಾಂಕ್ ಸೇವಾ ವಲಯ ಗುರುತಿಸಬೇಕು. ಸೇವಾ ವಲಯ ಮೀರಿ ಖಾತೆ ತೆರೆದರೆ ಅವರಿಗೂ ಸಾಲ ಸೌಲಭ್ಯ ಒದಗಿಸಬೇಕು. 80 ವರ್ಷ ಮೇಲ್ಪಟ್ಟ ವಯೋವೃದ್ಧರಿಗೆ, ಶೇ.80ಕ್ಕೂ ಹೆಚ್ಚು ವಿಕಲಚೇತನರಿಗೆ ಮನೆ ಬಾಗಿಲಿಗೆ ಮಾಸಾಶನ ನೀಡಲು ಕ್ರಮವಹಿಸಬೇಕು. ಪ್ರತಿ 6 ತಿಂಗಳಿಗೊಮ್ಮೆ ಗ್ರಾಹಕರ ಅದಾಲತ್ ನಡೆಸಿ ಕುಂದು ಕೊರತೆ ಆಲಿಸಿ ಗ್ರಾಹಕರ ಸಮಸ್ಯೆಗಳನ್ನು ಪರಿಹರಿಸಬೇಕು. ಮೈಕ್ರೋ ಫೈನಾನ್ಸ್ ಮೂಲಕ ಬ್ಯಾಂಕ್ ಸ್ವಸಹಾಯ ಸಂಘಗಳಿಗೆ ಸಾಲ ನೀಡುವುದನ್ನು ನಿಲ್ಲಿಸಿ ನೇರವಾಗಿ ಬ್ಯಾಂಕ್ ಮೂಲಕ ಸಾಲ ನೀಡಲು ಕ್ರಮವಹಿಸಬೇಕು. ಬ್ಯಾಂಕ್‌ಗೆ ಬರುವ ಗ್ರಾಹಕರೊಂದಿಗೆ ಕನ್ನಡದಲ್ಲಿ ವ್ಯವಹರಿಸಬೇಕು ಮತ್ತು ಕಾಗದ ಪತ್ರಗಳು ಕೂಡ ಕನ್ನಡದಲ್ಲಿರಬೇಕು. ಗ್ರಾಹಕರಿಗೆ ಯಾವುದೇ ಅಡೆತಡೆ ಮಾಡದೆ ಮತ್ತು ಸಬೂಬು ಹೇಳದೆ ಪಾಸ್‌ಬುಕ್ ಪ್ರಿಂಟ್ ಮಾಡಿಕೊಡಬೇಕು. ವೃದ್ಧಾಪ್ಯ, ಅಂಗವಿಕಲ, ವಿಧವಾ, ಮನಸ್ವಿನಿ ಸೇರಿದಂತೆ ಇತರ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳಿಗೆ ಬ್ಯಾಂಕ್ ನಲ್ಲೆ ಹಣ ವಿತರಿಸಲು ಸೂಕ್ತ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.

ಬ್ಯಾಂಕ್ ವ್ಯವಸ್ಥಾಪಕ ಚಿರಂಜನ್ ಮಾತನಾಡಿ, ಕೂಲಿಕಾರರ ಸಂಘದ ಸಮಸ್ಯೆಗಳನ್ನು ಶೀಘ್ರ ಬಗೆಹರಿಸಲು ಪ್ರಯತ್ನಿಸಲಾಗುವುದು. ಗ್ರಾಹಕರ ಅನುಕೂಲಕ್ಕಾಗಿ ಬೆಸಗರಹಳ್ಳಿ, ಬೆಸಗರಹಳ್ಳಿ ಅಡ್ಡ ರಸ್ತೆಯಲ್ಲಿ ಸೇವಾ ಕೇಂದ್ರ ಪ್ರಾರಂಭಿಸಲಾಗಿದೆ ಎಂದರು.

ಪ್ರತಿಭಟನೆಯಲ್ಲಿ ರಾಜ್ಯ ಸಮಿತಿ ಸದಸ್ಯ ಬಿ.ಎ.ಮಧುಕುಮಾರ, ತಾಲೂಕು ಕಾರ್ಯದರ್ಶಿ ಟಿ.ಪಿ.ಅರುಣ್ ಕುಮಾರ್, ಹೋರಾಟಗಾರ ಸಿ.ಶ್ರೀನಿವಾಸ್, ಮುಖಂಡ ರಾದ ನಂಜುಂಡಯ್ಯ, ವೆಂಕಟೇಶ್, ರಮೇಶ್, ರಾಜು, ಜಯರಾಮು, ಯೋಗೇಶ, ಚಿಕ್ಕ ತಾಯಮ್ಮ, ಬೆಟ್ಟಮ್ಮ, ಕಮಲಮ್ಮ, ಜಯ ಕುಮಾರ್, ಡಿ.ಕೆ.ಶಿವಣ್ಣ, ಕುಮಾರ್, ಮರಿಸ್ವಾಮಿ, ಬೋರೇಗೌಡ, ಶಶಿಧರ, ಶಿವ ಲಿಂಗಯ್ಯ, ಕೃಷ್ಣ, ರೇಷ್ಮಾಬಾನು, ಚಂದ್ರು ಸೇರಿದಂತೆ ಇತರರಿದ್ದರು.

# ಸರ್ಕಾರಿ ಶಾಲೆಯಲ್ಲಿ ಎಲ್‌ಕೆಜಿ, ಯುಕೆಜಿ ಆರಂಭ ವಿರೋಧಿಸಿ ಪ್ರತಿಭಟನೆ



ಪಾಂಡವಪುರ, ಸೆ.15– ರಾಜ್ಯ ಸರ್ಕಾರ ಗ್ರಾಪಂ ಮಟ್ಟದಲ್ಲಿ ಶಿಶುಪಾಲನಾ ಕೇಂದ್ರ ಹಾಗೂ ಸರ್ಕಾರಿ ಶಾಲೆಯಲ್ಲಿ ಎಲ್‌ಕೆಜಿ–ಯುಕೆಜಿ ತರಗತಿ ಆರಂಭಿಸುತ್ತಿರುವುದನ್ನು ವಿರೋಧಿಸಿ ಪಟ್ಟಣದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಪಟ್ಟಣದ ಮಿನಿ ವಿಧಾನಸೌಧದ ಎದುರು ಜಮಾಯಿಸಿ ಸಂಘದ ಅಧ್ಯಕ್ಷೆ ರುಕ್ಮಿಣಿದೇವಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಕಾರ್ಯಕರ್ತೆಯರು ಅಂಗನವಾಡಿ ಕೇಂದ್ರಗಳನ್ನು ಉಳಿಸಿ, ಅಂಗನವಾಡಿ ವ್ಯವಸ್ಥೆ ಬಲಗೊಳಿಸಿ ಎಂದು ಘೋಷಣೆ ಕೂಗಿ ಶಿರಸ್ತೆದಾರ್ ಮೋಹನ್‌ಗೆ ಮನವಿ ಸಲ್ಲಿಸಿದರು.

ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ ಯೋಜನೆಯಡಿ 48 ವರ್ಷಗಳಿಂದ 6 ವರ್ಷ ಒಳಪಟ್ಟ ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ಶಿಕ್ಷಣ ನೀಡುವ ಕೆಲಸ ಮಾಡಿಕೊಂಡು ಬರುತ್ತಿದ್ದೇವೆ. ಇದೀಗ ರಾಜ್ಯ ಸರ್ಕಾರ ಗ್ರಾಪಂ ಮಟ್ಟದಲ್ಲಿ ಶಿಶು ಪಾಲನಾ ಕೇಂದ್ರ ಹಾಗೂ ಶಾಲೆಗಳಲ್ಲಿ ಎಲ್‌ಕೆಜಿ–ಯುಕೆಜಿ ತರಗತಿ ಆರಂಭಿಸುತ್ತಿರುವುದು ಅಂಗನವಾಡಿ ಕೇಂದ್ರಗಳ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ಒಂದು ವೇಳೆ ಇವು ಆರಂಭಗೊಂಡರೆ ಮಕ್ಕಳು ಅಂಗನವಾಡಿ ಕೇಂದ್ರಗಳಿಗೆ ಬರುವುದು ಕಡಿಮೆಯಾಗಿ ಮುಂದೊಂದು ದಿನ ಅಂಗನವಾಡಿ ಮುಚ್ಚುವ ಹಂತಕ್ಕೆ ತಲುಪಲಿವೆ. ಆದ್ದರಿಂದ ರಾಜ್ಯ ಸರ್ಕಾರ ಅಂಗನವಾಡಿ ವ್ಯವಸ್ಥೆ ಬಲವರ್ಧನೆಗೊಳಿಸಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷ ಚುನಾವಣೆ ಪೂರ್ವ ಘೋಷಿಸಿದ್ದ ಅಂಗನವಾಡಿ ಕಾರ್ಯಕರ್ತೆಯರಿಗೆ 15 ಸಾವಿರ, ಸಹಾಯಕಿಯರಿಗೆ 10 ಸಾವಿರ ಸಹಾಯಧನ ಹಾಗೂ ನಿವೃತ್ತರಿಗೆ 3 ಲಕ್ಷದವರೆಗೆ ಇಡುಗಂಟು ನೀಡುವ ಭರವಸೆಯ 6ನೇ ಗ್ಯಾರೆಂಟಿ ಘೋಷಣೆ ಮಾಡಬೇಕು. ಜೊತೆಗೆ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಗ್ರಾಚ್ಯುಟಿ ಪಡೆಯಲು ಅರ್ಹರು ಎಂಬ ಸುಪ್ರೀಂಕೋರ್ಟ್ ತೀರ್ಪನ್ನು ಎಲ್ಲಾ ನಿವೃತ್ತರಿಗೂ ಅನ್ವಯವಾಗುವಂತೆ ಜಾರಿಗೊಳಿಸಲು ಆಡಳಿತಾತ್ಮಕ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಚಂದ್ರಕಲಾ, ಹರಿಣಿ, ದೇವಮ್ಮ, ಮೇರಿ, ಚೈತನ್ಯ, ಅಂಬುಜ, ಶೀಲಾ, ಶೋಭಾ, ಶಾರದ, ರೇಣುಕಾ, ಪ್ರತಿಮಾ, ಮಂಜುಳಾ ಇತರರಿದ್ದರು.

## ಗಾಂಧಿ ಜಯಂತಿಯಂದು ವಿದ್ಯಾರ್ಥಿಗಳ ಜೊತೆ ಒಂದು ದಿನ

ಕೆ.ಆರ್.ಪೇಟೆ, ಸೆ.15– ತಾಲೂಕು ಆರ್‌ಟಿಓ ಮಲ್ಲಿಕಾರ್ಜುನ್ ಅಭಿಮಾನಿ ಬಳಗ (ರಿ) ಹಾಗೂ ಮೈಸೂರಿನ ಬಿಹೆಚ್‌ಎ ಫೌಂಡೇಶನ್ ಸಹಯೋಗದೊಂದಿಗೆ ಗಾಂಧಿ ಜಯಂತಿ ಪ್ರಯುಕ್ತ ಅ.2ರಂದು ಬೆಳಗ್ಗೆ 10 ಗಂಟೆಗೆ ವಿದ್ಯಾರ್ಥಿಗಳ ಜೊತೆ ಒಂದು ದಿನ ಕಾರ್ಯಕ್ರಮವನ್ನು ಪಟ್ಟಣದ ಆರ್‌ಟಿಓ ಮಲ್ಲಿಕಾರ್ಜುನ್ ಕಚೇರಿಯ ನಳಂದ ಕಾನ್ವೆಂಟ್ ಬಳಿ ಹಮ್ಮಿಕೊಳ್ಳಲಾಗಿದೆ.

ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳೊಂದಿಗೆ ಹೆಸರಾಂತ ವಾಗ್ಮಿ, ಮಾರ್ಗದರ್ಶಕರಾದ ಪ್ರೊ.ಶಂಕರ್ ಬೆಳ್ಳೂರ್ ಸಂವಾದ ನಡೆಸಿ ವಿದ್ಯಾರ್ಥಿಗಳ ಪ್ರಶ್ನೆಗೆ ಉತ್ತರ ನೀಡಲಿದ್ದಾರೆ. ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸ ಮತ್ತು ಉದ್ಯೋಗಕ್ಕೆ ಮಾರ್ಗದರ್ಶನ ಪಡೆಯುವ ಕಾರ್ಯಕ್ರಮವಾಗಿದೆ. ಹೀಗಾಗಿ ಕಾರ್ಯಕ್ರಮಕ್ಕೆ ತಾಲೂಕಿನ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ಉಪನ್ಯಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಹೆಸರು, ಶಾಲೆ ಹೆಸರನ್ನು 2 ದಿನ ಮುಂಚಿತವಾಗಿ ನೋಂದಣಿ ಮಾಡಿಸಬೇಕು. ಮಾಹಿತಿಗೆ 9731279740, 08230200235 ಸಂಪರ್ಕಿಸಬಹುದಾಗಿದೆ.

## ಅರ್ಜಿ ಆಹ್ವಾನ

ಮಂಡ್ಯ, ಸೆ.15– ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2023–24ನೇ ಸಾಲಿನಲ್ಲಿ ಶ್ರವಣದೋಷವುಳ್ಳ ವ್ಯಕ್ತಿಗಳ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರಗಳನ್ನು ಉಚಿತವಾಗಿ ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಸೆ.29 ಕೊನೆ ದಿನ. ಹೆಚ್ಚಿನ ಮಾಹಿತಿಗೆ ದೂ: 08232–231090/239234 ಸಂಪರ್ಕಿಸಿ.

# ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆಗೆ ಮಾಲಾರ್ಪಣೆ



ಮಂಡ್ಯ, ಸೆ.15– ಸರ್ ಎಂ.ವಿಶ್ವೇಶ್ವರಯ್ಯ ಜನ್ಮ ದಿನಾಚರಣೆ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ಉದ್ಯಾನವನದಲ್ಲಿರುವ ವಿಶ್ವೇಶ್ವರಯ್ಯ ಪ್ರತಿಮೆಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾಲಾರ್ಪಣೆ ಮಾಡಿದರು.

ಈ ವೇಳೆ ಶಾಸಕ ರವಿಕುಮಾರ್‌ಗೌಡ, ಎಂಎಲ್‌ಸಿ ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ.ಕುಮಾರ್, ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್‌ನಾಗರಾಜು, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿ ಎಸ್.ಎಚ್.ನಿರ್ಮಲಾ ಸೇರಿದಂತೆ ಇನ್ನಿತರರಿದ್ದರು.

## ಪಾಪಣ್ಣ ನಿಧನ



ಕೆ.ಆರ್.ಪೇಟೆ, ಸೆ.15– ತಾಲೂಕಿನ ಶೀಳನೆರೆ ಗ್ರಾಮದ ಹಿರಿಯ ಮುಖಂಡ ಹಾಗೂ ಪ್ರಗತಿಪರ ರೈತ ಪಾಪಣ್ಣ(93) ಶುಕ್ರವಾರ ಸಂಜೆ ನಿಧನರಾದರು.

ಮೃತರು ಪತ್ನಿ ಸಾವಿತ್ರಮ್ಮ, ಗ್ರಾಪಂ ಸದಸ್ಯ ಎಸ್.ಪಿ.ಸಿದ್ದೇಶ್, ಐಸಿಎಲ್ ಸಕ್ಕರೆ ಕಾರ್ಖಾನೆ ಸೂಪರ್‌ವೈಸರ್ ಎಸ್.ಪಿ. ದೇವರಾಜು, ಇಂಜಿನಿಯರ್ ರಮೇಶ್ ಸೇರಿದಂತೆ ನಾಲ್ವರು ಪುತ್ರರು, ಮೊಮ್ಮಕ್ಕಳು, ಮರಿ ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ (ಸೆ.16) ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಶೀಳನೆರೆಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಸರ್.ಎಂ.ವಿಶ್ವೇಶ್ವರಯ್ಯ, ಟಿ.ಎಸ್.ಸುಬ್ಬಣ್ಣ ಅವರ ಆದರ್ಶಗಳು ಇಂದಿನ ವಿದ್ಯಾರ್ಥಿಗಳಿಗೆ ಮಾದರಿ

## ಸಾಹಿತಿ ಬನ್ನೂರು ಕೆ.ರಾಜು ಅಭಿಮತ



ಮೈಸೂರು, ಸೆ.15(ಎಸ್‌ಪಿಎನ್)– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅಭಿವೃದ್ಧಿ ಚಿಂತನೆಗಳಲ್ಲಿ ಹೆಜ್ಜೆಯ ಗುರುತಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಹಾಗೂ ಸಾರ್ವಜನಿಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಇತರರಿಗೆ ಮಾದರಿಯಾಗಿದ್ದ ಹಿರಿಯ ಗಾಂಧಿವಾದಿ ಟಿ.ಎಸ್.ಸುಬ್ಬಣ್ಣನವರ ಬದುಕು, ಆದರ್ಶ ಇಂದಿನ ವಿದ್ಯಾರ್ಥಿಗಳಿಗೆ ಮಾದರಿ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ತಿಳಿಸಿದರು.

ಮೈಸೂರು ವಿದ್ಯಾರಣ್ಯಪುರಂನಲ್ಲಿರುವ ಸಾರ್ವಜನಿಕ ವಸತಿ ನಿಲಯ ಆವರಣದಲ್ಲಿ ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ಪ್ರೌಢಶಾಲೆ ಮತ್ತು ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗದ ಸಹಯೋಗದೊಂದಿಗೆ ಆಯೋಜಿಸಿದ್ದ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯ ಜನ್ಮ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು.

ಮೈಸೂರಿನ ಟಿ.ಎಸ್.ಸುಬ್ಬಣ್ಣ ಪ್ರೌಢಶಾಲೆಯಲ್ಲಿ ಜ್ಞಾನಪೀಠ ಪುರಸ್ಕೃತ ಯು.ಆರ್.ಅನಂತಮೂರ್ತಿ, ನಾಡಿನ ಖ್ಯಾತ ವಿಮರ್ಶಕ ಜಿ.ಎಚ್.ನಾಯಕ್ ಸೇರಿದಂತೆ ಇತರೆ ಗಣ್ಯರು ಓದಿದ್ದಾರೆ ಎಂಬುದೇ ಇಂದಿನ ವಿದ್ಯಾರ್ಥಿಗಳಿಗೆ ಮಾದರಿ. ಅಲ್ಲದೆ, ಟಿ.ಎಸ್.ಸುಬ್ಬಣ್ಣನವರು ತಮ್ಮ ಜೀವಿತಾವಧಿಯಲ್ಲಿ ಸ್ವಚ್ಛತೆಗೆ ಹಾಗೂ ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದರು ಎಂದು ಕೆಲವು ಘಟನೆಗಳನ್ನು ಉಲ್ಲೇಖಿಸಿ ತಿಳಿಸಿದರು.

ಅದರಂತೆ ಸರ್.ಎಂ.ವಿಶ್ವೇಶ್ವರಯ್ಯನವರೂ ಸಹ ಬಡತನದಲ್ಲಿ ಬೆಳೆದು ಓದಿ, ತಮ್ಮ ಸಾಧನೆಗಳ ಮೂಲಕ ಇಂದಿನ ವಿದ್ಯಾರ್ಥಿಗಳ ಮನಸ್ಸಿನಲ್ಲಿದ್ದಾರೆ. ಈ ಇಬ್ಬರೂ ಮಹಾನೀಯರ ಸಾಧನೆಗಳ ಕೇಳುವುದೇ ಆನಂದ. ಅಂತೆಯೇ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ಕೆಆರ್‌ಎಸ್. ಅಣೆಕಟ್ಟೆ, ಮೈಸೂರು ಬ್ಯಾಂಕ್ ಸ್ಥಾಪನೆ, ಮೈಸೂರು ವಿವಿ ಸ್ಥಾಪನೆ ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂಬ ಆಶಯಗಳನ್ನು ಹೊಂದಿದ್ದರು. ಈ ಚಿಂತನೆಗಳ ಸಾಕಾರ ರೂಪ ಕೊಟ್ಟವರು ಅಂದಿನ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯನವರು ಎಂದರೆ ತಪ್ಪಾಗಲಾರದು ಎಂದರು.

ಒಂದೆಡೆ ಟಿ.ಎಸ್.ಸುಬ್ಬಣ್ಣನವರು ಈ ವಿದ್ಯಾಸಂಸ್ಥೆಯನ್ನು ಸ್ಥಾಪಿಸುವ ಸಂದರ್ಭದಲ್ಲಿ ಅವರು ಪಟ್ಟ ಕಷ್ಟಗಳೆಷ್ಟೋ, ಸ್ವಾತಂತ್ರ್ಯ ಪೂರ್ವದಲ್ಲಿ ಕಷ್ಟಪಟ್ಟು ಹನ್ನೊಂದು ವಿದ್ಯಾಸಂಸ್ಥೆಗಳನ್ನು ಕಟ್ಟಿದ ಪರಿಣಾಮ, ಇಂದು ಹತ್ತಾರು ವಿದ್ಯಾವಂತರಿಗೆ ಉದ್ಯೋಗ ದೊರಕಿದೆ ಹಾಗೂ ಲಕ್ಷಾಂತರ ಮಕ್ಕಳ ವಿದ್ಯಾಭ್ಯಾಸಕ್ಕೆ ನಾಂದಿಯಾಗಿದೆ ಮುಂದೆಯೂ ಆಗಲಿದೆ ಎಂದು ಅಭಿಪ್ರಾಯಪಟ್ಟರು.

ಈ ಇಬ್ಬರು ಮಹಾನೀಯರ ಬದುಕು ಮತ್ತು ಜೀವಿತಾವಧಿಯ ಆದರ್ಶಗಳು ಇಂದಿನ ಸಾಧಕ ವಿದ್ಯಾರ್ಥಿಗಳಿಗೆ ಮಾದರಿಯಾಗುತ್ತವೆ. ಅಲ್ಲದೆ, ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರು ನೆಲೆಸಿದ್ದ ನಾಡಿನಲ್ಲಿ ನಾವು–ನೀವು ವಾಸಿಸುತ್ತಿದ್ದೇವೆ ಎಂಬುದೇ ಹೆಮ್ಮೆಯ ವಿಷಯ ಎಂದರು.

ಈ ವೇಳೆ ಪ್ರೌಢಶಾಲೆ ಮುಖ್ಯಶಿಕ್ಷಕ ನಟರಾಜು, ಸಂಖ್ಯಾಶಾಸ್ತ್ರಜ್ಞ ಎಸ್.ಜಿ. ಸೀತಾರಾಂ, ಹಿರಣ್ಮಯಿ ಪ್ರತಿಷ್ಠಾನದ ಎ.ಸಂಗಪ್ಪ ಇದ್ದರು. ಇದೇ ವೇಳೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ ಬಹುಮಾನ ವಿತರಣೆ ಮಾಡಿದರು.

## 10 ರೂ. ನಾಣ್ಯ ನಿಷೇಧಿಸಿಲ್ಲ: ಡಿಸಿ ರಾಜೇಂದ್ರ ಸ್ಪಷ್ಟನೆ



ಮೈಸೂರು, ಸೆ.15(ಎಸ್‌ಪಿಎನ್)– ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ನೀಡಲ್ಪಟ್ಟಿರುವ 10 ರೂ. ನಾಣ್ಯಗಳು ಚಲಾವಣೆಯಲ್ಲಿದ್ದು, ಎಲ್ಲರೂ ನಿತ್ಯ ವಹಿವಾಟಿನಲ್ಲಿ ಯಾವುದೇ ಸಂಶಯವಿಲ್ಲದೆ ಬಳಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಈ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ಸ್ಪಷ್ಟನೆ ನೀಡಿದ್ದು, 10 ರೂ. ಒಳಗೊಂಡು ಯಾವುದೇ ನಾಣ್ಯ ಹಿಂಜರಿಕೆ ಇಲ್ಲದೆ ಉಪಯೋಗಿಸಬಹುದು. ಕೇಂದ್ರ ಸರ್ಕಾರ, ಆರ್‌ಬಿಐ 10 ರೂ. ನಾಣ್ಯಗಳನ್ನು ನಿಷೇಧಿಸಿಲ್ಲ. ಚಲಾವಣೆಯನ್ನು ಹಿಂಪಡೆದಿಲ್ಲ. ಸಾರ್ವಜನಿಕರು, ವ್ಯಾಪಾರಸ್ಥರು ವದಂತಿಗಳನ್ನು ನಂಬದೆ 10 ರೂ.ನಾಣ್ಯಗಳನ್ನು ಸ್ವೀಕರಿಸಬಹುದು. ಯಾರೇ ಆದರೂ 10.ರೂ ನಾಣ್ಯಗಳನ್ನು ಸ್ವೀಕರಿಸದೇ ಇರುವುದು, ನಾಣ್ಯ ಕಾಯ್ದೆ 2011ರ ಸೆಕ್ಷನ್ 6(1) ಉಲ್ಲಂಘನೆಯಾಗುತ್ತದೆ. 10 ರೂ.ನಾಣ್ಯಗಳನ್ನು ಬಳಸುವುದರಿಂದ ಚಿಲ್ಲರೆಯ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ.

ಈ ಕುರಿತು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯೂ ಸ್ಪಷ್ಟ ನಿರ್ದೇಶನ ನೀಡಿದ್ದು, ಜಿಲ್ಲೆಯ ಹೋಟೆಲ್, ಕೆಎಸ್‌ಆರ್‌ಟಿಸಿ, ಬೀದಿಬದಿ ವ್ಯಾಪಾರಿಗಳು ಒಳಗೊಂಡು ಎಲ್ಲಾ ಸಾರ್ವಜನಿಕರು ರೂ.10 ನಾಣ್ಯಗಳ ಸ್ವೀಕರಿಸಿ ವಹಿವಾಟು ನಡೆಸುವಂತೆ ಮೈಸೂರು ಜಿಲ್ಲಾಧಿಕಾರಿಗಳ ಡಾ.ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು, ಸೆ.15(ಎಸ್‌ಪಿಎನ್)–ಮೈಸೂರು ಜೆ.ಪಿನಗರದ ಹೊರವರ್ತುಲ ರಸ್ತೆಯ ರೈಲ್ವೆ ಬ್ರಿಡ್ಜ್ ಅಗಲೀಕರಣ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಹಮ್ಮಿಕೊಂಡಿರುವುದರಿಂದ ಸೆ.20ರಂದು ಈ ಜಾಗದಲ್ಲಿ ಮುಖ್ಯ ನೀರು ಸರಬರಾಜು ಕೊಳವೆ ಮಾರ್ಗವನ್ನು ಸ್ಥಳಾಂತರಿಸುವ ಕಾರ್ಯ ಹಮ್ಮಿಕೊಳ್ಳಲಾಗಿದೆ.

ಹಾಗಾಗಿ ಕೆಲ ಬಡಾವಣೆಗಳಿಗೆ ಸೆ.20 ಮತ್ತು 21 ರಂದು ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ನೀರು ಸರಬರಾಜು ಮತ್ತು ಒಳಚರಂಡಿ ಪೂರ್ವ ವಿಭಾಗದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.45ರಿಂದ 51(ಶಾರದಾದೇವಿ ನಗರ, ದಟ್ಟಗಳ್ಳಿ 3ನೇ ಹಂತ, ಕುವೆಂಪುನಗರ, ಲಕ್ಷ್ಮೀಪುರಂ, ಸುಣ್ಣದಕೇರಿ, ಅಗ್ರಹಾರ) ಹಾಗೂ ವಾರ್ಡ್ ನಂ.54 ರಿಂದ 65(ಗುಂಡುರಾವ್ ನಗರ, ಚಾಮುಂಡಿಪುರಂ, ಕೃಷ್ಣಮೂರ್ತಿಪುರಂ, ಕುವೆಂಪುನಗರ(ಸಿಐಟಿಬಿ), ರಾಮಕೃಷ್ಣನಗರ, ಎಂ.ಬ್ಲಾಕ್, ಅಶೋಕಪುರಂ, ವಿದ್ಯಾರಣ್ಯಪುರಂ ಭಾಗಶಃ ಪ್ರದೇಶ, ವಿಶ್ವೇಶ್ವರನಗರ, ಜೆ.ಪಿ.ನಗರ, ಅರವಿಂದನಗರ, ಶ್ರೀರಾಂಪುರ) ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ತಿಳಿಸಿದ್ದಾರೆ.

# ಆಟೋ ಮೊಬೈಲ್ ಕ್ಷೇತ್ರದ ಅಭಿವೃದ್ಧಿ ಕನಸು ಕಂಡಿದ್ದ ಸರ್.ಎಂ.ವಿ

## ಲೇಖಕ ಹೆಚ್.ಎಸ್.ಶ್ರೀನಾಥ್ ಅಭಿಮತ




ಮೈಸೂರು, ಸೆ.15(ಎಸ್‌ಪಿಎನ್)– ಕೈಗಾರಿಕೆಗಳ ಬೆಳವಣಿಗೆ ಕುರಿತು ದೂರ ದೃಷ್ಟಿ ಹೊಂದಿದ್ದ ಸರ್.ಎಂ.ವಿಶ್ವೇಶ್ವರಯ್ಯನವರು, ಆಟೋಮೊಬೈಲ್ ಕ್ಷೇತ್ರದ ಅಭಿವೃದ್ಧಿಯ ಕನಸ್ಸು ಕಂಡಿದ್ದರು ಎಂದು ಲೇಖಕ ಎಚ್.ಎಸ್.ಶ್ರೀನಾಥ್ ಹೇಳಿದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಎಂಜಿನಿಯರ್‌ಗಳ ಸಂಸ್ಥೆಯ ಎಸ್.ಪಿ. ಭಟ್ ಸಭಾಂಗಣದಲ್ಲಿ ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯ ಜನ್ಮ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು.

ವಿಶ್ವೇಶ್ವರಯ್ಯ ತಮ್ಮ ಎಂಟು ದಶಕಗಳ ಸೇವೆಯಲ್ಲಿ ಕೇವಲ ಎಂಜಿನಿಯರ್ ಮಾತ್ರವಲ್ಲದೇ ಸಂಶೋಧಕರ ರೀತಿ ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೆ, ಆ ಕಾಲದಲ್ಲೇ ಅಣೆಕಟ್ಟೆಗಳ ನೀರಿನ ಸದ್ಬಳಕೆ ಕುರಿತು, ಅವರು ಯೋಜನೆ ರೂಪಿಸಿದ್ದರು. ಮೈಸೂರು ಅರಸರ ಸಂಸ್ಥಾನದಲ್ಲಿ ಮುಖ್ಯ ಎಂಜಿನಿಯರ್ ಆಗಿ ಹಾಗೂ ನಂತರ ದಲ್ಲಿ ದಿವಾನರಾಗಿ ಸೇವೆ ಸಲ್ಲಿಸಿದ ಅವರು ನೇರ ನುಡಿಗೆ ಹೆಸರುವಾಸಿಯಾಗಿದ್ದರು ಎಂದು ತಿಳಿಸಿದರು. ಭದ್ರಾವತಿ ಉಕ್ಕು ಕಾರ್ಖಾನೆ ನೇತೃತ್ವ ಹೊತ್ತ ವಿಶ್ವೇಶ್ವರಯ್ಯ ನವರು, ಕೆಲ ಕಾಲ ಯಾವುದೇ ಸಂಭಾವನೆ ಇಲ್ಲದೆಯೇ ಕಾರ್ಯ ನಿರ್ವಹಿಸಿ ಅದರ ಏಳಿಗೆಗೆ ಶ್ರಮಿಸಿದ್ದ ಪ್ರಸಂಗವನ್ನು ಉಲ್ಲೇಖಿಸಿ, ಅವರ ಈ ಆಡಳಿತ ಕೌಶಲ್ಯ ನಮ್ಮೆಲ್ಲರಿಗೂ ಮಾದರಿ ಎಂದು ಬಣ್ಣಿಸಿದರಲ್ಲದೆ, ಅವರ ಆದರ್ಶ ಇಂದಿನ ವಿದ್ಯಾರ್ಥಿಗಳಿಗೆ ಮಾದರಿ ಎಂದರು.

**ಸನ್ಮಾನ:** ಎಂಜಿನಿಯರಿಂಗ್ ಕ್ಷೇತ್ರದಲ್ಲಿನ ಸಾಧನೆಗಾಗಿ ರತನ್ ಬಾಬು, ಎಸ್. ಭಾರ್ಗವ, ಆರ್.ಎನ್. ಮಹಾಲಿಂಗೇಗೌಡ, ಎಚ್.ಎಂ. ಸುಜಾತ, ಬಿ.ಪಿ. ಶಿವ ಮೂರ್ತಿ, ಮನೋಜ್ ಕುಮಾರ್, ಸುಮಾ, ರಚನಾ ಅವರನ್ನು ಕಾರ್ಯ ಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಸನ್ಮಾನಿಸಿದರು.

ಈ ವೇಳೆ ಎಂಜಿನಿಯರ್‌ಗಳ ಸಂಸ್ಥೆ ಅಧ್ಯಕ್ಷ ಬಿ.ಎಸ್. ಪ್ರಭಾಕರ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಎಚ್.ಎಸ್. ಸುರೇಶ್ ಬಾಬು, ಜಂಟಿ ಕಾರ್ಯದರ್ಶಿ ಆರ್. ದೀಪು, ಸಂಚಾಲಕ ಎ.ಎಸ್. ಸತೀಶ್, ಸಹ ಸಂಚಾಲಕ ಕೆ.ಬಿ. ಪ್ರಭಾಕರ್ ಇದ್ದರು.

# ಏಷ್ಯಾಕಪ್: ಬಾಂಗ್ಲಾ ವಿರುದ್ಧ ಭಾರತಕ್ಕೆ ಸೋಲು

● ಶುಭ್‌ಮನ್ ಗಿಲ್ ಹೋರಾಟ ವ್ಯರ್ಥ ● ಭಾನುವಾರ ಭಾರತ–ಶ್ರೀಲಂಕಾ ನಡುವೆ ಫೈನಲ್




ಕೊಲಂಬೊ, ಸೆ.15– ಭಾನುವಾರ ನಡೆಯುವ ಶ್ರೀಲಂಕಾ ವಿರುದ್ಧದ ಏಷ್ಯಾಕಪ್ ಫೈನಲ್ ಪಂದ್ಯಕ್ಕೂ ಮುನ್ನ ಅಭ್ಯಾಸ ಪಂದ್ಯದಂತಿದ್ದ ಸೂಪರ್ 4 ಹಂತದ ತನ್ನ ಅಂತಿಮ ಪಂದ್ಯದಲ್ಲಿ ಭಾರತ ಬಾಂಗ್ಲಾದೇಶದ ವಿರುದ್ಧ 6 ರನ್‌ಗಳ ಸೋಲು ಅನುಭವಿಸಿದೆ.

ಇಲ್ಲಿನ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 265ರನ್ ಪೇರಿಸಿತು. ತಂಡದ ಮೊತ್ತ 59 ರನ್ ಆಗುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ ತಂಡಕ್ಕೆ ನಾಯಕ ಶಕೀಬ್ ಅಲ್ ಹಸನ್ ಹಾಗೂ ತೌಹಿದ್ ಹೃದಾಯ್ ಆಸರೆಯಾದರು. ಈ ವೇಳೆ ಅರ್ಧ ಶತಕ ಸಿಡಿಸಿ ಶತಕದತ್ತ ಮುನ್ನುಗ್ಗುತ್ತಿದ್ದ ಶಕೀಬ್ 80 ರನ್ ಗಳಿಸಿ ಔಟಾದರೇ, ತೌಹಿದ್ ಹೃದಾಯ್ 54 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ನಸುಮ್ ಅಹ್ಮದ್ 44, ಮೆಹಿಡಿ ಹಸನ್ 29, ತಂಝಿಮ್ ಹಸನ್ ಶಕಿಬ್ 14 ಗಳಿಸಿದರು. ಭಾರತದ ಪರ ಶಾರ್ದೂಲ್ ಠಾಕೂರ್ 3, ಮೊಹಮ್ಮದ್ ಶಮಿ 2, ಪ್ರಸಿದ್ಧ ಕೃಷ್ಣ, ರವೀಂದ್ರ ಜಡೇಜಾ ಹಾಗೂ ಅಕ್ಷರ್ ಪಟೇಲ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಬಳಿಕ 266 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ ಆರಂಭದಲ್ಲೇ ನಾಯಕ ರೋಹಿತ್ ಶರ್ಮಾ ಹಾಗೂ ತಿಲಕ್ ವರ್ಮಾ ಅವರ ವಿಕೆಟ್ ಕಳೆದುಕೊಂಡಿತು. ಈ ವೇಳೆ ಶುಭ್‌ಮನ್ ಗಿಲ್ ಜೊತೆಗೂಡಿದ ಕನ್ನಡಿಗ ಕೆ.ಎಲ್ ರಾಹುಲ್ 57ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ ರಾಹುಲ್ 19ರನ್ ಗಳಿಸಿದ್ದ ವೇಳೆ ನಿರ್ಗಮಿಸಿದರು. ನಂತರ ಬಂದ ಇಶಾನ್ ಕಿಶನ್ 5, ಸೂರ್ಯಕುಮಾರ್ ಯಾದವ್ 26, ರವಿಂದ್ರ ಜಡೇಜಾ 7ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಒಂದೆಡೆ ನಿರಂತರವಾಗಿ ವಿಕೆಟ್ ಉರುಳುತ್ತಿದ್ದರೂ ಮತ್ತೊಂದು ತುದಿಯಲ್ಲಿ ಶುಭ್‌ಮನ್ ಗಿಲ್ ಜವಾಬ್ದಾರಿಯುತ ಪ್ರದರ್ಶನ ತೋರಿದರು. 133 ಎಸೆತಗಳಲ್ಲಿ 5 ಸಿಕ್ಸರ್ ಹಾಗೂ 8 ಬೌಂಡರಿಗಳೊಂದಿಗೆ 121 ರನ್ ಗಳಿಸಿದ ಗಿಲ್ ತಂಡವನ್ನು ಗೆಲುವಿನ ದಡ ಸೇರಿಸಲು ವಿಫಲರಾದರು. ಕೆಳ ಕ್ರಮಾಂಕದಲ್ಲಿ ಅಕ್ಷರ್ ಪಟೇಲ್ ಹಾಗೂ ಶಾರ್ದೂಲ್ ಠಾಕೂರ್ ಭರ್ಜರಿ ಆಟವಾಡುವ ಮೂಲಕ ತಂಡವನ್ನು ಗೆಲುವಿನ ಅಂಚಿಗೆ ತಂದರು. ಆದರೆ, ಗೆಲುವಿಗೆ 9 ಎಸೆತಗಳಲ್ಲಿ 12 ರನ್ ಬೇಕಿದ್ದ ಹಂತದಲ್ಲಿ ಅಕ್ಷರ್ ಪಟೇಲ್ ಹಾಗೂ ಶಾರ್ದೂಲ್ ಠಾಕೂರ್ ಇಬ್ಬರೂ ಔಟಾಗಿದ್ದರಿಂದ ಭಾರತ ತಂಡ ಸೋಲು ಅನುಭವಿಸಿತು. ಅಂತಿಮವಾಗಿ ಭಾರತ 49.5 ಓವರ್‌ಗಳಿಗೆ 259 ರನ್‌ಗಳಿಗೆ ಆಲ್‌ಔಟ್ ಆಯಿತು. ಬಾಂಗ್ಲಾದೇಶ ಪರ ಮುಸ್ತಫಿಜಾರ್ ರೆಹಮಾನ್ 3, ಮೆಹದಿ ಹಸನ್ ಹಾಗೂ ತಂಝಿಮ್ ಹಸನ್ ಶಕಿಬ್ ತಲಾ 2, ಮೆಹದಿ ಹಸನ್ ಮಿರಾಜ್ ಹಾಗೂ ಶಕಿಬ್ ಅಲ್ ಹಸನ್ ತಲಾ ಒಂದೊಂದು ವಿಕೆಟ್ ಪಡೆದರು. ಶಕಿಬ್ ಅಲ್ ಹಸನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಸೋಲಿನ ನಡುವೆಯೂ ಭಾನುವಾರ ಇದೇ ಮೈದಾನದಲ್ಲಿ ಭಾರತ ಶ್ರೀಲಂಕಾ ವಿರುದ್ಧ ಫೈನಲ್ ಪಂದ್ಯದಲ್ಲಿ ಕಾದಾಟ ನಡೆಸಲಿದೆ.

# ಜಯಲಕ್ಷ್ಮಿದೇವಿ ವಿದ್ಯಾಸಂಸ್ಥೆಯ ಸಭಾಂಗಣ ಉದ್ಘಾಟನೆ



ಮೈಸೂರು, ಸೆ.15(ಬಿಎಲ್‌ಯು)– ಕೆನಡಾದಲ್ಲಿರುವ ಕೆ.ಆರ್.ನಗರ ಮೂಲದ ಇಂಜಿನಿಯರ್ ರವಿಶಂಕರ್ ಹಾಗೂ ರಜನಿ ರವಿಶಂಕರ್ ದಂಪತಿ ಮೈಸೂರಿನ ರಾಮಕೃಷ್ಣನಗರದ ಜಯಲಕ್ಷ್ಮಿದೇವಿ ವಿದ್ಯಾಸಂಸ್ಥೆಯಲ್ಲಿ 12 ಲಕ್ಷ ರೂಪಾಯಿ ವೆಚ್ಚದಲ್ಲಿ ನೂತನ ಸಭಾಂಗಣ ನಿರ್ಮಿಸಿಕೊಟ್ಟಿದ್ದಾರೆ.

ತಮ್ಮ ಮಕ್ಕಳಾದ ಋತ್ವಿಕ್ ಹಾಗೂ ರಶ್ಮಿ ಸ್ಮರಣಾರ್ಥ ನಿರ್ಮಿಸಿರುವ ಸಭಾಂಗಣವನ್ನು ರವಿಶಂಕರ್ ಹಾಗೂ ರಜನಿ ರವಿಶಂಕರ್ ಉದ್ಘಾಟಿಸಿದರು.

ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಯಿತು. ಜಯಲಕ್ಷ್ಮಿದೇವಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ಪ್ರೊ. ವಿ.ಎನ್. ನಾಯಕ್, ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆಡಳಿತ ಮಂಡಳಿ ಉಪಾಧ್ಯಕ್ಷೆ ಪಂಕಜವಲ್ಲಿ, ಗೌರವ ಕಾರ್ಯದರ್ಶಿ ಬಸಪ್ಪಾಜಿ, ಖಜಾಂಚಿ ಎಂ.ಸಿ.ಸುಂದರ್, ಪುಷ್ಪಾ ಮಾಚಯ್ಯ, ರಾಮಾನುಜಂ, ಜಯದೇವಪ್ಪ, ಶಿವಪ್ರಸಾದ್, ರಾಮಕೃಷ್ಣ ಶಾಲೆಯ ಪ್ರಿನ್ಸಿಪಾಲ್ ಎಂ.ಎನ್. ಕುಮಾರಿ ಈ ಸಂದರ್ಭದಲ್ಲಿ ಹಾಜರಿದ್ದರು.

ಒಂದನೇ ಪುಟದಿಂದ

## ಬಿಜೆಪಿಯಿಂದ ಕಾವೇರಿ ರಕ್ಷಣಾ ಯಾತ್ರೆ

ಸೆ.21ರಂದು ಹೋರಾಟದ ಮುಂದಿನ ರೂಪು-ರೇಷೆ ಬಗ್ಗೆ ನಿರ್ಧಾರ ಮಾಡುತ್ತೇವೆ ಎಂದು ಹೇಳಿದರು. ರಾಜ್ಯ ಸರ್ಕಾರ ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಕೇಂದ್ರ ಸರ್ಕಾರವನ್ನು ಎಳೆದು ತರುವ ಪ್ರಯತ್ನ ಮಾಡುತ್ತಿದೆ. ಇದರಲ್ಲಿ ಕೇಂದ್ರದ ಮಧ್ಯಸ್ಥಿಕೆ ಅಗತ್ಯ ಏನಿದೆ? ರಾಜ್ಯ ಸರ್ಕಾರ ಎಲ್ಲದಕ್ಕೂ ಕೇಂದ್ರವನ್ನು ಎಳೆದು ತರುವುದನ್ನು ಬಿಡಲಿ. ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುವ ಮೂಲಕ ಕಂಟು ನೆಪ ಹುಡುಕುತ್ತಿದೆ. ಕೇಂದ್ರದ ಬದಲು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಜತೆ ಈ ಸರ್ಕಾರ ಪತ್ರ ವ್ಯವಹಾರ ನಡೆಸಲಿ. ಡಿಎಂಕೆ ಇಂಡಿಯಾ ಒಕ್ಕೂಟದ ಸದಸ್ಯ ಪಕ್ಷ. ಕಾವೇರಿ ವಿಚಾರಕ್ಕೆ ಇವರು ಸ್ಟಾಲಿನ್‌ಗೆ ಪತ್ರ ಬರೆಯಲಿ ನೋಡೋಣ ಎಂದು ಸವಾಲು ಹಾಕಿದರು.

## ಭಾರ ಹೊರುವ ತಾಲೀಮು ಆರಂಭ

ಭಾರ ಹೊರುವ ತಾಲೀಮು ಆರಂಭಿಸಲಾಗಿದೆ. ಅಂಬಾರಿ ಹೊರುವ ಅಭಿಮನ್ಯು ಹಾಗೂ ಪರ್ಯಾಯ ಆನೆಗಳಿಗೂ ಭಾರ ಹೊರುವ ತರಬೇತಿ ನೀಡಲು ಉದ್ದೇಶಿಸಲಾಗಿದೆ.

**ತಾಲೀಮಿಗೂ ಮುನ್ನ ಪೂಜೆ:** ಅಂಬಾರಿ ಆನೆ ಅಭಿಮನ್ಯುವಿಗೆ ಭಾರ ಹೊರುವ ತಾಲೀಮಿಗೂ ಮೊದಲು ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಮುಂಭಾಗ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್ ಅಭಿಮನ್ಯು, ಕುಮ್ಕಿ ಆನೆಗಳಾದ ವರಲಕ್ಷ್ಮಿ, ವಿಜಯ ಆನೆಗೆ ಕಾಲು ತೊಳೆದು ಹರಿಶಿನ, ಕುಂಕುಮ, ಗಂಧ ಇಟ್ಟು ಪೂಜೆ ಸಲ್ಲಿಸಿದರು. ಬಳಿಕ ಎಲ್ಲಾ ಆನೆಗಳಿಗೂ ಪಂಚಫಲ ನೀಡಿ, ದೃಷ್ಟಿ ತೆಗೆದು ಆರತಿ ಬೆಳಗಲಾಯಿತು. ಈ ವೇಳೆ ಸಿಎಫ್ ಡಾ.ಮಾಲತಿ ಪ್ರಿಯಾ, ಆರ್‌ಎಫ್‌ಓ ಸಂತೋಷ್ ಹೂಗಾರ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಪಶುವೈದ್ಯ ಡಾ.ಮುಜೀಬ್ ರೆಹಮಾನ್ ಸೇರಿದಂತೆ ಇನ್ನಿತರರು ಆನೆಗಳಿಗೆ ಪುಷ್ಪಾರ್ಚನೆ ಮಾಡಿದರು.

**ಗಾದಿ, ನಮ್ದಾ ಕಟ್ಟಿದ ಸಿಬ್ಬಂದಿ:** ಪೂಜೆ ಬಳಿಕ, ಅಂಬಾರಿ ಆನೆ ಮೇಲೆ ಗಾದಿ, ನಮ್ದಾ ಕಟ್ಟಲಾಯಿತು. 200 ಕೆ.ಜಿ ತೂಕದ ನಮ್ದಾ, ಗಾದಿಯನ್ನು ಅಭಿಮನ್ಯು ಮೇಲೆ ಬಿಗಿ ಯಾಗಿ ಕಟ್ಟಿದ ಬಳಿಕ ಸುಮಾರು 400 ಕೆಜಿ ತೂಕದ ಮರಳು ಮೂಟೆ ಇರಿಸಿ, ಕುಮ್ಕಿ ಆನೆಯೊಂದಿಗೆ ಜಂಬೂಸವಾರಿ ದಿನ ಚಿನ್ನದ ಅಂಬಾರಿ ಕಟ್ಟುವ ಕ್ರೇನ್ ಇರುವ ಸ್ಥಳಕ್ಕೆ ಕರೆದೊಯ್ದು ಸ್ಥಳ ಪರಿಚಯ ಮಾಡಿಕೊಡಲಾಯಿತು. ಬಳಿಕ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ನಿವಾಸದ ಬಳಿ ಸೆಲ್ಯೂಟ್ ಹೊಡೆಸಿ, ಮೆರವಣಿಗೆ ಸಾಗುವ ಮಾರ್ಗದಲ್ಲಿ ಕರೆತರಲಾಯಿತು.

**105 ಗಂಟೆಯಲ್ಲೇ ನಿಗದಿತಗುರಿ ತಲುಪಿದ ಅಭಿಮನ್ಯು:** ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ (ಬಲರಾಮ ದ್ವಾರ) ಗೇಟ್‌ನಿಂದ ಮಧ್ಯಾಹ್ನ 2.01 ನಿಮಿಷಕ್ಕೆ ಹೊರ ಬಂದ ಅಭಿಮನ್ಯು ನೇತೃತ್ವದ ಗಜಪಡೆ ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಆರ್‌ಎಂಸಿ, ಬಂಬೂ ಬಜಾರ್, ಹೈವೆ ಸರ್ಕಲ್ ಮೂಲಕ ಬನ್ನಿಮಂಟಪದ ಪಂಜಿನ ಕವಾಯತು ಮೈದಾನವನ್ನು ಮಧ್ಯಾಹ್ನ 3.06 ಗಂಟೆಗೆ ತಲುಪಿತು. ಅರಮನೆ ಆವರಣದಿಂದ ಪಂಜಿನ ಕವಾಯತು ಮೈದಾನವನ್ನು 1.05 ಗಂಟೆ ಅವಧಿಯಲ್ಲಿ ತಲುಪುವ ಮೂಲಕ ಮೊದಲ ದಿನ ಭಾರ ಹೊರುವ ತಾಲೀಮು ಯಶಸ್ವಿಯಾಗಿ ಪೂರೈಸಿತು.

**ದಾರಿಯುದ್ದಕ್ಕೂ ಜನ ಜಂಗುಳಿ:** ಇದೇ ಮೊದಲ ಬಾರಿ ಮಧ್ಯಾಹ್ನದ ವೇಳೆ ಜಂಬೂಸವಾರಿ ಮಾರ್ಗದಲ್ಲಿ ಆನೆಗಳ ತಾಲೀಮು ಕಂಡ ಜನ, ರಸ್ತೆ ಬದಿ ನಿಂತು ಸಾಲಾಗಿ ಸಾಗುತ್ತಿದ್ದ ಆನೆಗಳನ್ನು ಕಣ್ತುಂಬಿಕೊಂಡರು. ನಗರ ಬಸ್ ನಿಲ್ದಾಣದಲ್ಲಿದ್ದ ನಾನಾ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ರಸ್ತೆ ಬದಿಗೆ ಬಂದು ಆನೆಗಳನ್ನು ವಿಡಿಯೋ ಮಾಡಿಕೊಂಡು ಸಂಭ್ರಮಿಸಿದರು.

**ಬಿಗಿ ಭದ್ರತೆಯಲ್ಲಿ ಸಾಗಿದ ಗಜಪಡೆ:** ಇಂದು ಮೊದಲ ತಂಡದ 9 ಆನೆಗಳು ತಾಲೀಮಿನಲ್ಲಿ ಸಾಗಿದವು. ಅಭಿಮನ್ಯುವಿನ ಮೇಲೆ ಗಾದಿ, ನಮ್ದಾ, ತೊಟ್ಟಿಲು ಕಟ್ಟಿ ಅದರ ಮೇಲೆ ಮರಳಿನ ಮೂಟೆ ಇರಿಸಿದ್ದರೆ, ಕುಮ್ಕಿ ಆನೆಗಳಿಗೆ ಕೇವಲ ಹಗುರವಾದ ಗಾದಿ, ನಮ್ದಾ ಕಟ್ಟಲಾಗಿತ್ತು. ಉಳಿದಂತೆ ನಿಶಾನೆ ಆನೆ ಅರ್ಜುನ, ಧನಂಜಯ, ಗೋಪಿ, ಭೀಮಾ, ಮಹೇಂದ್ರ ಹಾಗೂ ಕಂಜನ್ ಆನೆ ತಾಲೀಮಿನಲ್ಲಿ ಹೆಜ್ಜೆ ಹಾಕಿದವು. ಗಜಪಡೆಯ ಹಿಂದೆ ಹಾಗೂ ಮುಂದೆ ಬೆಂಗಾವಲು ವಾಹನ ನಿಯೋಜಿಸಲಾಗಿತ್ತು.

**40 ನಿಮಿಷದಲ್ಲಿ ವಾಪಸ್ಸಾದ ಗಜಪಡೆ:** ಪಂಜಿನ ಕವಾಯತು ಮೈದಾನ ತಲುಪಿದ ನಂತರ ಅಭಿಮನ್ಯುವಿನ ಮೇಲೆ ಹೊರಿಸಲಾಗಿದ್ದ ಮರಳಿನ ಮೂಟೆ ಕೆಳಗಿಳಿಸಲಾಯಿತು. ಎಲ್ಲಾ ಆನೆಗಳಿಗೆ ನೀರು ಕುಡಿಸಿ, ಕೆಲ ಕಾಲ ವಿರಮಿಸಲು ಅವಕಾಶ ನೀಡಲಾಯಿತು. ಮಾವುತ, ಕಾವಾಡಿಗಳಿಗೆ ಊಟದ ವ್ಯವಸ್ಥೆ ಮಾಡಲಾಯಿತು. ಬಳಿಕ ಮತ್ತೆ ಅರಮನೆಯತ್ತ ಹೆಜ್ಜೆ ಹಾಕಿದ ಆನೆಗಳು 45 ನಿಮಿಷದಲ್ಲೇ ಅರಮನೆ ಅಂಗಳ ಪ್ರವೇಶಿಸಿ ಸೈ ಎನಿಸಿಕೊಂಡವು.

## ಅ.24ರ ಸಂಜೆ 4.40ರಿಂದ 5ರೊಳಗೆ

ಬ್ರಹ್ಮಚಾರಿಣೀ, ಅ.17ರಂದು ಚಂದ್ರಘಂಟಾ, ಅ.18ರಂದು ಕೂಷ್ಮಾಂಡಾ, ಅ.19ರಂದು ಸ್ಕಂದ ಮಾತಾ ಪೂಜೆ ನೆರವೇರಲಿದೆ. ಅ.20ರಂದು ಸರಸ್ವತಿ ಪೂಜೆ, ಅ.21ರಂದು ಕಾಳರಾತ್ರಿ-ಮಹಿಷಾಸುರ ಸಂಹಾರ, ಅ.22ರಂದು ದುರ್ಗಾಷ್ಟಮಿ-ಸಿದ್ಧಿ ಪೂಜೆ, ಅ.23ರಂದು ಆಯುಧ ಪೂಜೆ ನೆರವೇರಲಿದೆ. ಅ.24ರಂದು ವಿಜಯದಶಮಿ, ಜಂಬೂಸವಾರಿ ಜರುಗಲಿದ್ದು, ಅ.26ರಂದು ಚಾಮುಂಡಿಬೆಟ್ಟದಲ್ಲಿ ರಥೋತ್ಸವ ಜರುಗಲಿದೆ. ಆ ಮೂಲಕ ಈ ಸಾಲಿನ ದಸರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

## ಸೆ.25ರಂದು ಗಜಪಡೆ ಎರಡನೇ ತಂಡ

ಅ.15ರಿಂದ ಆರಂಭವಾಗುವ ದಸರಾ ಮಹೋತ್ಸವದಲ್ಲಿ ಅ.24ರಂದು ಜಂಬೂಸವಾರಿ ನಡೆಯುತ್ತದೆ. ಅಷ್ಟರಲ್ಲಾಗಲೇ ಅಂತಿಮ ಹಂತದ ತಾಲೀಮಿನ ವೇಳೆ 1200 ಕೆಜಿ ಭಾರ ಹೊರಿಸಿ ತಾಲೀಮು ನಡೆಸಲಾಗುತ್ತದೆ ಎಂದರು.

ಅಂಬಾರಿ ಆನೆ ಅಭಿಮನ್ಯುವಿನೊಂದಿಗೆ ಧನಂಜಯ, ಮಹೇಂದ್ರ, ಗೋಪಿ, ಭೀಮನಿಗೂ ಭಾರ ಹೊರಿಸುವ ತಾಲೀಮು ನಡೆಸಲಾಗುತ್ತದೆ. ಇತರ ಆನೆಗಳಿಗೂ ಭಾರ ಹೊರುವ ತರಬೇತಿ ನೀಡಬೇಕಾಗಿರುವುದರಿಂದ ಅಭಿಮನ್ಯುವಿನೊಂದಿಗೆ ಇತರೆ 4 ಆನೆಗಳನ್ನು ಅಂಬಾರಿ ಹೊರಲು ಸಜ್ಜುಗೊಳಿಸಲಾಗುತ್ತದೆ ಎಂದರು.

**ಸೆ.25ರಂದು ಎರಡನೇ ತಂಡ ಆಗಮನ:** ಮೊದಲ ತಂಡದಲ್ಲಿ ಆಗಮಿಸಿರುವ 9 ಆನೆಗಳು ತಾಲೀಮಿನಲ್ಲಿ ನಿರತವಾಗಿವೆ. ಸೆ.25ರಂದು ಎರಡನೇ ತಂಡದಲ್ಲಿ 5 ಆನೆಗಳು ಮೈಸೂರು ಅರಮನೆ ಆವರಣಕ್ಕೆ ಆಗಮಿಸಲಿವೆ. ಅವುಗಳಲ್ಲಿ ಬಂಡೀಪುರದ ರಾಂಪುರ ಕ್ಯಾಂಪ್‌ನ ರೋಹಿತ, ಹಿರಣ್ಯಾ ಹಾಗೂ ದೊಡ್ಡ ಹರವೆ ಕ್ಯಾಂಪ್‌ನ ಲಕ್ಷ್ಮಿ ಆನೆ ಮೊದಲ ಬಾರಿಗೆ ಬರುತ್ತಿರುವ ಹೊಸ ಆನೆಗಳಾಗಿವೆ. ಇವುಗಳೊಂದಿಗೆ ದುಬಾರೆ ಕ್ಯಾಂಪ್‌ನಿಂದ ಸುಗ್ರೀವ ಹಾಗೂ ಪ್ರಶಾಂತ ಆನೆಗಳು ಬರುತ್ತಿವೆ. ಸೆ.26ರಿಂದ ಮೊದಲ ತಂಡದ 9 ಹಾಗೂ ಎರಡನೇ ತಂಡದ 5 ಆನೆಗಳು ಸೇರಿದಂತೆ 14 ಆನೆಗಳು ತಾಲೀಮಿನಲ್ಲಿ ಭಾಗವಹಿಸುತ್ತವೆ ಎಂದು ವಿವರಿಸಿದರು.

## ಉಪ ಮುಖ್ಯಮಂತ್ರಿ ಮಾಡಿ

ನೀಡಿದರೆ ನಮಗೆ ದೊಡ್ಡ ಲಾಭವಾಗುತ್ತದೆ. ವಿಧಾನಸಭಾ ಚುನಾವಣೆಯಲ್ಲಿ ನಾವು ಭರ್ಜರಿ ಜಯ ಗಳಿಸಿದ್ದೇವೆ. 2024ರಲ್ಲಿ ನಡೆಯುವ ಲೋಕಸಭಾ ಚುನಾವಣೆಯಲ್ಲಿ 20ಕ್ಕೂ ಹೆಚ್ಚು ಸ್ಥಾನ ಗೆಲ್ಲಬೇಕಾದರೆ ನಾವು ಎಲ್ಲಾ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಅಷ್ಟೇ ಏಕೆ, ಪತ್ರ ಬರೆದು, ಖುದ್ದು ದೆಹಲಿಗೆ ತೆರಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಅಧಿನಾಯಕರಾದ ಸೋನಿಯಾಗಾಂಧಿ, ರಾಹುಲ್ ಗಾಂಧಿ ಹಾಗೂ ಇತರ ಪ್ರಧಾನಕಾರ್ಯದರ್ಶಿ ಅವರನ್ನು ಭೇಟಿ ಮಾಡಿ ಮನವಿ ಮಾಡುವುದಲ್ಲದೆ, ಹಕ್ಕು ಒತ್ತಾಯ ಮಾಡುವುದಾಗಿ ಹೇಳಿದರು.

ಇತ್ತೀಚೆಗಷ್ಟೇ ಗೃಹ ಸಚಿವ ಡಾ.ಜಿ.ಪರಮೇಶ್ವರ್ ನನಗೆ ಮುಖ್ಯಮಂತ್ರಿ ಸ್ಥಾನ ದೊರೆಯಲಿಲ್ಲ. ಆದರೆ, ಉಪ ಮುಖ್ಯಮಂತ್ರಿ ಸ್ಥಾನ ದೊರೆಯಬಹುದು ಎಂಬ ನಿರೀಕ್ಷೆ ಸುಳ್ಳಾಯಿತು ಎಂದು ನೀಡಿದ್ದ ಹೇಳಿಕೆಗೆ ಸಚಿವ ಎಂ.ಬಿ.ಪಾಟೀಲ್ ಬೆಂಬಲ ಸೂಚಿಸಿದ್ದರು. ಕಾಂಗ್ರೆಸ್‌ನ ಹಿರಿಯ ನಾಯಕ ಹಾಗೂ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಕಳೆದ ವಾರವಷ್ಟೇ ಸತೀಶ್ ಜಾರಕಿಹೊಳಿ ಜತೆಗೆ ಅಲ್ಪಸಂಖ್ಯಾತರೊಬ್ಬರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಸಾರ್ವಜನಿಕ ಸಭೆಯಲ್ಲಿ ಆಗ್ರಹಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಇದಕ್ಕೆ ಪ್ರತಿಯಾಗಿ ವರಿಷ್ಠರು ನೋಟಿಸ್ ಜಾರಿ ಮಾಡಿದ್ದಾರೆ.

**ಸಹೋದ್ಯೋಗಿಗಳ ಬೆಂಬಲವಿಲ್ಲ:** ಏಕಾಏಕಿ ರಾಜಣ್ಣ ಇಂಥ ಹೇಳಿಕೆ ನೀಡಿರುವುದು ಪಕ್ಷ ಮತ್ತು ಸರ್ಕಾರದಲ್ಲಿ ಗೊಂದಲ ಸೃಷ್ಟಿಸಿದೆ. ಆದರೆ, ಅವರ ನಿಲುವನ್ನು ಅವರ ಸಂಪುಟದ ಸಹೋದ್ಯೋಗಿಗಳೇ ಬೆಂಬಲಿಸಿಲ್ಲ. ಈ ಸಂಬಂಧ ಹೇಳಿಕೆ ನೀಡಿರುವ ಹಿರಿಯ ನಾಯಕ ಹಾಗೂ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರು, ಮೊದಲು ಅಭಿವೃದ್ಧಿಯ ಕಡೆ ಗಮನ ಹರಿಸೋಣ. ಉಪ ಮುಖ್ಯಮಂತ್ರಿ ಹುದ್ದೆ ಕೊಡುವುದು, ಬಿಡುವುದು ಮುಖ್ಯಮಂತ್ರಿ ಹಾಗೂ ವರಿಷ್ಠರಿಗೆ ಬಿಟ್ಟ ವಿಚಾರ. ನಾನು ಈ ಹುದ್ದೆಗೆ ಆಕಾಂಕ್ಷಿಯಲ್ಲ. ಇನ್ನೂ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಹೀಗಾಗಿ ಕೊಟ್ಟಿರುವ ಜವಾಬ್ದಾರಿ ನಿರ್ವಹಿಸಿ, ರಾಜ್ಯದ ಅಭಿವೃದ್ಧಿ ಮಾಡೋಣ ಎಂದಿದ್ದಾರೆ.

ಮತ್ತೊಬ್ಬ ಹಿರಿಯ ಸಚಿವ ಪ್ರಿಯಾಂಕ ಖರ್ಗೆ ಮಾತನಾಡಿ, ಸದ್ಯಕ್ಕೆ ಅಂತಹ ಪ್ರಸ್ತಾವನೆ ವರಿಷ್ಠರ ಮುಂದಿಲ್ಲ ಎಂದಿದ್ದಾರೆ. ನಮ್ಮಲ್ಲಿ ಪ್ರಜಾಪ್ರಭುತ್ವವಿದೆ. ಯಾರು ಏನು ಬೇಕಾದರೂ ಹೇಳಬಹುದು ಹಾಗೂ ಕೇಳಬಹುದು ಅದಕ್ಕೆ ಅಡ್ಡಿ ಇಲ್ಲ. ನಮ್ಮ ಸಮಸ್ಯೆ ಹಾಗೂ ಬೇಡಿಕೆಗಳನ್ನು ವರಿಷ್ಠರ ಮುಂದಿಡುವುದರಲ್ಲಿ ತಪ್ಪಿಲ್ಲ. ಆದರೆ, ರಾಜಣ್ಣ ಅವರು ಪ್ರಸ್ತಾಪಿಸಿರುವ ವಿಚಾರ ವರಿಷ್ಠರ ಮುಂದಿಲ್ಲ ಎಂದು ಸ್ಪಷ್ಟಪಡಿಸಿದರು.

# ಮೈಸೂರಿನಲ್ಲಿ ಸಂವಿಧಾನದ ಪೀಠಿಕೆ ವಾಚನದ ಅರ್ಥಪೂರ್ಣ ಆಚರಣೆ

**● ಸಾವಿರಾರು ವಿದ್ಯಾರ್ಥಿಗಳು, ಶಿಕ್ಷಕರು, ಸರ್ಕಾರಿ ನೌಕರರು ಭಾಗಿ ● ನೋಂದಣಿಯಲ್ಲಿ ಮೈಸೂರಿಗೆ 2 ನೇ ಸ್ಥಾನ ● ದ್ರೋಣ್‌ನಲ್ಲಿ ಅದ್ಭುತ ದೃಶ್ಯ ಜ್ಯಾತ್ಯಾತೀತ, ಧರ್ಮಾತೀತ ಪರಿಕಲ್ಪನೆಗೆ ಸಾಕ್ಷಿ**





ಮೈಸೂರು, ಸೆ.15(ಬಿಎಲ್‌ಯು)- ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಮೈಸೂರಿನಲ್ಲಿ ಇಂದು ಭಾರತ ಸಂವಿಧಾನ ಪೀಠಿಕೆಯ ಜಾಗತಿಕ ವಾಚನ ಕಾರ್ಯಕ್ರಮ ನಡೆಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಮುಂಭಾಗದ ಓವಲ್ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ನೆರೆದಿದ್ದ ಸಾವಿರಾರು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸರ್ಕಾರಿ ನೌಕರರ ಜೊತೆ ಸಂವಿಧಾನದ ಪೀಠಿಕೆಯನ್ನು ವಾಚಿಸಿದರು.

ಸಮಾನತೆಯ ಪ್ರಜಾಪ್ರಭುತ್ವ ಎಂಬ ಘೋಷ ವಾಕ್ಯವಿರುವ ಸಂವಿಧಾನದ ಪೀಠಿಕೆಯನ್ನು ಸಾವಿರಾರು ಜನರು ವಾಚನ ಮಾಡಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ರಚಿಸಲಾಗಿರುವ ಭಾರತದ ಸಂವಿಧಾನದ ಪೀಠಿಕೆ ಹಾಗೂ ಪೆನ್ ತುದಿಯನ್ನು ಪ್ರದರ್ಶಿಸಲಾಯಿತು. ದ್ರೋಣ್ ಕ್ಯಾಮರಾದಲ್ಲಿ ಸೆರೆ ಹಿಡಿದಿರುವ ಇದರ ದೃಶ್ಯವನ್ನು ಡಿಜಿಟಲ್ ಸ್ಕ್ರೀನ್‌ನಲ್ಲಿ ಈ ವೇಳೆ ಪ್ರದರ್ಶಿಸಲಾಯಿತು.

ತರುವಾಯ ಬೆಂಗಳೂರಿನ ವಿಧಾನ ಸೌಧದ ಮುಂಭಾಗ ಸರ್ಕಾರದ ವತಿಯಿಂದ ನಡೆದ ಭಾರತ ಸಂವಿಧಾನ ಪೀಠಿಕೆಯ ಜಾಗತಿಕ ವಾಚನ ಕಾರ್ಯಕ್ರಮದ ನೇರ ಪ್ರಸಾರವನ್ನು ಡಿಜಿಟಲ್ ಸ್ಕ್ರೀನ್‌ನಲ್ಲಿ ಪ್ರದರ್ಶಿಸಲಾಯಿತು. ಅಲ್ಲಿನ ಕಾರ್ಯಕ್ರಮ ಮುಗಿದ ನಂತರ ಮೈಸೂರಿನ ಕಾರ್ಯಕ್ರಮ ಪುನಾರಂಭಗೊಂಡಿತು.

ಈ ವೇಳೆ ಮಾತನಾಡಿದ ಶಾಸಕ ತನ್ವೀರ್ ಸೇಠ್, ಬಸವಣ್ಣನವರ ಅನುಭವ ಮಂಟಪ, ಸಂವಿಧಾನ ರಚನೆ ಸೇರಿದಂತೆ ಹಲವು ಘಟನೆಗಳು ಭವ್ಯ ಭಾರತ ರೂಪಿಸಲು ಸಾಕ್ಷಿಯಾಗಿದೆ ಎಂದರು.

ವಿದ್ಯಾರ್ಥಿಗಳು ಸಂವಿಧಾನವನ್ನು ಓದಬೇಕು, ಅರ್ಥ ಮಾಡಿಕೊಳ್ಳಬೇಕು ಹಾಗೂ ಅಲ್ಲಿನ ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಾತಿ, ಧರ್ಮ ಹಾಗೂ ಭಾಷೆಯ ಬೇಧಭಾವವಿಲ್ಲದೆ ಎಲ್ಲರೂ ಸಾಮರಸ್ಯದಿಂದ ಬದುಕಬೇಕು. ಈ ಮೂಲಕ ಸಂವಿಧಾನದ ಆಶಯದಂತೆ ನಡೆದುಕೊಳ್ಳಬೇಕು ಎಂದು ತನ್ವೀರ್ ಸೇಠ್ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಕೆಹರೀಶ್ ಗೌಡ, ಜಾತ್ಯಾತೀತ ಹಾಗೂ ಧರ್ಮಾತೀತ ಸಮಾಜ ನಿರ್ಮಾಣವಾಗಲು ಸಂವಿಧಾನ ಮೂಲ ಕಾರಣವಾಗಿದೆ ಆದರೆ ಬಹಳಷ್ಟು ಸಂವಿಧಾನ ವಿರೋಧಿಗಳಿದ್ದು, ಅವರ ಬಗ್ಗೆ ಸಮಾಜ ಜಾಗೃತರಾಗಿರಬೇಕು. ಸಂವಿಧಾನ ಮುಂದಿನ ಪೀಳಿಗೆಗೆ ಮಾತ್ರವಲ್ಲದೆ ಇನ್ನು 30 ಯುಗಗಳ ತನಕ ಗಟ್ಟಿಯಾಗಿರಬೇಕು ಎಂದು ಆಶಿಸಿದರು.

ಇದೇ ವೇಳೆ ಮಾತನಾಡಿದ ಮೈಸೂರಿನ ಮಾನಸಗಂಗೋತ್ರಿಯ ಅಂಬೇಡ್ಕರ್ ಅಧ್ಯಯನ ಪೀಠದ ಪ್ರಾಧ್ಯಾಪಕ ಪ್ರೊಸೋಮಶೇಖರ್, ಸಮಾನತೆ, ಸ್ವಾತಂತ್ರ್ಯ ಹಾಗೂ ಸೋದರತ್ವ ಸಂವಿಧಾನದ ಶಕ್ತಿ. ಸಮಾಜದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಸಮಾನತೆ ಸಾಧಿಸುವುದು ಸಂವಿಧಾನದ ಮೂಲ ಉದ್ದೇಶ ಎಂದು ಹೇಳಿದರು.

ಪ್ರತಿಯೊಬ್ಬರು ಸಂವಿಧಾನದ ಆಶಯಕ್ಕೆ ತಕ್ಕಂತೆ ನಡೆದುಕೊಳ್ಳಬೇಕು. ಸಮಾನತೆಯ ಸಮಾಜವನ್ನು ಮತ್ತಷ್ಟು ಗಟ್ಟಿಗೊಳಿಸಬೇಕು ಎಂದು ಪ್ರೊಸೋಮಶೇಖರ್ ಕರೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ರೂಪ, ನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಗಾಯತ್ರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂವಿಧಾನದ ಪೀಠಿಕೆ ವಾಚನ ಮಾಡಲು ರಾಜ್ಯಾದ್ಯಂತ ಸಾವಿರಾರು ಜನರು ನೋಂದಣಿ ಮಾಡಿಕೊಂಡಿದ್ದರು. ಇಡೀ ರಾಜ್ಯದಲ್ಲಿ ಒಟ್ಟು ನೋಂದಣಿ ಮಾಡಿಕೊಂಡವರಲ್ಲಿ ರಾಜಧಾನಿ ಬೆಂಗಳೂರು ಬಿಟ್ಟರೆ ಮೈಸೂರು ಎರಡನೇ ಸ್ಥಾನದಲ್ಲಿತ್ತು ಈ ಹಿನ್ನೆಲೆಯಲ್ಲಿ ಸಾವಿರಾರು ಜನರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

### ಭಾರತದ ಸಂವಿಧಾನ ಪ್ರಸ್ತಾವನೆ

**ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ; ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ: ವಿಚಾರ, ಅಭಿವ್ಯಕ್ತಿ ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ; ಸ್ಥಾನಮಾನ ಹಾಗೂ ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ; ನಮ್ಮ ಸಂವಿಧಾನ ಸಭೆಯಲ್ಲಿ 1949 ನೇ ಇಸವಿ ನವೆಂಬರ್ ತಿಂಗಳ 26 ನೇ ತಾರೀಖಾದ ಈ ದಿವಸ ಈ ಮೂಲಕ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

## ವಂಚಿತರಿಗೆ ಸೋಷಿಯಲ್ ಎಂಜಿನಿಯರಿಂಗ್ ಮೂಲಕ ಅವಕಾಶ ಕಲ್ಪಿಸಿದವರು ಸರ್‌ಎಂವಿ

**ನಿವೃತ್ತ ಮಾಹಿತಿ ತಂತ್ರಜ್ಞಾನ ಸಲಹೆಗಾರ ಸಿ.ವಿ.ಗೋಪಿನಾಥ್ ಸ್ಮರಣೆ**



ಮೈಸೂರು, ಸೆ.15(ಜಿಎ)-ಸೋಷಿಯಲ್ ಎಂಜಿನಿಯರಿಂಗ್ ಮೂಲಕ ವಂಚಿತರಿಗೆ ಅವಕಾಶ ಒದಗಿಸಿದವರು ಸರ್ ಎಂ. ವಿಶ್ವೇಶ್ವರಯ್ಯ. ಅವರು ದಿವಾನರಾಗಿ ಮೈಸೂರು ಸಂಸ್ಥಾನದಲ್ಲಿ ಹಲವು ಪ್ರಥಮಗಳಿಗೆ ಕಾರಣರಾದವರು ಎಂದು ಕೇಂದ್ರ ಸರ್ಕಾರದ ನಿವೃತ್ತ ಮಾಹಿತಿ ತಂತ್ರಜ್ಞಾನ ಸಲಹೆಗಾರ ಸಿ.ವಿ. ಗೋಪಿನಾಥ್ ತಿಳಿಸಿದರು.

ಮಹಾರಾಣಿ ಸರ್ಕಾರಿ ಪ್ರಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದಲ್ಲಿ ಶುಕ್ರವಾರ ನಡೆದ ಸರ್.ಎಂ. ವಿಶ್ವೇಶ್ವರಯ್ಯ ನೆನಪಿನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರಿನ ದಿವಾನರಾಗಿ ಬೃಂದಾವನ ಉದ್ಯಾನ ನಿರ್ಮಾಣ, ಭದ್ರಾವತಿಯಲ್ಲಿ ಉಕ್ಕಿನ ಕಾರ್ಖಾನೆ, ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆ, ಮೈಸೂರು ಬ್ಯಾಂಕ್ ಸ್ಥಾಪನೆ ಹೀಗೆ ಹತ್ತು ಹಲವು ಸಾಧನೆಗಳಿಗೆ ವಿಶ್ವೇಶ್ವರಯ್ಯ ಕಾರಣರು. ನೂರು ವರ್ಷಕ್ಕೂ ಮಿಗಿಲಾಗಿ ಬದುಕಿದ್ದ ಅವರು ಅತ್ಯಂತ ಪ್ರಾಮಾಣಿಕ ವ್ಯಕ್ತಿ. ಪ್ರವೃತ್ತಿಯಲ್ಲಿ ದಾನಿ. ಅವರ ಕಾರ್ಯವೈಖರಿ ಸಂಸ್ಕೃತಿ ಇಂದಿನ ಜನರಲ್ಲಿ ಬರುವುದು ಕಡಿಮೆ ಎಂದು ಸ್ಮರಿಸಿದರು.

ಮನುಷ್ಯನ ಅನುಕೂಲಕ್ಕಾಗಿ ವಿಜ್ಞಾನದ ಮೂಲಕ ಸೃಷ್ಟಿಸುವ ಕೌಶಲ್ಯವನ್ನು ಎಂಜಿನಿಯರಿಂಗ್ ಎನ್ನುತ್ತೇವೆ. ಇಂದಿನ ಮೊಬೈಲ್‌ನಿಂದ ಹಿಡಿದು ಎಲ್ಲವೂ ಎಂಜಿನಿಯರ್ ಆವಿಷ್ಕಾರವೇ ಎಂದು ತಿಳಿಸಿದರು. ಈ ವೇಳೆ ಸಾರ್ವಜನಿಕರಿಗೆ ಮಣ್ಣಿನ ಗಣಪತಿಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಕಾಲೇಜಿನ ಪ್ರಾಚಾರ್ಯ ಟಿ.ಎನ್. ಗಾಯತ್ರಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಎಸ್.ಇ. ಗಿರೀಶ್, ಕಸಾಪ ಜಿಲ್ಲಾ ಘಟಕದ ಉಪಾಧ್ಯಕ್ಷ ಎನ್.ಅನಂತ, ಸಂಚಾಲಕ ಎಂ.ವಿ. ನಾಗೇಂದ್ರಬಾಬು ಉಪಸ್ಥಿತರಿದ್ದರು.

## ಸೆ. 21 ರಂದು ತಂದ್ರೆ ಗ್ರಾಮದ ಶ್ರೀ ಆಲದ ಮರದಮ್ಮ ದೇವಸ್ಥಾನ ಉದ್ಘಾಟನೆ



ಮೈಸೂರು, ಸೆ. 15 (ಆರ್‌ಕೆ)- ಕೆ.ಆರ್. ನಗರ ತಾಲೂಕು, ಮಿರ್ಲೆ ಹೋಬಳಿ ತಂದ್ರೆ ಗ್ರಾಮದಲ್ಲಿ ನಿರ್ಮಿಸಿರುವ ಶ್ರೀ ಆಲದ ಮರದಮ್ಮ ದೇವಸ್ಥಾನವನ್ನು ಸೆ. 21 ರಂದು ಉದ್ಘಾಟಿಸಲಾಗುತ್ತಿದೆ. ಅಂದು ವಿಗ್ರಹ, ರಾಜಗೋಪುರ ಕಲಶ ಪ್ರತಿಷ್ಠಾಪನೆ, ಪ್ರತಿಷ್ಠಾಪನಾ ಕುಂಭಾಭಿಷೇಕ, ಮಹೋತ್ಸವ, ಯಾಗಶಾಲೆ ಪ್ರವೇಶ, ಗಣಪತಿ ಪೂಜೆ, ಅಸ್ತ್ರರಾಜ ಪೂಜೆ, ಅಗ್ನಿ ಪ್ರತಿಷ್ಠಾಪನೆ, ವಿಗ್ರಹ ಸಂಸ್ಕಾರ, ಸೆ. 22 ರಂದು ಬೆಳಗ್ಗೆ 6 ಗಂಟೆಗೆ ದೇವತಾ ಶುದ್ಧ, ಪ್ರಾಣ ಪ್ರತಿಷ್ಠೆ, ಪೂರ್ಣಾಹುತಿ ಸೇರಿದಂತೆ ಹಲವು ಧಾರ್ಮಿಕ ಕೈಂಕರ್ಯಗಳು ನಡೆಯಲಿವೆ. ಅಂದು ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

## ದಿ ಬೆಟರ್ ಹ್ಯಾಂಡ್ಸ್ ವಾರ್ಷಿಕೋತ್ಸವದ ಅಂಗವಾಗಿ ರಕ್ತದಾನ ಶಿಬಿರ



ಮೈಸೂರು, ಸೆ.15(ಜಿಎ)-ಮೈಸೂರಿನ ಅತ್ಯಂತ ಕಿರಿಯ ವಯಸ್ಕರ ಎನ್‌ಜಿಓ 'ದಿ ಬೆಟರ್ ಹ್ಯಾಂಡ್ಸ್' ಸಂಸ್ಥೆಯ ಮೂರನೇ ವಾರ್ಷಿಕೋತ್ಸವದ ಅಂಗವಾಗಿ ಸೆ.17ರಂದು ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕಿ ಮುಸ್ಕಾನ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಸಂಸ್ಥೆ ಮೈಸೂರಿನ ಅತ್ಯಂತ ಕಿರಿಯರ ಎನ್‌ಜಿಓ ಆಗಿದೆ. ಕಳೆದ ಮೂರು ವರ್ಷಗಳಿಂದ ಲಾಭರಹಿತವಾಗಿ ಸಮಾಜ ಮುಖಿ ಕಾರ್ಯಗಳನ್ನು ಮಾಡುತ್ತಿದ್ದು, ಸಂಸ್ಥೆಯ ಮೂರನೇ ವಾರ್ಷಿಕೋತ್ಸವದ ಅಂಗವಾಗಿ ಈ ಬಾರಿ ತೇರಾಪಂತ್ ಯುವಕ್ ಪರಿಷದ್ ಮತ್ತು ಜೀವಾಧಾರ ರಕ್ತ ನಿಧಿ ಸಹಯೋಗದೊಂದಿಗೆ ನಗರದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಆಚಾರ್ಯ ತುಳಸಿ ಡಯಾಗ್ನೋಸ್ಟಿಕ್ ಸೆಂಟರ್‌ನಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ತಮನ್ನಾ, ಮಂಚ್ ಜೈನ್, ಟಿಶಾ ಮತ್ತು ರೀಯಾ ಜೈನ್ ಉಪಸ್ಥಿತರಿದ್ದರು.

## ನಾಳೆ ವಿಶ್ವಕರ್ಮ ಜಯಂತಿ ; ಬೆಳ್ಳಿ ರಥದಲ್ಲಿ ಮೆರವಣಿಗೆ



ಮೈಸೂರು, ಸೆ.15(ಜಿಎ)-ಕನ್ನಡ ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ವಿಶ್ವಕರ್ಮ 8ನೇ ಜಯಂತ್ಯೋತ್ಸವ ಸಮಿತಿ ವತಿಯಿಂದ ಸೆ.17ರಂದು ವಿಶ್ವಕರ್ಮ ಜಯಂತಿ ಆಚರಿಸಲಾಗುತ್ತಿದೆ ಎಂದು ಸಮಿತಿ ಅಧ್ಯಕ್ಷ ಪಿ.ಸಿದ್ದಚಾರ್ ತಿಳಿಸಿದರು.


ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8 ಗಂಟೆಗೆ ನಗರದ ಇರ್ವಿನ್ ರಸ್ತೆಯಲ್ಲಿರುವ ಶ್ರೀಕಾಳಿಕಾಂಭ ಕಮಟೇಶ್ವರ ಸ್ವಾಮಿ ದೇವಸ್ಥಾನದಿಂದ ಬೆಳ್ಳಿರಥದಲ್ಲಿ ಭಗವಾನ್ ವಿಶ್ವಕರ್ಮರನ್ನು ಪೂಜಿಸಿದ ನಂತರ ಕಲಾತಂಡಗಳ ಜೊತೆಗೆ ಮೆರವಣಿಗೆ ಚಾಲನೆಯಾಗಲಿದೆ ಎಂದರು.

ಮೆರವಣಿಗೆಯು ಅಶೋಕರಸ್ತೆ, ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಕೆ.ಆರ್.ವೃತ್ತ, ಡಿ. ದೇವರಾಜ ಅರಸು ರಸ್ತೆ ಮೂಲಕ ಮೈಸೂರು-ಹುಣಸೂರು ರಸ್ತೆಯ ಕಲಾಮಂದಿರ ತಲುಪಲಿದೆ. ನಂತರ 11.30ಕ್ಕೆ ಕಲಾಮಂದಿರದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ಶಾಡಲಗೇರಿಯ ಏಕದಂಡಗಿ ಮಠದ ಶ್ರೀ ಸೂರ್ಯನಾರಾಯಣ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ವೇದಿಕೆ ಕಾರ್ಯಕ್ರಮ ಆರಂಭವಾಗಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ ಮುಕ್ತ ವಿವಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಶೆಲ್ವಪಿಳ್ಳೈ ಅಯ್ಯಂಗಾರ್ ಮುಖ್ಯ ಭಾಷಣ ಮಾಡಲಿದ್ದಾರೆ. ಮೇಯರ್ ಸೇರಿದಂತೆ ಜಿಲ್ಲೆಯ ಎಲ್ಲಾ ಜನ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಈ ವೇಳೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ವಿಶ್ವಕರ್ಮದ ಗಣ್ಯರಿಗೆ ಅಭಿನಂದಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಜಿ.ನಾರಾಯಣಾಚಾರ್, ಸೋಮಾಚಾರ್, ಗುರು ಮತ್ತು ರವಿಕುಮಾರ್ ಉಪಸ್ಥಿತರಿದ್ದರು.

### ಪ್ರತಾಪ್ ಲಿಂಗಯ್ಯಗೆ ಪಿಎಚ್.ಡಿ



ಮೈಸೂರು, ಸೆ. 15- ಡಾ. ಶಂಕರನಾರಾಯಣ ಅವರ ಮಾರ್ಗದರ್ಶನದಲ್ಲಿ ಪ್ರತಾಪ್ ಲಿಂಗಯ್ಯ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

## ಚೈತ್ರಾ ಕುಂದಾಪುರಗೆ ಅನಾರೋಗ್ಯ



**ಬೆಂಗಳೂರು:** ಬಿಜೆಪಿಯಿಂದ ಟಿಕೆಟ್ ಕೊಡಿಸುವುದಾಗಿ ಉದ್ಯಮಿಗೆ ಐದು ಕೋಟಿ ರೂಪಾಯಿ ವಂಚಿಸಿದ ಪ್ರಕರಣ ಸಂಬಂಧ ಸಿಸಿಬಿ ವಶದಲ್ಲಿರುವ ಚೈತ್ರಾ ಕುಂದಾಪುರ ಕುಸಿದು ಬಿದ್ದಿದ್ದು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ನಿನ್ನೆಯಿಂದ ಸಿಸಿಬಿ ವಶದಲ್ಲಿರುವ ಚೈತ್ರಾ ಕುಂದಾಪುರ ಅವರನ್ನು ಸಿಸಿಬಿ ಪೊಲೀಸರು ತೀವ್ರ ವಿಚಾರಣೆ ನಡೆಸುತ್ತಿದ್ದಾರೆ. ವಿಚಾರಣೆಯ ಎರಡನೇ ದಿನವಾದ ಇಂದು ಚೈತ್ರಾ ಅನಾರೋಗ್ಯದಿಂದ ಕುಸಿದುಬಿದ್ದಿರುವುದಾಗಿ ತಿಳಿದುಬಂದಿದೆ. ಕೂಡಲೇ ಅವರನ್ನು ಸಿಸಿಬಿ ಕಚೇರಿಯಿಂದ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಹಿಳಾ ಸಾಂತ್ವನ ಕೇಂದ್ರದಲ್ಲಿದ್ದ ಚೈತ್ರಾಳನ್ನು ವಿಚಾರಣೆಗಾಗಿ ಸಿಸಿಬಿ ಕಚೇರಿಗೆ ಕರೆತರಲಾಗಿತ್ತು, ಈ ವೇಳೆ ಕುಸಿದು ಬಿದ್ದ ಚೈತ್ರಾರನ್ನು ಸ್ಟ್ರೆಚರ್ ತಂದು ಆಸ್ಪತ್ರೆ ಸಿಬ್ಬಂದಿ ಕರೆದೊಯ್ದಿದ್ದಾರೆ. ಚೈತ್ರಾ ಕುಂದಾಪುರ ಅವರ ಬಾಯಿಯಲ್ಲಿ ನೊರೆ ಬಂದಿದೆ ಎಂದು ತಿಳಿದು ಬಂದಿದೆ.

ಇವರು ವಂಚನೆ ಪ್ರಕರಣದಲ್ಲಿ ನಂಬರ್ ಒನ್ ಆರೋಪಿಯಾಗಿದ್ದಾರೆ.

## ಮುಡಾದಲ್ಲಿ ಅಕ್ರಮ ನಡೆಸಿದವರ ವಿರುದ್ಧ ಕ್ರಮವಾಗಲಿ: ಹೆಚ್.ವಿ. ರಾಜೀವ್



ಮೈಸೂರು, ಸೆ 15(ಆರ್‌ಕೆ)- ಮುಡಾದಲ್ಲಿ ಕಾನೂನು ವ್ಯಾಪ್ತಿ ಮೀರಿ ಅಕ್ರಮವಾಗಿ ನಿವೇಶನ ನೀಡಿದ್ದರೆ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದನ್ನು ನಾನು ಸ್ವಾಗತಿಸುತ್ತೇನೆ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಪ್ರಾಧಿಕಾರದ ನಗರ ಯೋಜನಾ ಶಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ಸೇವೆ ಸಲ್ಲಿಸಿ, ನಿವೃತ್ತರಾಗಿರುವ ಪಿ.ಎಸ್. ನಟರಾಜ್ ಎಂಬುವರು ಸ್ವಾಧೀನಪಡಿಸಿಕೊಂಡ ಭೂ ಮಾಲೀಕರಿಗೆ ಪರಿಹಾರದ ಹಣಕ್ಕೆ ಬದಲಾಗಿ 50:50 ಅನುಪಾತ ದಡಿ ಅಭಿವೃದ್ಧಿಗೊಳಿಸಿರುವ ಪ್ರತಿಷ್ಠಿತ ಬಡಾವಣೆಯ ಭಾರೀ ಬೆಲೆ ಬಾಳುವ ಜಾಗ ನೀಡಲಾಗಿದೆ ಎಂದು ಮಾಡಿರುವ ಆರೋಪದಲ್ಲಿ ಉರುಳಿಲ್ಲ. ಯಾವ ನಿರ್ದಿಷ್ಟ ಪ್ರಕರಣಗಳಲ್ಲಿ ಅಕ್ರಮವಾಗಿದೆ ಎಂದು ದಾಖಲೆ ಸಮೇತ ದೂರು ಸಲ್ಲಿಸಿ ಸಾಬೀತುಪಡಿಸಲಿ ಎಂದರು.

ಸ್ವಾಧೀನಪಡಿಸಿಕೊಂಡ ಭೂಮಿಯ ಮಾಲೀಕರಿಗೆ ಪರಿಹಾರದ ಹಣ ನೀಡದೆ ನಿವೇಶನ ಹಂಚಿಕೆ ಮಾಡಿ ಅಲ್ಲಿ ಮನೆಗಳನ್ನು ನಿರ್ಮಿಸಿರುವ ಪ್ರಕರಣದಲ್ಲಿ ರೈತರು ನ್ಯಾಯಾಲಯದ ಮೆಟ್ಟಿಲೇರಿ ನಿರ್ದೇಶನ ನೀಡಿರುವ ಸಂದರ್ಭದಲ್ಲಿ ಆ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿಟ್ಟು, ಚರ್ಚಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದು ಕಾನೂನಿನ ವ್ಯಾಪ್ತಿಯಲ್ಲಿ ಅವಕಾಶವಿದ್ದರೆ ಮಾತ್ರ ಸೂಕ್ತ ಕ್ರಮಕ್ಕೆ ನಿರ್ಣಯ ಮಾಡಿದ್ದೇವೆಯೇ ಹೊರತು, ನಾನು ಸ್ವಯಂ ನಿರ್ಧಾರ ಮಾಡಿಲ್ಲ. ಅದನ್ನು ಕಾರ್ಯಗತ ಮಾಡುವಾಗ ಅಧಿಕಾರಿಗಳೇನಾದರೂ ತಪ್ಪು ಮಾಡಿದ್ದರೆ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಲಿ ಎಂದರು.

ನಾವು ಸಭೆಯಲ್ಲಿ ಯಾವುದೇ ನಿರ್ಣಯ ಕೈಗೊಂಡಿದ್ದರೂ ಅದು ಕಾನೂನು ವ್ಯಾಪ್ತಿಯಲ್ಲಿರುತ್ತದೆ. ರೈತರು, ಪ್ರಾಧಿಕಾರ ಹಾಗೂ ಜನಸಾಮಾನ್ಯರ ಹಿತದೃಷ್ಟಿಯಿಂದ ತೀರ್ಮಾನ ಕೈಗೊಂಡಿದ್ದೇವೆಯೇ ಹೊರತು, ಅಲ್ಲಿ ನನ್ನ ವೈಯಕ್ತಿಕ ಲಾಭವಾಗಲೀ, ಸ್ವಾರ್ಥವಾಗಲೀ ಇರುವುದಿಲ್ಲ. 2013ರಿಂದೀಚೆಗೆ ಬಲವಂತವಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಂತಿರಲಿಲ್ಲವಾದ್ದರಿಂದ ಪರಸ್ಪರ ಒಪ್ಪಂದದ ಮೇರೆಗೆ ಭೂಮಿ ಪಡೆದು ಅಭಿವೃದ್ಧಿ ಕಾರ್ಯಕ್ಕೆ ಬಳಸಿಕೊಳ್ಳಲಾಗಿದೆ ಎಂದು ರಾಜೀವ್ ಸ್ಪಷ್ಟಪಡಿಸಿದರು.

ನ್ಯಾಯಸಮ್ಮತ ಪರಿಹಾರಕ್ಕಾಗಿ ಕೋರ್ಟ್ ಮೆಟ್ಟಿಲೇರಿದ್ದ ರೈತರಿಗೆ ಅನ್ಯಾಯವಾಗಬಾರದೆಂದು ಕಾನೂನು ವ್ಯಾಪ್ತಿಯಲ್ಲಿ ಸಭೆಯು ಸಹಾಯ ಮಾಡಲು ನಿರ್ಧರಿಸಿದೆ. ಅದರಲ್ಲಿ ಯಾರ ವೈಯಕ್ತಿಕ ಹಿತವಿಲ್ಲ. ನಗರದ ಅಭಿವೃದ್ಧಿ, ಮುಡಾ ಹಿತದೃಷ್ಟಿಯಿಂದ ನಿರ್ಧಾರಗಳನ್ನು ಕೈಗೊಳ್ಳಲಾಗಿದೆಯೇ ಹೊರತು ಯಾವುದೇ ಅಕ್ರಮ, ಅವ್ಯವಹಾರ ನಡೆದಿಲ್ಲ. ಪರಿಹಾರದ ಬದಲಿಗೆ ನಿವೇಶನ ಮಂಜೂರು ಮಾಡಿ ಕಿಕ್ ಬ್ಯಾಕ್ ಪಡೆದು ಬೇನಾಮಿ ನಿವೇಶನ ಗಳಿಸಿದ್ದಾರೆಂಬ ನಟರಾಜ್ ಆರೋಪ ಸತ್ಯಕ್ಕೆ ದೂರವಾದುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ನಗರದ ಅಭಿವೃದ್ಧಿಗಾಗಿ ಹಾಗೂ ಮುಡಾಗೆ ಭೂಮಿ ನೀಡಿದ ರೈತರ ಗ್ರಾಮಗಳಿಗೆ ರಸ್ತೆ, ಕುಡಿಯುವ ನೀರು, ಚರಂಡಿ, ಬೀದಿ ದೀಪ ಸೇರಿದಂತೆ ಮೂಲಭೂತ ಸೌಲಭ್ಯ ಕಲ್ಪಿಸುವುದು ಪ್ರಾಧಿಕಾರದ ಜವಾಬ್ದಾರಿಯಾಗಿದೆ. ಹಲವು ಬಾಬ್ತುಗಳಲ್ಲಿ ಜನರಿಂದ ತೆರಿಗೆ ಹಣ ಸಂಗ್ರಹಿಸಿದಾಗ ಅದನ್ನು ಸಾರ್ವಜನಿಕರ ಸೌಕರ್ಯಕ್ಕಾಗಿ ಖರ್ಚು ಮಾಡುವುದು ಮುಡಾ ಕರ್ತವ್ಯವಾಗಿದೆ. ಕೇವಲ ಅಭಿವೃದ್ಧಿ ಹೆಸರಿನಲ್ಲಿ ಹಣವನ್ನು ವ್ಯಯ ಮಾಡುತ್ತಿದ್ದಾರೆಂಬ ನಟರಾಜ್ ಆರೋಪ ಸರಿಯಲ್ಲ ಎಂದು ರಾಜೀವ್ ನುಡಿದರು. ಮಾಜಿ ಮೇಯರ್ ಬಿ.ಎಲ್. ಭೈರಪ್ಪ, ಮುಖಂಡರಾದ ಜಯಂತ್ ಹಾಗೂ ವಾಸು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಶೂನಲ್ಲಿ ನಾಗರಹಾವು



ಮಡಿಕೇರಿ, ಸೆ.15– ಶೂ ಒಳಗೆ ಸೇರಿಕೊಂಡಿದ್ದ ನಾಗರಹಾವನ್ನು ರಕ್ಷಿಸಿ ಅರಣ್ಯಕ್ಕೆ ಬಿಡುವಲ್ಲಿ ಉರಗ ರಕ್ಷಕ ಸ್ನೇಕ್ ಸುರೇಶ್ ಪೂಜಾರಿ ಯಶಸ್ವಿಯಾಗಿದ್ದಾರೆ.

ಸಿದ್ದಾಪುರ ಸಮೀಪದ ನೆಲ್ಯಹುದಿಕೇರಿ ಗ್ರಾಮದ ಶಾಲಿ ಅವರು ಮನೆಯ ಹೊರ ಭಾಗದಲ್ಲಿ ಇಟ್ಟಿದ್ದ ಶೂ ಒಳಗೆ ಹಾವು ಸೇರಿಕೊಂಡಿತ್ತು. ಇಂದು ಬೆಳಿಗ್ಗೆ ಕೆಲಸಕ್ಕೆಂದು ತೆರಳಲು ಶೂ ತೆಗೆದಾಗ ಹಾವು ಇರುವುದು ಕಂಡು ಆತಂಕಗೊಂಡ ಶಾಲಿ ಅವರು ಸ್ನೇಕ್ ಸುರೇಶ್ ಪೂಜಾರಿ ಅವರಿಗೆ ಮಾಹಿತಿ ನೀಡಿದರು.

ಸ್ಥಳಕ್ಕೆ ಬಂದ ಸುರೇಶ್ ಹಾವನ್ನು ಸೆರೆ ಹಿಡಿದು ನಂತರ ಸುರಕ್ಷಿತವಾಗಿ ಅರಣ್ಯಕ್ಕೆ ಬಿಟ್ಟಿದ್ದಾರೆ. ಮನೆಯ ಹೊರ ಭಾಗದಲ್ಲಿರುವ ಪಾದರಕ್ಷೆ ಮತ್ತಿತರ ವಸ್ತುಗಳನ್ನು ಬಳಸುವಾಗ ಎಚ್ಚರಿಕೆಯಿಂದ ಸೂಕ್ಷ್ಮವಾಗಿ ಗಮನಿಸಬೇಕು. ಹಾವುಗಳು ಕಂಡು ಬಂದಲ್ಲಿ ಕೊಲ್ಲದೆ ಉರಗ ರಕ್ಷಕರಿಗೆ ಮಾಹಿತಿ ನೀಡಬೇಕು ಎಂದು ಸುರೇಶ್ ಮನವಿ ಮಾಡಿದ್ದಾರೆ.

### ಕೊಡವ ಲ್ಯಾಂಡ್ ಭೌಗೋಳಿಕ-ರಾಜಕೀಯ ಸ್ವಾಯತ್ತತೆಗಾಗಿ

# ಸಿಎನ್‌ಸಿ ಪಾದಯಾತ್ರೆ ಆರಂಭ




ಮಡಿಕೇರಿ, ಸೆ.15– ಕೊಡವ ಲ್ಯಾಂಡ್ ಭೌಗೋಳಿಕ-ರಾಜಕೀಯ ಸ್ವಾಯತ್ತತೆ ಸೇರಿದಂತೆ ಸಂವಿಧಾನದತ್ತವಾದ 9 ಬೇಡಿಕೆಗಳ ಕುರಿತು ಸರ್ಕಾರದ ಗಮನ ಸೆಳೆಯಲು ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಅವರ ಜನ್ಮದಿನವಾದ ಇಂದು ತೀರ್ಥಕ್ಷೇತ್ರ ತಲಕಾವೇರಿಯಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಪಾದಯಾತ್ರೆಯನ್ನು ಆರಂಭಿಸಿತು.

ಕೊಡಗು ಜಿಲ್ಲೆಯ ವಿವಿಧೆಡೆ ಐದು ಹಂತಗಳಲ್ಲಿ ಪಾದಯಾತ್ರೆ ನಡೆಯಲಿದೆ. ಶುಕ್ರವಾರ ಬೆಳಗ್ಗೆ ತಲಕಾವೇರಿಯಲ್ಲಿ ಡಾ.ಸುಬ್ರಮಣಿಯನ್ ಸ್ವಾಮಿ ಅವರ ಪರವಾಗಿ ವಿಶೇಷ ಪೂಜೆ ಸಲ್ಲಿಸಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆಗಾಗಿ ಪ್ರಾರ್ಥನೆ ಸಲ್ಲಿಸಿದರು. ನಂತರ ಕೊಡವ ಲ್ಯಾಂಡ್ ಪರ ಘೋಷಣೆಯೊಂದಿಗೆ ಪಾದಯಾತ್ರೆ ಆರಂಭಗೊಂಡಿತು.

ತಲಕಾವೇರಿ (ತಾವುನಾಡ್), ದೇವಟ್ ಪರಂಬ್ (ದೇಶ ಮಂದ್), ಮಚ್ಚುರೋಡ ಮಂದ್ (ಬಲ್ಲತ್ ನಾಡ್) ಮತ್ತು ಬೇಂಗ್ ನಾಡ್ ಮಂದ್ (ಚೇರಂಬಾಣೆ) ಯಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರು ಪಾದಯಾತ್ರೆಯ ಉದ್ದೇಶದ ಕುರಿತು ಮಾತನಾಡಿದರು. ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆಯ ಬೇಡಿಕೆ ಈಡೇರುವವರೆಗೆ ಸಂವಿಧಾನದ ಚೌಕಟ್ಟಿನಡಿ ಸಿಎನ್‌ಸಿ ಸಂಘಟನೆ ಶಾಂತಿಯುತ ಹೋರಾಟವನ್ನು ಮುಂದುವರೆಸಲಿದೆ. ತಲಕಾವೇರಿಯಿಂದ ಆರಂಭಗೊಂಡಿರುವ ಈ ಪಾದಯಾತ್ರೆ 5 ಹಂತಗಳಲ್ಲಿ ನಡೆಯಲಿದ್ದು, ಮಾರ್ಗದುದ್ದಕ್ಕೂ ಕೊಡವರನ್ನು ಭೇಟಿ ಮಾಡಲಾಗುವುದು. ಪ್ರತಿ ನಾಡ ಮಂದ್‌ಗಳಲ್ಲಿ ಸಭೆ ನಡೆಸಿ ಜನಜಾಗೃತಿ ಮೂಡಿಸುವುದರೊಂದಿಗೆ ಸರ್ಕಾರದ ಗಮನ ಸೆಳೆಯಲಾಗುವುದು ಎಂದರು. ಸಿಎನ್‌ಸಿಯ 9 ಬೇಡಿಕೆಗಳ ಕುರಿತು ಪಾದಯಾತ್ರೆ ಸಂದರ್ಭ ಜನಜಾಗೃತಿ ಮೂಡಿಸಿ ಹಕ್ಕೊತ್ತಾಯ ಮಂಡಿಸಲಾಗುವುದು ಎಂದು ಹೇಳಿದರು.

ಭೌಗೋಳಿಕ–ರಾಜಕೀಯ ಸ್ವಾಯತ್ತತೆಯು ಯುಎನ್/ವಿಶ್ವ ರಾಷ್ಟ್ರ ಸಂಸ್ಥೆ ಚಾರ್ಟರ್‌ನಲ್ಲಿ ಪ್ರತಿಪಾದಿಸಲ್ಪಟ್ಟ ನಿರ್ದಿಷ್ಟ ಪ್ರದೇಶದ ಪ್ರಾಚೀನ ಸ್ವದೇಶಿ–ನಿಸರ್ಗಜನ್ಯ ರೇಸ್ ಅನ್ನು ರಕ್ಷಿಸಲು, ಉತ್ತೇಜಿಸಲು ಮತ್ತು ಪುನರುಜ್ಜೀವನಗೊಳಿಸಲು ಮೂಲಭೂತ ನೀತಿಯಾಗಿ ಸಾಂವಿಧಾನಿಕ ವ್ಯವಸ್ಥೆಯಾಗಿದೆ. 2002 ರಲ್ಲಿ ಕೊಡವರಿಗೆ ಸ್ವಾಯತ್ತ ಪರಿಷತ್ತನ್ನು ರಚಿಸಲು ಭಾರತದ ಸಿಎನ್‌ಸಿಯ ಮನವಿ ಮೇರೆಗೆ ಸಂವಿಧಾನ ಪರಿಶೀಲನಾ ಆಯೋಗ ಶಿಫಾರಸು ಮಾಡಿದೆ. ಆನಂದ್ ಶರ್ಮಾ ಸಮಿತಿಯ ವರದಿಯು ಸ್ವಾಯತ್ತ ಪ್ರದೇಶಗಳು ಮತ್ತು ಅದರ ಕೌನ್ಸಿಲ್‌ಗಳಿಗೆ ಹೆಚ್ಚಿನ ಅಧಿಕಾರ ನೀಡಲು ತಿಳಿಸಿದೆ.

ವಿಶ್ವಪ್ರಸಿದ್ಧ ಅರ್ಥಶಾಸ್ತ್ರಜ್ಞ ಮತ್ತು ಮಾಜಿ ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಅವರು ನಮ್ಮ ಸಂವಿಧಾನದ ಆರ್ಟಿಕಲ್ 244 ಖ/6 ಮತ್ತು 8 ನೇ ಶೆಡ್ಯೂಲ್ ಅಡಿಯಲ್ಲಿ ಕೌನ್ಸಿಲ್ ಅನ್ನು ಸ್ಥಾಪಿಸುವ ಮೂಲಕ ಕೊಡವರಿಗೆ ಸ್ವಾಯತ್ತ ಪ್ರದೇಶವನ್ನು ರಚಿಸುವುದಕ್ಕಾಗಿ ನಮ್ಮ ಸಮಗ್ರ ಸಬಲೀಕರಣಕ್ಕಾಗಿ WP No-7769/2023 (PIL) ಅನ್ನು ಸಲ್ಲಿಸಿದರು.

ಸಿಎನ್‌ಸಿ ಮೂಲಕ ಜನರ ಆಕಾಂಕ್ಷೆಗಳನ್ನು ಪ್ರತಿಧ್ವನಿಸಲು, ಮೂಲೆ ಮೂಲೆಗಳಲ್ಲಿ ಯುಎನ್/ವಿಶ್ವ ರಾಷ್ಟ್ರ ಸಂಸ್ಥೆ ಚಾರ್ಟರ್‌ನಲ್ಲಿ ಪ್ರತಿಪಾದಿಸಿರುವ ಸಾರ್ವತ್ರಿಕ ಕಾನೂನಿನ ಪ್ರಕಾರ ಮತ್ತು ಭಾರತದ ಸಂವಿಧಾನದ ಅಡಿಯಲ್ಲಿ ಸ್ವಯಂ ಆಡಳಿತ ಹಾಗೂ ಸ್ವಯಂ ನಿರ್ಣಯದ ಹಕ್ಕುಗಳನ್ನು ಸ್ಥಾಪಿಸಲು ಆರ್ಟಿಕಲ್ 32 ಅನ್ನು ಈ ಮೂಲಕ ಪ್ರಚಾರ ಮಾಡುತ್ತಿದ್ದೇವೆ. ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಯತ್ತತೆಯೂ ಕರ್ನಾಟಕದ ಸ್ವಾಧೀನದ ಅಡಿಯಲ್ಲಿ ಭಾರತದ ಸಾರ್ವಭೌಮತ್ವಕ್ಕೆ ಪೂರಕವಾಗಿರುತ್ತದೆ ಎಂದು ನಾಚಪ್ಪ ಹೇಳಿದರು.

ಪುಲ್ಲೇರ ಸ್ವಾತಿ ಕಾಳಪ್ಪ ಪಟ್ಟಮಾಡ ಲಲಿತ ಗಣಪತಿ, ಚೋಳಪಂಡ ಜ್ಯೋತಿ ನಾಣಯ್ಯ, ನಂದಿನೆರವಂಡ ನಿಶ ಅಚ್ಚಯ್ಯ, ನಂದಿನೆರವಂಡ ಕೃಪ, ಅರೆಯಡ ಕವಿತಾ ಗಿರೀಶ್, ಕಲಿಯಂಡ ದೀನ ಪ್ರಕಾಶ್, ಕರವಂಡ ಸರಸು, ಪಟ್ಟಮಾಡ ಸೀತಮ್ಮ, ಮಂದಪಂಡ ಸೀತವ್ವ ಮುತ್ತಣ್ಣ, ಮಂದಪಂಡ ಹರಿಣಿ, ಪಟ್ಟಮಾಡ ಸುನೀತ, ಪಟ್ಟಮಾಡ ರಾಣಿ ಕುಶಾಲಪ್ಪ, ಪಟ್ಟಮಾಡ ನಾಯನ, ಪಟ್ಟಮಾಡ ವನಿತ, ಕಲ್ಮಾಡಂಡ ರೀಟ, ಕಲ್ಮಾಡಂಡ ಬಬಿತ ಕಲಿಯಂಡ ಪ್ರಕಾಶ್, ಮಂದಪಂಡ ಮನೋಜ್, ಪಟ್ಟಮಾಡ ಕುಶ, ಅಳಮಂಡ ಜೈ, ಅಳಮಂಡ ನೆಹರು, ಬಾಚರಣಿಯಂಡ ಚಿಪ್ಪಣ್ಣ, ಕಾಂಡೇರ ಸುರೇಶ್, ಅಜ್ಜಿಕುಟ್ಟಿರ ಲೋಕೇಶ್, ಪುಲ್ಲೇರ ಕಾಳಪ್ಪ ನಂದಿನೆರವಂಡ ವಿಜು, ನಂದಿನೆರವಂಡ ಬೋಪಣ್ಣ ಮಂದಪಂಡ ಸೂರಾಜ್, ಮಂದಪಂಡ ಅಯ್ಯಣ್ಣ, ಅಪ್ಪೆಂಗಡ ಮಾಲೆ, ಕಿರಿಯಮಾಡ ಶರೀನ್, ಪುರ್ವಂಗಡ ನವೀನ್, ಚೋಳಪಂಡ ನಾಣಯ್ಯ, ಅರೆಯಾಡ ಗಿರೀಶ್, ಕೂಪದಿರ ಸಾಬು, ಪುಟ್ಟಿಚಂಡ ಡಾನ್ ದೇವಯ್ಯ, ಮಣವಟ್ಟೀರ ಚಿಣ್ಣಪ್ಪ, ಮಣೋಟ್ಟಿರ ನಂದ, ಅಪ್ಪಚ್ಚಿರ ರಮ್ಮಿ ನಾಣಯ್ಯ, ಕಾಟುಮಣಿಯಂಡ ಉಮೇಶ್, ಪುದಿಯೊಕ್ಕಡ ಕಾಶಿ, ಕೇಕಡ ವಿಠಲ, ಕೇಕಡ ಚಿಣ್ಣಿ, ತೆಲಪಂಡ ಮಂದಣ್ಣ, ಬೊಳ್ಳರ್ಪಂಡ ಚಂಗಪ್ಪ, ಬಾಚರಣಿಯಂಡ ಹ್ಯಾರಿ, ಪಟ್ಟಮಾಡ ಅಶೋಕ್, ಮಣೊಟ್ಟಿರ ಸ್ವರೂಪ್, ಬೇಪಡಿಯಂಡ ದಿನು, ಬೇಪಡಿಯಂಡ ಬಿದ್ದಪ್ಪ, ಕೊಟ್ಟುಕತ್ತಿರ ಸಾಬು, ಕೊಟ್ಟುಕತ್ತಿರ ಬಾಬಿ, ಕಾಡಂಡ ಅಪ್ಪಸ್ವಾಮಿ, ಬಾಚರಣಿಯಂಡ ದಿನೇಶ್, ಅಪ್ಪಚಟ್ಟೋಳಂಡ ಮನು ಮುತ್ತಪ್ಪ, ಪರದಂಡ ಸುಬ್ರಮಣಿ, ತೆಲಪಂಡ ರತ್ತು ನಂಜಪ್ಪ, ಪಟ್ಟಿಮಾಡ ಉದಯ್, ಪಟ್ಟಮಾಡ ಸುಂದರ್ ಮುತ್ತಣ್ಣ, ಪಟ್ಟಮಾಡ ವಿಶು, ಮಂದಪಂಡ ಅರಸು, ಬಾಚಮಂಡ ರಾಜ ಪೂವಣ್ಣ, ಚಿಯಕ್‌ಪೂವಂಡ ರಂಜು, ಬೊಪರ್ತಂಡ ಕಿಶೋರ್, ಕಲ್ಮಾಡಂಡ ಮೊಣ್ಣಪ್ಪ, ಕಲ್ಮಾಡಂಡ ವಾಸು, ಕೇಕಡ ಪಳಂಗಪ್ಪ ಕೇಕಡ ನಾಣಯ್ಯ, ಕೇಕಡ ದೊರೆಮಣಿ, ಬಾಚಿನಾಡಂಡ ಗಿರಿ, ಮಂದಪಂಡ ದೀಪಕ್, ಕೇಕಡ ಸುಬ್ಬಯ್ಯ, ಕೇಕಡ ಮೊಣ್ಣಪ್ಪ, ಬೈರಾಜಂಡ ದರ್ಶನ್, ಬಾಚಿನಾಡಂಡ ರಿಶಾಂತ್ ಬೋಪಣ್ಣ, ಮುಡುವಂಡ ಧ್ಯಾನ್ ಬೋಪಣ್ಣ, ಪಳೆಂಗಟ್ಟಿರ ಅಶೋಕ್, ಬೊಟ್ಟೊಳಂಡ ಮಿಟ್ಟು ಪೂಣಚ್ಚ, ಚಿಯಬೇರ ಶಶಿ ಸೋಮಣ್ಣ, ಕೇಕಡ ಸುಬ್ಬಯ್ಯ ಮತ್ತಿತರರು ಪಾದಯಾತ್ರೆ ಸಂದರ್ಭ ಹಾಜರಿದ್ದರು.

## ಚನ್ನಮ್ಮ ನಿಧನ

ಕುಶಾಲನಗರ, ಸೆ15– ನಗರದ ಇಂದಿರಾ ಬಡಾವಣೆ ನಿವಾಸಿ ಹಿರಿಯ ಪತ್ರಿಕಾ ವಿತರಕ ದಿ.ರಾಜಣ್ಣರವರ ಪತ್ನಿ ಚನ್ನಮ್ಮ(80) ಶುಕ್ರವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ ಮೃತರ ಅಂತ್ಯಕ್ರಿಯೆ ಶನಿವಾರ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



## ಕೊಮಾರಪ್ಪ



ಶನಿವಾರಸಂತೆ, ಸೆ.15– ಸಮೀಪದ ಅಪ್ಪಶೆಟ್ಟಳ್ಳಿ ಗ್ರಾಮದ ನಿವಾಸಿ ಕಾಫಿ ಬೆಳೆಗಾರ ಎ.ಡಿ. ಕೊಮಾರಪ್ಪ (81) ಶುಕ್ರವಾರ ನಿಧನರಾದರು.

ಮೃತರು ಪತ್ನಿ ಎ.ಕೆ.ಪುಟ್ಟರಾಜಮ್ಮ, ಮೂವರು ಪುತ್ರರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಅಪ್ಪಶೆಟ್ಟಳ್ಳಿ ಗ್ರಾಮದಲ್ಲಿ ಸಂಜೆ ನೆರವೇರಿಸಲಾಯಿತು.

### 'ಸಂವಿಧಾನ ಪೀಠಿಕೆ ವಾಚನ'ಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ

# ಇಡೀ ವಿಶ್ವದಲ್ಲಿಯೇ ಅತ್ಯುತ್ತಮ ಸಂವಿಧಾನ ಪಡೆದಿರುವುದು ಪುಣ್ಯ



ಮಡಿಕೇರಿ, ಸೆ.15– ಇಡೀ ವಿಶ್ವದಲ್ಲಿಯೇ ಮಾದರಿ ಸಂವಿಧಾನ ಒಳಗೊಂಡಿರುವ ಭಾರತವು 'ಸಂವಿಧಾನದ ಪ್ರಸ್ತಾವನೆಯಲ್ಲಿ ಭಾರತದ ಪ್ರಜೆಗಳಾದ ನಾವು... ಎಂಬ ಪದವು ಎಲ್ಲರಲ್ಲಿ ಏಕತೆ, ಭ್ರಾತೃತ್ವ ಉಂಟು ಮಾಡುತ್ತದೆ. ಜೊತೆಗೆ ಸಮಾನತೆ, ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ಗಣರಾಜ್ಯ ಒಳಗೊಂಡಿದೆ ಎಂದು ನಗರಸಭೆ ಅಧ್ಯಕ್ಷೆ ನೆರವಂಡ ಅನಿತಾ ಪೂವಯ್ಯ ಹೇಳಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಗರದ ಗೌಡ ಸಮಾಜದ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಪ್ರಯುಕ್ತ ಶುಕ್ರವಾರ ನಡೆದ 'ಸಂವಿಧಾನ ಪೀಠಿಕೆ ವಾಚನ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಂವಿಧಾನ ಪೀಠಿಕೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನು ಒಳಗೊಂಡಿದ್ದು, ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು ಉಪಾಸನೆಯ ಸ್ವತಂತ್ರವನ್ನು ಸಂವಿಧಾನದ ಪೀಠಿಕೆಯಲ್ಲಿ ಪ್ರಸ್ತಾಪಿಸಲಾಗಿದೆ ಎಂದರು. ಭಾರತೀಯ ಪ್ರಜೆಗಳಾದ ಎಲ್ಲರಿಗೂ ಸಮಾನ ಸ್ಥಾನಮಾನ ಮತ್ತು ಅವಕಾಶಗಳು ದೊರೆಯುವಂತೆ ಮಾಡುವುದು ಸಂವಿಧಾನದ ಆಶಯವಾಗಿದೆ. ವ್ಯಕ್ತಿ ಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ ದೃಢಸಂಕಲ್ಪ ಮಾಡಬೇಕಿದೆ ಎಂದು ಅನಿತಾ ಪೂವಯ್ಯ ವಿವರಿಸಿದರು.


ಭಾರತ ಸಂವಿಧಾನ ಸಭೆಯಲ್ಲಿ ನಮಗೆ ನಾವೇ ಅರ್ಪಿಸಿಕೊಂಡು ಅಂಗೀಕರಿಸಿ ಶಾಸನವಾಗಿ ವಿಧಿಸಿಕೊಂಡಿದ್ದೇವೆ. ಆ ನಿಟ್ಟಿನಲ್ಲಿ ಪ್ರಜಾಪ್ರಭುತ್ವ ಬಲಪಡಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ವಿಶ್ವದಲ್ಲಿಯೇ ಮಾದರಿಯಾದ ಅತ್ಯುತ್ತಮ ಸಂವಿಧಾನವನ್ನು ಭಾರತೀಯರಿಗೆ ನೀಡಿದ್ದಾರೆ ಎಂದು ಅನಿತಾ ಪೂವಯ್ಯ ಅವರು ಹೇಳಿದರು.

ಜಿಪಂ ಸಿಇಓ ವರ್ಣಿತ್ ನೇಗಿ ಮಾತನಾಡಿ, ಭಾರತ ರಾಷ್ಟ್ರದಲ್ಲಿ ಸಂವಿಧಾನವೇ ಪ್ರತಿಯೊಬ್ಬರಿಗೂ ಜೀವಾಳವಾಗಿದೆ. ಸಂವಿಧಾನವಿಲ್ಲದೆ ಜೀವನ ಇಲ್ಲ ಎಂದರು. ಸಂವಿಧಾನದಿಂದ ಹಲವು ಕಾನೂನು ಸೌಲಭ್ಯಗಳು ಪ್ರತಿಯೊಬ್ಬರಿಗೂ ತಲುಪಲಿವೆ. ಆ ದಿಸೆಯಲ್ಲಿ ಭಾರತೀಯ ಪ್ರಜೆಗಳಿಗೆ ತಮ್ಮ ಹಕ್ಕುಗಳನ್ನು ಪಡೆಯುವುದರ ಜೊತೆಗೆ ಕರ್ತವ್ಯಗಳನ್ನು ಪಾಲಿಸಬೇಕು ಎಂದು ಕರೆ ನೀಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಅವರು ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ, ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ: ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ: ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ: ಸ್ಥಾನಮಾನ ಹಾಗೂ ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ, ಅವರಲ್ಲಿ ಭ್ರಾತೃತ್ವಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕವಾಗಿ ಸಂಕಲ್ಪ ಮಾಡಿದವರಾಗಿ: ನಮ್ಮ ಸಂವಿಧಾನ ಸಭೆಯಲ್ಲಿ 1949, ನವೆಂಬರ್ 26 ರಂದು ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ" ಎಂದು ಸಂವಿಧಾನ ಪೀಠಿಕೆಯನ್ನು ವಾಚಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ 54 ಸಾವಿರ ಗುರಿಯಲ್ಲಿ 2.80 ಲಕ್ಷ ಜನರು ಹೆಸರು ನೋಂದಣಿ ಮಾಡಿ ಸಂವಿಧಾನ ಪೀಠಿಕೆ ವಾಚನಕ್ಕೆ ಅಭೂತಪೂರ್ವ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಭೆಯ ಆರಂಭದಲ್ಲಿ ಸಂವಿಧಾನ ಪೀಠಿಕೆ ಹಾಗೂ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಗಣ್ಯರು ನೆರವೇರಿಸಿದರು. ಸಂವಿಧಾನ ಪೀಠಿಕೆಯ ಭಾವಚಿತ್ರವನ್ನು ಗಣ್ಯರಿಗೆ ಹಸ್ತಾಂತರ ಮಾಡಲಾಯಿತು.

# ಮನೆಗಳ್ಳನ ಬಂಧನ: 1.39 ಲಕ್ಷ ರೂ. ನಗ, ನಾಣ್ಯ ವಶ



ಮಡಿಕೇರಿ, ಸೆ.15– ಗೋಣಿಕೊಪ್ಪ ಪೊಲೀಸರು ಮನೆಗಳ್ಳನೊಬ್ಬನನ್ನು ಬಂಧಿಸಿದ್ದಾರೆ. ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ಸಾಗ್ಯ ಗ್ರಾಮ ನಿವಾಸಿ ಎಂ.ಮಲ್ಲೇಶ(24) ಬಂಧಿತ ಮನೆಗಳ್ಳ.. ಆರೋಪಿಯಿಂದ 28 ಗ್ರಾಂ. ಚಿನ್ನಾಭರಣ, 1 ಬೆಳ್ಳಿ ಚೈನ್ ಸೇರಿ ಒಟ್ಟು 1 ಲಕ್ಷದ 39 ಸಾವಿರ ರೂ. ಮೌಲ್ಯದ ಸ್ವತ್ತನ್ನು ವಶಕ್ಕೆ ಪಡೆಯಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

**ಘಟನೆ ಹಿನ್ನೆಲೆ:** ಗೋಣಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ಮಾಯ ಮುಡಿ ಗ್ರಾಮದ ರಾಜಕಾಲೋನಿ ನಿವಾಸಿ ಎನ್.ಮಂಜುನಾಥ್ ಇದೇ ಜೂನ್ 17ರಂದು ಬೆಳಗೆ 9 ಗಂಟೆಗೆ ಮನೆಗೆ ಬೀಗ ಹಾಕಿ ಅದರ ಕೀ ಅನ್ನು ಹಿತ್ತಲಿನಲ್ಲಿರುವ ಹೂ ಕುಂಡದಲ್ಲಿಟ್ಟು ಕೆಲಸಕ್ಕೆ ತೆರಳಿದ್ದರು. ಸಂಜೆ ಮನೆಗೆ ಬಂದು ನೋಡಿದಾಗ ಮಲಗುವ ಕೋಣೆಯ ಬೀರುವಿನಲ್ಲಿಟ್ಟಿದ್ದ 1.35 ಲಕ್ಷ ರೂ. ಮೌಲ್ಯದ 28 ಗ್ರಾಂ ಚಿನ್ನಾಭರಣ ಮತ್ತು 4 ಸಾವಿರ ರೂ. ಮೌಲ್ಯದ 1 ಬೆಳ್ಳಿ ಚೈನ್ ಕಳುವಾಗಿರುವುದು ಕಂಡು ಬಂದಿತ್ತು. ಈ ಹಿನ್ನೆಲೆಯಲ್ಲಿ ಮಂಜುನಾಥ್ ಅವರು ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಐಪಿಸಿ ಸೆಕ್ಷನ್ 380 ಕಲಂ 454 ಅಡಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸುತ್ತಿದ್ದರು.

ವಿರಾಜಪೇಟೆ ಡಿವೈಎಸ್‌ಪಿ ಮೋಹನ್ ಕುಮಾರ್ ಮಾರ್ಗದರ್ಶನದಲ್ಲಿ ಗೋಣಿಕೊಪ್ಪ ವೃತ್ತ ನಿರೀಕ್ಷಕ ಎ.ವಿ. ಗೋವಿಂದ ರಾಜು, ಪಿಎಸ್‌ಐ ರೂಪಾದೇವಿ, ಸಿಬ್ಬಂದಿಗಳಾದ ಟಿ.ಪಿ. ಮಂಜುನಾಥ್, ಎಂ.ಕೆ. ಪೂವಯ್ಯ, ಎಂ. ಚಂದ್ರಶೇಖರ್, ಜಿ.ವಿ.ತೇಜಸ್ ಕುಮಾರ್, ಪಿ.ಎ.ಮಹಮದ್ ಅಲಿ, ಕೆ.ಎ.ಹನೀಫ್ ಮತ್ತು ಬಿ.ಎನ್.ಪುನೀತ್ ಅವರುಗಳು ಸೆ.13ರಂದು ಆರೋಪಿಯನ್ನು ಬಂಧಿಸಿದ್ದಾರೆ. ಬಳಿಕ ಆರೋಪಿ ಬಳಿಯಿದ್ದ 1.39 ಲಕ್ಷ ರೂ. ಮೌಲ್ಯದ ಸ್ವತ್ತನ್ನು ವಶಕ್ಕೆ ಪಡೆದು ಕೊಂಡಿದ್ದು ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

# ಚಾ.ನಗರ: ಅರ್ಥಪೂರ್ಣ ಸಂವಿಧಾನ ಪೀಠಿಕೆ ವಾಚನ



ಚಾಮರಾಜನಗರ, ಸೆ.15– ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ಭಾರತ ಸಂವಿಧಾನ ಪೀಠಿಕೆ ವಾಚನ ಕಾರ್ಯಕ್ರಮ ನಗರದಲ್ಲಿ ಶುಕ್ರವಾರ ಅರ್ಥಪೂರ್ಣವಾಗಿ ನಡೆಯಿತು.

ಮೊದಲಿಗೆ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ, ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ, ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಎಡಿಸಿ ಗೀತಾ ಹುಡೇದ, ಇತರೆ ಗಣ್ಯರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಇದೇ ವೇಳೆ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಹಾಗೂ ಭಾರತ ಸಂವಿಧಾನ ಗ್ರಂಥ ಮತ್ತು ಪೀಠಿಕೆ ಮಾದರಿ ಚಿತ್ರವನ್ನು ಒಳಗೊಂಡ ರಥದ ಮೆರವಣಿಗೆ ಹಾಗೂ ಸಂವಿಧಾನ ಜಾಗೃತಿ ಜಾಥಾಗೆ ಗಣ್ಯರು ಚಾಲನೆ ನೀಡಿದರು. ಗಣ್ಯರು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಅಧಿಕಾರಿ, ಸಿಬ್ಬಂದಿ, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಮುಖಂಡರು, ಸ್ತ್ರೀ ಶಕ್ತಿ ಮಹಿಳಾ ಸಂಘದ ಸದಸ್ಯರು ಸೇರಿದಂತೆ ಸಾವಿರಾರು ಮಂದಿ ರಾಷ್ಟ್ರಧ್ವಜ ಹಿಡಿದು ಬೃಹತ್ ಜಾಥಾದಲ್ಲಿ ಮುನ್ನಡೆದರು.

ನಗರದ ಬಿ.ರಾಚಯ್ಯ ಜೋಡಿರಸ್ತೆ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ರಸ್ತೆ, ಗುಂಡ್ಲುಪೇಟೆ ವೃತ್ತ, ದೊಡ್ಡ ಅಂಗಡಿ ಬೀದಿ, ವೀರಭದ್ರೇಶ್ವರ ದೇವಸ್ಥಾನದ ರಸ್ತೆ ಮೂಲಕ ಸಾಗಿ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣಕ್ಕೆ ಜಾಥಾ ತಲುಪಿತು. ಕ್ರೀಡಾಂಗಣದಲ್ಲಿ ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಣೆಗೆ ಎಲ್‌ಇಡಿ ವ್ಯವಸ್ಥೆ ಮಾಡಲಾಗಿತ್ತು. ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂವಿಧಾನ ಪೀಠಿಕೆ ವಾಚನ ಮಾಡುತ್ತಿದ್ದಂತೆಯೇ ಅದನ್ನು ಅನುಸರಿಸಿ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಎಡಿಸಿ ಗೀತಾ ಹುಡೇದ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ್, ಅಧಿಕಾರಿ, ಸಿಬ್ಬಂದಿ, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಮುಖಂಡರು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಸ್ತ್ರೀ ಶಕ್ತಿ ಮಹಿಳಾ ಸಂಘದ ಸದಸ್ಯರು ಸೇರಿದಂತೆ ಸಹಸ್ರಾರು ಸಂಖ್ಯೆಯಲ್ಲಿ ಸೇರಿದ್ದ ಜನಸ್ತೋಮ ಏಕಕಾಲದಲ್ಲಿ ಭಾರತ ಸಂವಿಧಾನದ ಪೀಠಿಕೆ ವಾಚನ ಮಾಡಿದರು. ಜಿಲ್ಲೆಯಲ್ಲಿ ಆನ್‌ಲೈನ್ ಮೂಲಕ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ಕಾಗಿ 5.80 ಲಕ್ಷ ಮಂದಿ ನೋಂದಾಯಿಸಿಕೊಂಡಿರುವ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ್ ತಿಳಿಸಿದರು.

# ಸರ್ಕಾರದಿಂದ ಆರೋಗ್ಯ, ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ

### ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್





ಗುಂಡ್ಲುಪೇಟೆ, ಸೆ.15– ಸರ್ಕಾರ ಆರೋಗ್ಯ ಹಾಗೂ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಅಧಿಕಾರಿಗಳು ಅವುಗಳನ್ನು ಜನತೆಗೆ ತಲುಪಿಸುವ ಕಾರ್ಯ ಮಾಡಬೇಕು ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿವಿಧ ಇಲಾಖೆಗಳ ಅನುಪಾಲನಾ ವರದಿ ಪರಿಶೀಲಿಸಿ ಮಾತನಾಡಿದ ಅವರು, ಸರ್ಕಾರ ಕಳೆದ 3 ತಿಂಗಳಿಂದ ಜನತೆಯ ಅನುಕೂಲಕ್ಕೆ ಅಗತ್ಯವಾದ ಯೋಜನೆಗಳನ್ನು ಕೊಡಲು ಶ್ರಮಿಸುತ್ತಿದೆ. ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ವೇಗ ನೀಡಬೇಕಾಗಿದ್ದು, ಈ ಬಗ್ಗೆ ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಆದ್ದರಿಂದ ಕ್ಷೇತ್ರಕ್ಕೆ ಸಂಬಂಧಿಸಿದ ಹೊಸ ಕಾಮಗಾರಿಗಳು, ಕುಡಿಯುವ ನೀರು, ಶಾಲಾ ಕೊಠಡಿಗಳು, ಅಂಗನವಾಡಿ ಕೇಂದ್ರಗಳು ಹಾಗೂ ಸೆಸ್ಕ್ ಉಪಕೇಂದ್ರಗಳ ಸ್ಥಾಪನೆ ಮುಂತಾದ ಯೋಜನೆಗಳ ಬಗ್ಗೆ ಕ್ರಿಯಯೋಜನೆ ಸಿದ್ಧಪಡಿಸಬೇಕಾಗಿದೆ. ತಾಲೂಕನ್ನು ಬರ ಪೀಡಿತ ಎಂದು ಪರಿಗಣಿಸಿದ್ದರೂ, ಅಧಿಕ ಪ್ರಮಾಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿರುವ ಪ್ರದೇಶಗಳನ್ನು ಗಂಭೀರವಾಗಿ ಪರಿಗಣಿಸಿದೆ. ಆದ್ದರಿಂದ ಅಧಿಕಾರಿಗಳು ಹೆಚ್ಚಿನ ಶ್ರಮವಹಿಸಬೇಕಾಗಿದೆ ಎಂದರು.

ಬಿಇಓ ರಾಜಶೇಖರ್ ಮಾತನಾಡಿ, ತಾಲೂಕಿನಲ್ಲಿ ಶಿಕ್ಷಕರ ಕೊರತೆ ಇದ್ದು, 743 ಹುದ್ದೆಗಳಿಗೆ ಕೇವಲ 445 ಶಿಕ್ಷಕರು ಇದ್ದಾರೆ. 19 ಶಾಲೆಗಳಿಗೆ ಶಿಕ್ಷಕರೇ ಇಲ್ಲವಾಗಿದ್ದು, 49 ಏಕಶಿಕ್ಷಕ ಶಾಲೆಗಳಾಗಿವೆ. ಇತ್ತೀಚಿನ ವರ್ಗಾವಣೆಯಲ್ಲಿ 120 ಶಿಕ್ಷಕರು ಬೇರೆಡೆ ವರ್ಗಾವಣೆಯಾಗಿದ್ದು ಕೇವಲ 5–6 ಶಿಕ್ಷಕರು ಇಲ್ಲಿಗೆ ಬಂದಿದ್ದಾರೆ. ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಕೊಠಡಿಗಳ ಕೊರತೆ ಇದ್ದು, ಹಲವಾರು ಕೊಠಡಿಗಳು ರಿಪೇರಿಯಲ್ಲಿವೆ. ಶಿಕ್ಷಕರ ಕೊರತೆಯಿಂದ 3 ಪ್ರಾಥಮಿಕ ಶಾಲೆಗಳನ್ನು ಮುಚ್ಚಿದ್ದು, ಬರಗಿ ಗ್ರಾಮದ ಶಾಲೆಯನ್ನು ಮಾತ್ರ ತೆರೆಯಲಾಗಿದೆ. ಮರಳಾಪುರ ಹಾಗೂ ಶ್ರೀಕಂಠಪುರ ಶಾಲೆಗಳನ್ನು ತೆರೆಯಲು ಗ್ರಾಮಸ್ಥರೊಂದಿಗೆ ಚರ್ಚಿಸಲಾಗಿದೆ. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಹೆಚ್ಚಿಸಲು "ಸ್ಫೂರ್ತಿ ಸಿಂಚನ" ಯೋಜನೆಯಡಿ ಮೊದಲ ಹಂತದಲ್ಲಿ 500 ವಿದ್ಯಾರ್ಥಿಗಳಿಗೆ ವಿಷಯವಾರು ತರಬೇತಿ ನೀಡಲಾಗುತ್ತಿದೆ ಎಂದರು.

ಈ ವೇಳೆ ತಹಸೀಲ್ದಾರ್ ರಮೇಶ್ ಬಾಬು, ತಾಪಂ ಇಓ ರಾಮಲಿಂಗಯ್ಯ, ಸೆಸ್ಕ್ ಎಇಇ ಕೆ.ಎಂ.ಸಿದ್ದಲಿಂಗಪ್ಪ ಲೋಕೋಪಯೋಗಿ ಇಲಾಖೆ ಎಇಇ ರವಿಕುಮಾರ್, ಆರ್‌ಎಫ್‌ಓಗಳಾದ ಎನ್.ಪಿ.ನವೀನ್ ಕುಮಾರ್, ಡಿ.ಶ್ರೀನಿವಾಸ ನಾಯ್ಕ, ಪುರಸಭೆ ಮುಖ್ಯಾಧಿಕಾರಿ ವಸಂತಕುಮಾರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

# ಸಿಟಿ ಸ್ಕ್ಯಾನ್‌ಗೆ ಶಾಸಕ ಪುಟ್ಟರಂಗಶೆಟ್ಟಿ ಚಾಲನೆ



ಚಾಮರಾಜನಗರ, ಸೆ.15– ಚಾಮರಾಜನಗರ ವೈದ್ಯಕೀಯ ಬೋಧನಾ ಆಸ್ಪತ್ರೆಯಲ್ಲಿ ನೂತನವಾಗಿ ಆರಂಭಿಸಿರುವ ಸಿಟಿ ಸ್ಕ್ಯಾನ್ ಸೇವೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಸಿಟಿ ಸ್ಕ್ಯಾನ್ ಕೊಠಡಿ, ಇತರೆ ವೈದ್ಯಕೀಯ ತಾಂತ್ರಿಕ ಉಪಕರಣಗಳನ್ನು ಒಳಗೊಂಡ ಕೊಠಡಿಗಳನ್ನು ಶಾಸಕರು ಉದ್ಘಾಟಿಸಿದರು.

ನಂತರ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಸಿಟಿ ಸ್ಕ್ಯಾನ್ ಜಿಲ್ಲೆಯ ಜನರಿಗೆ ಅಗತ್ಯವಾಗಿತ್ತು. ಇದಕ್ಕಾಗಿ ಸಾಕಷ್ಟು ಪ್ರಕ್ರಿಯೆ ನಡೆದು ಇಂದು ಚಾಲನೆ ದೊರೆತಿದೆ. ಎಂಆರ್‌ಐ ಸ್ಕ್ಯಾನ್ ಸೇವೆಯು ಜನರಿಗೆ ಜರೂರಾಗಿ ಅವಶ್ಯಕತೆ ಇದೆ. ಇದಕ್ಕೆ ಮಂಜೂರಾತಿ ದೊರೆತಿದ್ದು, ಇನ್ನು 3 ತಿಂಗಳೊಳಗೆ ಎಂಆರ್‌ಐ ಸ್ಕ್ಯಾನ್ ಸೇವೆ ಸಹ ಲಭಿಸಲಿದೆ ಎಂದರು.

ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಹೋಗುವುದು ತಪ್ಪಬೇಕು. ಇಲ್ಲಿಯೇ ಎಲ್ಲಾ ಸೌಲಭ್ಯಗಳು ಸಮರ್ಪಕವಾಗಿ ದೊರೆಯಬೇಕು. ಮೂತ್ರಪಿಂಡ ವೈಫಲ್ಯ ಚಿಕಿತ್ಸೆಗೆ ಹೆಚ್ಚು ಜನರು ಬರುತ್ತಿದ್ದಾರೆ. ಇವರಿಗೆ ಸರಿಯಾದ ಸಮಯಕ್ಕೆ ಅಗತ್ಯವಿರುವ ಚಿಕಿತ್ಸೆ ಸಿಗಬೇಕು. ವೈದ್ಯರ ಬಗ್ಗೆ ಜನರಿಗೆ ಹೆಚ್ಚಿನ ನಂಬಿಕೆ, ವಿಶ್ವಾಸ ಇದೆ. ನಿರೀಕ್ಷೆಗೆ ತಕ್ಕಂತೆ ವೈದ್ಯರು ಸೇವೆ ಸಲ್ಲಿಸುವ ಮೂಲಕ ಸ್ಪಂದಿಸಬೇಕು ಎಂದರು.

ಸೆ.27ರಂದು ಜಿಲ್ಲೆಗೆ ಮುಖ್ಯಮಂತ್ರಿಗಳು ಭೇಟಿ ನೀಡಿದ ಸಂದರ್ಭ ಆಸ್ಪತ್ರೆಗೆ ಬೇಕಿರುವ ಹೆಚ್ಚಿನ ಸೌಲಭ್ಯಗಳ ಬಗ್ಗೆ ಅವರ ಗಮನಕ್ಕೆ ತಂದು ಒದಗಿಸಲಾಗುವುದು ಎಂದರು.


ಈ ವೇಳೆ ನಗರಸಭಾ ಸದಸ್ಯ ರಾಜಪ್ಪ, ಚಾಮರಾಜನಗರ ವೈದ್ಯಕೀಯ ಕಾಲೇಜಿನ ಡೀನ್ ಡಾ.ಹೆಚ್.ಜಿ.ಮಂಜುನಾಥ್, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಕೃಷ್ಣಪ್ರಸಾದ್, ಸ್ಥಾನಿಕ ವೈದ್ಯಾಧಿಕಾರಿ ಡಾ.ಮಹೇಶ್, ಡಾ.ಮಾರುತಿ ಸೇರಿದಂತೆ ಇತರರಿದ್ದರು.

## ಸಹಾಯಧನ

ಚಾಮರಾಜನಗರ, ಸೆ.15– ತೋಟಗಾರಿಕೆ ಇಲಾಖೆಯು 2023–24ನೇ ಸಾಲಿನ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಪದ್ಧತಿ (ಡ್ರಿಪ್ ಇರಿಗೇಷನ್) ಅಳವಡಿಸಿದ ರೈತರಿಗೆ ಸಹಾಯಧನ ನೀಡಲಿದೆ.

ತೋಟಗಾರಿಕಾ ಬೆಳೆಗಳಿಗೆ ಹನಿ ನೀರಾವರಿ ಪದ್ಧತಿ ಅಳವಡಿಸುವ ಪರಿಶಿಷ್ಟ ಜಾತಿ ಮತ್ತು ಪಂಗಡ ರೈತರಿಗೆ ಶೇ.90ರಷ್ಟು ಸಹಾಯ ಧನ, ಇತರೆ ವರ್ಗದ ರೈತರಿಗೆ ಶೇ.75ರ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಆಸಕ್ತರು ಅಗತ್ಯ ದಾಖಲಾತಿಗಳೊಂದಿಗೆ ತಾಲೂಕಿನ ತೋಟಗಾರಿಕೆ ಇಲಾಖೆ ಫ್ರೂಟ್ಸ್ ತಂತ್ರಾಂಶದಲ್ಲಿ ಹೆಸರು ನೋಂದಾಯಿಸಿ ಯೋಜನೆ ಸದುಪಯೋಗಪಡಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

# ಇಂಜಿನಿಯರ್ ವೃತ್ತಿಗೆ ಗೌರವ ತಂದುಕೊಟ್ಟವರು ವಿಶ್ವೇಶ್ವರಯ್ಯ



ಚಾಮರಾಜನಗರ, ಸೆ.15– ವೃತ್ತಿಯಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆ ಮೆರೆಯುವ ಮೂಲಕ ಇಂಜಿನಿಯರ್ ವೃತ್ತಿಗೆ ಗೌರವ ತಂದುಕೊಟ್ಟವರು ಸರ್.ಎಂ. ವಿಶ್ವೇಶ್ವರಯ್ಯ ಎಂದು ಕಾರ್ಯಪಾಲಕ ಇಂಜಿನಿಯರ್ ಕಚೇರಿಯ ತಾಂತ್ರಿಕ ಸಹಾಯಕ ರಾಮಸ್ವಾಮಿ ತಿಳಿಸಿದರು.

ನಗರದ ಲೋಕೋಪಯೋಗಿ ಇಲಾಖೆ ಕಚೇರಿಯಲ್ಲಿ ಇಂಜಿನಿಯರ್ ದಿನಾಚರಣೆ ಅಂಗವಾಗಿ ಕಚೇರಿ ಆವರಣದಲ್ಲಿರುವ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯ ಅವರ ಭಾವಚಿತ್ರ, ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು ಕೆಆರ್‌ಎಸ್‌ನಂತಹ ಬೃಹತ್ ನೀರಾವರಿ ಕಾಮಗಾರಿಗಳು ಸರ್.ಎಂ. ವಿಶ್ವೇಶ್ವರಯ್ಯ ಅವರ ಪ್ರತಿಭೆಗೆ ನಿದರ್ಶನವಾಗಿವೆ. ಅವರ ತಾಂತ್ರಿಕತೆಯ ಕೌಶಲ್ಯವನ್ನು ಇಡೀ ವಿಶ್ವವೇ ತಿರುಗಿ ನೋಡುವಂತೆ ಮಾಡಿದೆ. ಅವರನ್ನು ಸ್ಮರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದರು.

ಸರ್.ಎಂ.ವಿಶ್ವೇರಯ್ಯನವರ ಗೌರವಾರ್ಥ ಅವರ ಜನ್ಮದಿನವಾದ ಸೆ.15 ರಂದು ದೇಶದಲ್ಲಿ ಪ್ರತಿವರ್ಷ ಇಂಜಿನಿಯರ್‌ಗಳ ದಿನಾಚರಣೆ ಆಚರಿಸಲಾಗುತ್ತದೆ. ವಿಶ್ವೇಶ್ವರಯ್ಯನವರು ದೇಶದ ಪ್ರಖ್ಯಾತ ಇಂಜಿನಿಯರ್ ಆಗಿ ಹೆಚ್ಚಿನ ಗೌರವ ಹೊಂದಿದ್ದರು ಎಂದರು. ಕಾರ್ಯಕ್ರಮದಲ್ಲಿ ಕಾರ್ಯಪಾಲಕ ಇಂಜಿನಿಯರ್ ಎಸ್.ಪಿ. ಮಹೇಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಮೇಶ್, ಸಿಬ್ಬಂದಿ ವರ್ಗ ಹಾಗೂ ಇತರರಿದ್ದರು.



ಚಾಮರಾಜನಗರ ತಾಲೂಕಿನ ಚಂದಕವಾಡಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 10 ವರ್ಷ ಸೇವೆ ಸಲ್ಲಿಸಿ ವರ್ಗಾವಣೆಗೊಂಡ ಇಂಗ್ಲಿಷ್ ಉಪನ್ಯಾಸಕ ಪ್ರಭುಸ್ವಾಮಿ ಹಾಗೂ ಉಪನ್ಯಾಸಕಿಯರಾದ ಲಕ್ಷ್ಮಿ, ಅನುದಿತ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಈ ವೇಳೆ ಕಾಲೇಜಿನ ಪ್ರಾಂಶುಪಾಲ ಹೆಚ್.ಎನ್.ಸ್ವಾಮಿ, ಉಪ ಪ್ರಾಂಶುಪಾಲ ಸುಬ್ರಹ್ಮಣ್ಯ, ಉಪನ್ಯಾಸಕ ಜಯಣ್ಣ, ಡಿ.ಲಕ್ಷ್ಮಣ್, ನಟರಾಜ್, ರಮೇಶ್, ಸುನೀಲ್ ಕುಮಾರ್, ಸಿದ್ದರಾಜು, ಬಿ.ವಿ.ಸುಧಾ, ಶಕುಂತಲ, ಶಾಜಿಯಾ ಹಸನ್, ಗಾಯಿತ್ರಿ, ತಿಮ್ಮರಾಜು, ಬಾಲು, ಮಹೇಂದರ್ ಇತರರಿದ್ದರು.

## ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

ಚಾಮರಾಜನಗರ, ಸೆ.15– ಶಾಲಾ ಶಿಕ್ಷಣ ಇಲಾಖೆ 01–01–2023ರಲ್ಲಿ ಇದ್ದಂತೆ ಮೈಸೂರು ವಿಭಾಗದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ ಶಿಕ್ಷಕರ ತಾತ್ಕಾಲಿಕ ಜೇಷ್ಠತಾ ಪಟ್ಟಿ ಕರಡನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಸೆ.11 ರಂದು ಪ್ರಕಟಿಸಿದ್ದು, ಈ ಸಂಬಂಧ ಆಕ್ಷೇಪಣೆ ಗಳಿದ್ದಲ್ಲಿ ಸಲ್ಲಿಸುವಂತೆ ತಿಳಿಸಿದೆ. ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಗಳು ಏನಾದರೂ ಇದ್ದಲ್ಲಿ ಸಂಬಂಧಿಸಿದ ಶಿಕ್ಷಕರು ಸಮರ್ಥನೀಯ ಪೂರಕ ದಾಖಲೆಗಳೊಂದಿಗೆ ಹಾಗೂ ಇಲಾಖಾ ವೆಬ್‌ಸೈಟ್ https://www.schooleducation.kar.nic.in ನಲ್ಲಿ ಪ್ರಕಟವಾಗಿರುವ ಪಟ್ಟಿಯಲ್ಲಿ ಹೆಸರು ಇರುವ ಪುಟದ ಮುದ್ರಿತ ಪ್ರತಿ ಯೊಂದಿಗೆ ಸೆ.20ರೊಳಗೆ ದ್ವಿಪ್ರತಿಯಲ್ಲಿ ನಿಗದಿತ ನಮೂನೆಯಲ್ಲಿ ಕಡ್ಡಾಯವಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ಸಲ್ಲಿಸಬಹುದು. ನಿಗದಿತ ಅವಧಿ ಮೀರಿ ವಿಳಂಬವಾಗಿ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

**ಮುಡಾ ಸೈಟುಗಳು ಮಾರಾಟಕ್ಕಿವೆ**
ಚಿತ್ರವನ ರೆಸಾರ್ಟ್ ಹಿಂಭಾಗ (ರಿಂಗ್ ರಸ್ತೆ ಸಮೀಪ)ದ ಕಳಲವಾಡಿ ಗ್ರಾಮದಲ್ಲಿ 30x40 ಹಾಗೂ 20x30 ಮುಡಾ ಸೈಟುಗಳು ಮಾರಾಟಕ್ಕಿದೆ.
9740976850


**NEW HOUSE FOR SALE**
40X60 East Facing 60ft Road, 4 Bed Room, (All Attached) At Ist Stage, Ist Main Vijayanagar, Mysore Price: 3.6 Cr Slightly Negotiable
9606160320

**ಸೈಟು ಬೇಕಾಗಿದೆ**
ಲಾಲ್ ಬಹದ್ದೂರ್ ಶಾಸ್ತ್ರಿನಗರ ಶಾಂತವೇರಿ ಗೋಪಾಲಗೌಡ ನಗರ ವಸಂತನಗರ, ಲಲಿತಾದ್ರಿನಗರ, ಸಪ್ತಮಾತೃಕ
9986420232
9945845302

**WANTED**
For MALE SALES EXECUTIVE (Vehicle Mandatory)
TELECALLING (Female)
Qualification: 10th & PUC
MAAN CERAMICS TILES SHOWROOM
Salary + Incentive 12 to 35k
Address: Vidhyaranyapuram, opp. SBI Bank, Mysore-570008. Contact:
91139-98991 / 96209-67801

**40x60 ಕಾರ್ನರ್ ಸೈಟ್**
ಯುನಿವರ್ಸಿಟಿ ಲೇಔಟ್‌ನಲ್ಲಿ ಮಾರಾಟಕ್ಕಿದೆ (80+ಅಡಿ ರಸ್ತೆ)
9945042875
ಮಾರುವವರು–ಕೊಳ್ಳುವವರು

**WANTED**
OFFICE BOY FOR MARKETING.
*Two wheeler is compulsory.*
Office in Anandanagar, New Kantharaj Urs Road, Mysuru.
Mob: 9620461052

**ಗೌರಿ ಗಣೇಶ ಹಬ್ಬದ ಶುಭಾಶಯಗಳು**

ಕೆ.ರವಿಕುಮಾರ್ ಬಿ.ಕಾಂ
ಗಾಯಕ ಹಾಗೂ ಆಕಾಶವಾಣಿ ದೂರದರ್ಶನ ತಬಲ ವಾದಕ
ಅರ್ಪಿಸುವ:
ಮೈಸೂರು ರವಿ ಮೆಲೋಡಿಸ್ ಆರ್ಕೆಸ್ಟ್ರಾ, ಸುಗಮ ಸಂಗೀತ, ಹಳೆಯ ಚಲನ ಚಿತ್ರಗೀತೆಗಳು ಹಾಗೂ ವಾದ್ಯ ಸಂಗೀತಕ್ಕೆ
7019423711, 9448475373

**ಸ್ವಯಂವರ ವಧುವರರ ವೇದಿಕೆ**
ಒಕ್ಕಲಿಗ ಗೌಡ, ನಾಯಕ, ಕುರುಬ, ಬಣಜಿಗ, ಲಿಂಗಾಯತ ವಧುವರರ ಮಾಹಿತಿಗಾಗಿ ಸಂಪರ್ಕಿಸಿ ವಿಧುರ–ವಿಧವೆಯರೂ ಸಂಪರ್ಕಿಸಬಹುದು. ಭೇಟಿ ಮಾಡುವ ಸ್ಥಳ: ಚಾಮುಂಡಿಬೆಟ್ಟ
8762123965

**ಸೇಲ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
ಪ್ರತಿಷ್ಠಿತ ಸ್ಟೀಲ್ ಮ್ಯಾನುಫ್ಯಾಕ್ಚರಿಂಗ್ ಕಂಪನಿಗೆ ಮೈಸೂರು ನಿವಾಸಿ ಪ್ರತಿನಿಧಿಯಾಗಿ ಬೇಕಾಗಿದ್ದಾರೆ.
ವಿದ್ಯಾರ್ಹತೆ: ಪಿಯುಸಿ/ಡಿಗ್ರಿ ಆಗಿರಬೇಕು
ಅನುಭವ: ಕಟ್ಟಡ ಸಾಮಾಗ್ರಿಗಳ ಮಾರಾಟದಲ್ಲಿ ಮಾರಾಟ ಕಾರ್ಯನಿರ್ವಾಹಕರಾಗಿ 2 ವರ್ಷಗಳು, 2 ವೀಲ್ಲರ್ ಡಿಎಲ್ ಕಡ್ಡಾಯವಾಗಿದೆ.
ಸಂಬಳ ಆಕರ್ಷಕ ಪ್ಯಾಕೇಜ್
ಶ್ರೀ ವಿವೇಕ್, 7899919575

**ಬೇಕಾಗಿದ್ದಾರೆ**
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ನೈಟ್ ಶಿಫ್ಟ್‌ಗೆ ಹುಡುಗರು/ಪುರುಷರು ಬೇಕಾಗಿದ್ದಾರೆ.
ಸಂಬಳ: 12000/–
8892258814

**LOOKING FOR PARTNERS / FOR SALE**
Looking for partners to run a gym business which is well established and located in Mysore with a good customer base and annual turn over. Also ready to sell full gym setup.
Call: 88843 20000

**ಫ್ರಿಡ್ಜ್, ವಾಷಿಂಗ್ ಮಷಿನ್, ಮೈಕ್ರೋ ಓವನ್,**
LCD, LED TVs
Doorstep Service
Mob: 9886226672

**Brahmins Layout "E" Block**
40x60 North Face Site @ Rs. 22 Lakhs.
DTCP Approved
H.D. Kote Road, Mysore.
Mob: 9537583377

**40x73 EAST FACE SITE @ Rs. 87 LAKHS**
MUDA Approved
Next to Vijayanagar 4th Stage and MS Ramaiah Layout.
Mob: 9538583377

**HOUSE FOR RENT**
3rd Cross, Navilu road
2BHK with Solar
North Face, Newly Constructed House
9886653351

**HOUSE FOR RENT**
2BHK Ground Floor, 20x35 with Solar
Gundurao Nagar
Ooty Road
(Near Ganapathi Ashram)
9483185518

**ಬಾಡಿಗೆಗಿದೆ**
ಮೈಸೂರು ನಗರದ ಚಾಮರಾಜ ಜೋಡಿ ರಸ್ತೆಯ ಸಹಕಾರ ಭವನದ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಕಟ್ಟಡದ ಸೆಲ್ಲಾರ್‌ನ 2020 ಚದರಡಿ ಜಾಗವನ್ನು ಬಾಡಿಗೆ ನೀಡಲಾಗುತ್ತಿದ್ದು, ಅಗತ್ಯ ಇರುವವರು ಸಂಪರ್ಕಿಸಬೇಕಾಗಿ ಕೋರಿದೆ.
9611944599, 0821-4245255

**SITE FOR SALE**
50X80, N/F, READY TO CONSTRUCT SITE
at Deepa Society Developed Layout
Kumarabeedu, Mysore.
Approved by DTCP
Price: 76 Lakhs (Nego.)
LEON PROPERTY CONSULTANCY
Call: 96062 94999

**ITIಗೆ ಪ್ರವೇಶಾವಕಾಶ**
2023–24 ನೇ ಸಾಲಿಗೆ ಎರಡು ವರ್ಷದ ITI ತರಬೇತಿಗೆ SSLC/PUC/Pass/Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
ಬೆನಕ ಐ.ಟಿ.ಐ. ಕಾಲೇಜು
ಡಾ|| ರಾಜ್‌ಕುಮಾರ್ ರಸ್ತೆ ಹತ್ತಿರ, ಕಾವೇರಿ ವೃತ್ತದ 4ನೇ ಕ್ರಾಸ್, ರಾಘವೇಂದ್ರ ನಗರ, ಮೈಸೂರು–29
9342123467
9141756695

**DTCP SITES FOR SALE**
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194, 9606783264

**Sudarshan Saur SOLAR WATER HEATER**


SUNZONE SOLAR SYSTEM
Vishwamanava Double Road, Kuvempunagar, Mysuru
9845175443

**ಮನೆ ಭೋಗ್ಯಕ್ಕೆ ಇದೆ**
ಕುವೆಂಪುನಗರ ನಿಮಿಷಾಂಬ ಬಡಾವಣೆ ಮೈಸೂರು 1ನೇ ಹಂತಸ್ತಿನಲ್ಲಿ ಮನೆ ಭೋಗ್ಯಕ್ಕೆ ಇದೆ
9448092818

**ಬಾಡಿಗೆಗೆ**
ಮೈಸೂರು ಸಿಟಿ ವಿದ್ಯಾರಣ್ಯಪುರಂ 4ನೇ ಮುಖ್ಯ ರಸ್ತೆಯ 27ನೇ ಕ್ರಾಸಿನ ಕಾರ್ನರ್‌ನಲ್ಲಿ 2 ಅಂಗಡಿಗಳು (10x10ಅಡಿ) ಪಶ್ಚಿಮ ದಿಕ್ಕಿನಲ್ಲಿ ಲಭ್ಯವಿದೆ.
(Near Sterling Theatre)
9448872684
9900079871

**40×60 SITE FOR SALE**
MUDA APPROVED
East facing
Rajeev Nagar 2nd Stage
Near Gupta Store, MYSORE
Rs. 1 Crore
Call: 9845286583

**Remote Controlled ROLLING SHUTTERS**
APPLICATION FOR
• INDUSTRY
• COMMERCIAL
• DOMESTIC
Contact: Gowrishankar. C.
Mob: 98456-01431 / 90369 03202
DIAMOND ROLLING SHUTTERS
Industrial Suburb, Vishweshwara Nagar, Mysore

**ಬೋಳು ತಲೆಯ ಸಮಸ್ಯೆಯೇ?**

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
# 574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

**ತಕ್ಷಣ ಬೇಕಾಗಿದ್ದಾರೆ**
ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ವಯೋಮಿತಿ: 18 ರಿಂದ 35 ರ ಒಳಗೆ
ವಿದ್ಯಾರ್ಹತೆ: SSLC ಮೇಲ್ಪಟ್ಟು
ಉಚಿತ: ತಿಂಡಿ, ಊಟ ವೇತನ: 16000 (ESI+PF) & Bonus
ಸ್ಥಳ: ಆಲನಹಳ್ಳಿ Bus Stop Mysore.
Ph: 9686120629, 9845131848
9538886304, 9035269781

**RBI**
ಟೇಬಲ್ ಮೌಲ್ಡ್ ಇಟ್ಟಿಗೆಗಳು
ದೀರ್ಘಕಾಲ ಬಾಳಿಕೆಯುವ ಇಟ್ಟಿಗೆಗಳು
• ಪರಿಶೀಲಿಸಿದ ಗುಣಮಟ್ಟ • ಸುಲಭ ಡೆಲಿವರಿ
• ಅತ್ಯುತ್ತಮ ಧೃಡತೆ • ಕಡಿಮೆ ಬೆಲೆಯಲ್ಲಿ
ಮುಂದಿನ ಪೀಳಿಗೆಗೆ ಸದೃಢವಾದ ಉಡುಗೊರೆ...
82178 93849
98442 24480

**ನಿವೇಶನ ಮಾರಾಟಕ್ಕಿದೆ**
EWS. 390, ಬನ್ನಿಮಂಟಪ 3ನೇ ಹಂತ, ಭುವನೇಶ್ವರಿ ಚೌಲ್ಟ್ರಿ ಮುಂಭಾಗ
8618144835

**ಸೈಟು ಮಾರಾಟಕ್ಕಿದೆ**
20x30 ಅಳತೆಯುಳ್ಳ ಪೂರ್ವ ದಿಕ್ಕಿನ ಸೈಟು ಮಾರಾಟಕ್ಕಿದೆ ಮುಡಾ ಖಾತೆ ಇದೆ 3ನೇ ಹಂತ ದಟ್ಟಗಳ್ಳಿ, ಕನಕದಾಸ ನಗರ, ಮೈಸೂರು
9019476173

**ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್**
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

**ನಿರ್ಮಲ ಸರ್ವೀಸ್**
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

**WANTED**
1) Accountant : (M&F)
* Experience - 1 to 2 years
* Skills - Tally ERP - 9, GST, M.S. Office
2) Marketing Executives : (M)
* Experience - 1 to 2 years
* Education - Any Degree
* Good Salary + TA, DA & Incentives
Sri Sairam Furnitures Distributor
Vijayanagar 2nd Stage, Mysore
8217411158

**WANTED**
Computer, English and Maths teaching staff for reputed institution
Send your resume through WhatsApp/Message
8971577685
9980631121

**ಕೆಲಸಕ್ಕೆ ಹುಡುಗರು ತಕ್ಷಣ ಬೇಕಾಗಿದ್ದಾರೆ**
1) ಫ್ರಂಟ್ ಆಫೀಸ್, ಕಂಪ್ಯೂಟರ್ ಚೆನ್ನಾಗಿ ಬರಬೇಕು.
2) ಐಟಿಐ ವಿದ್ಯಾರ್ಥಿಗಳು ಕೆಲಸಕ್ಕೆ ಬೇಕಾಗಿದ್ದಾರೆ.
3) ಅಕೌಂಟೆಂಟ್ ಕಂಪ್ಯೂಟರ್ ಹಾಗೂ ಟ್ಯಾಲಿ ಪ್ರೈಮ್ ಅನುಭವವುಳ್ಳವರು ಬೇಕಾಗಿದ್ದಾರೆ. 3 ರಿಂದ 4 ವರ್ಷ. ಪುರುಷ ಅಭ್ಯರ್ಥಿಗಳು ಮಾತ್ರ.
Mob: 98801 51303

**WANTED**
Technicians for Home applianecs Service SSLC/PUC/ITI/ (Pass/Fail)
Experience Not Required
(Prionity for Freshers)
7975368452
Age : Below 25Y (Male Only)

**FOR SALE**
Site No.554
Vijayanagar 4th Stage, 3rd Phase, Mysore
South Face 30x40
Direct Owner
Rs.77 Lakhs
9900717058

**ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್**
25–10–23: ಗುಜರಾತ್, ಎಂ.ಪಿ 4 ಜ್ಯೋತಿರ್ಲಿಂಗ, ಸೋಮನಾಥ್, ನಾಗನಾಥ್, ಉಜ್ಜಯಿನಿ ಮಹಾ ಕಾಳೇಶ್ವರ್, ಓಂಕಾರೇಶ್ವರ.
30–9–2023: ಶಿರಡಿ, ಪಂಡರಾಪುರ ಪ್ಯಾಕೇಜ್
5–10–2023: ರಾಮೇಶ್ವರ, ಕನ್ಯಾಕುಮಾರಿ, ಮಧುರೈ.
9–10–2023: ಪುರಿ ಜಗನ್ನಾಥ, ಭುವನೇಶ್ವರ್, ಕೋಣಾರ್ಕ್, ಚಂದ್ರಭಾಗ ಬೀಚ್.
9591017782, 9964527782

**ವಧು–ವರರ ಮಾಹಿತಿ ಕೇಂದ್ರ**
ಒಕ್ಕಲಿಗ/ಲಿಂಗಾಯತ/ಕುರುಬ/ನಾಯಕ/SC & ಎಲ್ಲಾ ಜಾತಿಯ ವಧು–ವರರಿಗಾಗಿ ಸಂಪರ್ಕಿಸಿ:
(Second Marriage Also)
Mob: 93431-75000

**ತಕ್ಷಣ ಬೇಕಾಗಿದ್ದಾರೆ**
1) ಸೆಕ್ಯೂರಿಟಿ ಗಾರ್ಡ್ಸ್ – 10th/PUC (30 yrs to 50 yrs)
(ಸಿದ್ದಾರ್ಥನಗರ, ನಂಜನಗೂಡು)
(ESI, PF ಮತ್ತು ಊಟದ ವ್ಯವಸ್ಥೆ ಇರುತ್ತದೆ). ಸಂಪರ್ಕಿಸಿ:
9739166772, 9880419847

**SUMP & TANK CLEANING**
Mob: 8431541613

**ಮನೆ ಮಾರಾಟಕ್ಕಿದೆ & ಮನೆ ಬಾಡಿಗೆಗಿದೆ**
ರಾಮಕೃಷ್ಣನಗರ ಕನಕ ಟ್ರಾವೆಲ್ಸ್ ಹತ್ತಿರ 20x30, 2 ಅಂತಸ್ತಿನ ಮನೆ ಸೇಲ್‌ಗಿದೆ. 62 ಲಕ್ಷ, ನೆಗೋಷಿಯಬಲ್.
ಸರಸ್ವತಿಪುರಂ ಕೆಳಗಡೆ ಮನೆ 3 ಬೆಡ್‌ರೂಮಿನ ಮನೆ ಬಾಡಿಗೆಗಿದೆ NF. ಸಂಪರ್ಕಿಸಿ:
ಸ್ವಾಮಿ – 9845570573
ಸತೀಶ್ – 9113612442

**HOUSE FOR SALE**
20x30 Size N/F Ground Floor, 2BHK Fist Floor, 2BHK Dattagalli 3rd Stage, Near Mahamane Circle, Mysore
9945428296

**HOUSE, SITE, SALE**
25X40 & 40X60 G&F House Sale at Ramakrishnanagar 30x40 & 30x50, 20x30 Site Sale at Bogadi-Gaddige Road,
9663136318

**ಸಂಪು ಕ್ಲೀನಿಂಗ್‌ಗಾಗಿ**
ಸಂಪರ್ಕಿಸಿ:
8861612486

**ಅಂಜನ ಶಾಸ್ತ್ರದ ಮೂಲಕ ಪರಿಹಾರ**
ಶ್ರೀ ಅಂಜನ ದೇವಿ ಆರಾಧಕರು ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಐದು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶ ಪಾರಂಪರ್ಯ ಜ್ಯೋತಿಷ್ಯರು ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೇ ಇಲ್ಲ. ಫೋನಿನ ಮೂಲಕ ಪರಿಹಾರ.
9663466548

**ನೇಮಕಾತಿ**
ಖಾಲಿ ಹುದ್ದೆಗಳು
ಡಾಟಾ ಎಂಟ್ರಿ ಆಪರೇಟರ್ಸ್
ಸಂದರ್ಶನ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 3.00 ಹುದ್ದೆ–100
ವಿಠಲ್ ರೆಕಾರ್ಡ್ಸ್ ಪ್ರೈ.ಲಿ.
#42, ಜೆಸಿಕೆ ಇಂಡಸ್ಟ್ರಿಯಲ್ ಪಾರ್ಕ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ, ಮೈಸೂರು
hr@centuryvitalrecords.com
0821-2332005, 8867064586

**ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು**
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

**ಕೊಳ್ಳೇಗಾಲದ ಜ್ಯೋತಿಷ್ಯರು**
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

**SITES FOR SALE**
Near MIT College
Instalment Facility Available
Good Location
9483358399

**WANTED**
Electrical Supervisor
Diploma /BE
3 YearS Experience at Mysuru Airport
9902006716
9841140090

**Commercial building for sale**
1st, 2nd, 3rd, 4th house, 1200 sq. Ring Road, Anandanagar.
9844713445, 9066637156

**SITE FOR SALE**
Gayathripuram 1st Stage 2nd Phase, 40x72, East Facing 40 Feet Road,
9741604998

**WANTED URGENT**
Experienced Sales Executives
Female Accountant
Monarch Distributor
# 44/C, Industrial Sub-Urb 2nd Phase, Visveshwaranagar, Near Sterling Theatre, Mysore-570008
0821-3503668
9482210793, 8971953235

**ಕೆಲಸಕ್ಕೆ ಯುವಕ, ಯುವತಿಯರು ಬೇಕಾಗಿದ್ದಾರೆ.**
ಕಿಚನ್ ಅಸಿಸ್ಟೆಂಟ್, ಸಪ್ಲೈಯರ್, ಕ್ಲೀನಿಂಗ್, ವಾಷಿಂಗ್ ಉತ್ತಮ ಸಂಬಳ ವಸತಿ ದೊರೆಯುತ್ತದೆ ಸ್ಥಳ: ದೇವೇಗೌಡ ಸರ್ಕಲ್ ರಿಂಗ್ ಬನ್ನೂರು ರಸ್ತೆ,
6361527123

**ಕೆಲಸಕ್ಕೆ ಬೇಕಾಗಿದ್ದಾರೆ**
ಉನ್ನತ ಕಂಪನಿ, ಹಾಗೂ ಕಾರ್ಖಾನೆಗಳಲ್ಲಿ (ಕೂರ್ಗಳ್ಳಿ, ಹೆಬ್ಬಾಳ್, ಮೇಟಗಳ್ಳಿ, ಬನ್ನಿಮಂಟಪ) Helper, Electrical Work, Mechine Operatore, ಸೆಕ್ಯೂರಿಟಿಗಳು ಹಾಗೂ Big Basket Delivery Boy's (ಹೂಟಗಳ್ಳಿ ಜೆ.ಪಿನಗರ) ಇಲ್ಲಿ ಕೆಲಸ ಮಾಡಲು ವಿದ್ಯಾಭ್ಯಾಸ 7th, 10th, PUC, Any Degree, ITI, Deploma ಮಹಿಳೆಯರು ಹಾಗೂ ಪುರುಷರು ಬೇಕಾಗಿದ್ದಾರೆ. ಹಾಗೂ ವಿದ್ಯಾಭ್ಯಾಸ ಇಲ್ಲದೆ ಇರುವವರು ಸಹ ಬೇಕಾಗಿದ್ದಾರೆ. ವೇತನ: 12000 ರಿಂದ 15000 ವರೆಗೆ ESI & PF ಸೌಲಭ್ಯ ಇದೆ.
9036461347
9611208553, 9108180329

**HOUSE FOR SALE**
30X40 West Face Site, North Face Door Newly Constructed G+2, Dattagalli, Somanathanagar, Mysore
9900251194

**ಬಾಡಿಗೆಗೆ ದೊರೆಯುತ್ತದೆ**
ಜೆ.ಪಿ.ನಗರದಲ್ಲಿ ಒಂದೇ ಕಟ್ಟಡದಲ್ಲಿ (ಬಿಲ್ಡಿಂಗ್) ಅಟ್ಯಾಚ್ ಬಾತ್ರೂಮ್ ಹೊಂದಿರುವ 8 ರೂಂಗಳು ಬಾಡಿಗೆಗೆ ಅಥವಾ P.G ನಡೆಸಲು ಬಾಡಿಗೆಗೆ ದೊರೆಯುತ್ತದೆ ಮತ್ತು 2BHK ಮನೆ ಬಾಡಿಗೆಗೆ ದೊರೆಯುತ್ತದೆ.
ಸ್ಥಳ: ಜೆ.ಪಿನಗರ, ಮೈಸೂರು
8296695765
7348843351

**30x40 ಸೈಟುಗಳು ಮಾರಾಟಕ್ಕಿವೆ**
ಗುರೂರು ಬಸ್ ನಿಲ್ದಾಣ ಹತ್ತಿರ ರಮಾಬಾಯಿನಗರ, ಮೈಸೂರು
DTCP ಅನುಮೋದಿತ (ಕಾರ್ಪೋರೇಷನ್ ಮಿತಿ)
1.5 KMS from JP Nagar Ring Road
8660105902

**ತಕ್ಷಣ ಬೇಕಾಗಿದ್ದಾರೆ**
ಬ್ಯಾತಹಳ್ಳಿ, ಕಡಕೊಳ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಹೌಸ್ ಕೀಪಿಂಗ್ ಬಾಯ್ – ಸಂಬಳ: 12450 (ಶಿಫ್ಟ್) ಗಾರ್ಡನರ್ – ಸಂಬಳ: 12179(ಜನರಲ್), ಸ್ವೀಪರ್– ಸಂಬಳ: 15872 (ಶಿಫ್ಟ್), ಹೌಸ್ ಕೀಪಿಂಗ್ ಸೂಪರ್‌ವೈಸರ್ – ಸಂಬಳ: 15906 (ಶಿಫ್ಟ್), ಗಾರ್ಡನ್ ಸೂಪರ್ ವೈಸರ್–ಸಂಬಳ: 18475 ಸೌಲಭ್ಯಗಳು ಇಎಸ್ಐ, ಪಿಎಫ್, ಬೋನಸ್, ವರ್ಷಕ್ಕೊಮ್ಮೆ ಸಂಬಳ ಹೆಚ್ಚಳ, ಯೂನಿಫಾರಂ, ವಯಸ್ಸು: 19–40 ವರ್ಷ, ಅರ್ಹತೆ: ಹೊಸಬರು ಹಾಗೂ ಅನುಭವ ಇರುವವರು ನಿಕ್ಸಾಡ್ ಇಂಡಿಯಾ ಬಿಜಿನೆಸ್ ಸಲ್ಯೂಷನ್ಸ್ ಪ್ರೈ.ಲಿ.
9916985299, 8748822922

**ಬೇಕಾಗಿದ್ದಾರೆ**
ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಶೇಖರ್: 9945911118
ಅನಿಲ್: 7026996123
ARTHOR SERVICES PVT.LTD
NO. L-89, 2nd Floor, M Block, Opp. Karuna Hospital, Kuvempunagar, Mysore-570023

**VEHICLE FOR SALE**
PRODUCT : VOLVO EXCAVATOR EC 140, MODEL 2017, VEHICLE SERIAL NO. 2GS0079
INDUSIND BANK LTD, MYSORE
7259030901

**VINAYAKA VENTURES**
Commercial Property For Sale @ V.V. Mohalla
8660352905
7975246389

**For Sale**
1) 30@40 SITE 16 LAKHS INCLUDING REGISTRATION NEAR NEW RT NAGAR 2)30@40 E PREETHI LAYOUT SRIRAMPURA
2) 30@40 S/W SKY TOP LAYOUT YELIWALA
3)20@30 G+2 HOUSE R K NAGAR AND DATTAGALLI
4) 14/100 W/E 2 SIDE ROAD NEAR RAMAVILAS ROAD
PRAKRUTHI PROPERTIES
9538690359, 9035990359

**CHANGE OF NAME**
This is to declare that I, N.Lakshmidevi, W/o Gopalkrishna Shetty, aged about 73 years, residing at D.No.9, HUDCO, MIG, 3rd Stage, Bannimantap, Mysuru-570015, have changed my name to Lakshmidevi vide Affidavit sworn to before Notary Sri. Mallikarjuna Swamy, on 17-08-2023 Herefterwards I wish to be called and known for all acts, deeds and things as Lakshmidevi.G. Only
Sd/- Lakshmidevi

**ಜಮೀನು ಮಾರಾಟಕ್ಕೆ**
36 ಗುಂಟೆಯ ಜಮೀನು ಜೆ.ಪಿ.ನಗರ, ಗುರೂರು ಮೈಸೂರು
ಆಸಕ್ತರು ಸಂಪರ್ಕಿಸಿ:
7975957605

**REQUIRED CANDIDATES ON FULL TIME FOR AN STARTUP AD AGENCY**
Graphic Designers - 3Yrs Exp
Company Secretary (Female) 3Yrs Exp
Social Media Executives-2Yrs Exp
Accountant (Tally) - 5 Yrs Exp
ADMIN/ASST Manager-3yrs Exp
Call/Whatsapp:
+919845475329
wowsomestudios@gmail.com

**3 ಬೆಡ್ ರೂಂ ಹೊಸ ಮನೆ ಮಾರಾಟಕ್ಕಿದೆ**
20x30 ದಟ್ಟಗಳ್ಳಿ, ಮೈಸೂರು ತ್ರಿವೇಣಿ ಸೂಪರ್ ಮಾರ್ಕೆಟ್ ಹತ್ತಿರ, Price: 79 Lakhs
ಮಾಲೀಕರು ಸಂಪರ್ಕಿಸಿ:
6361295132

**ಸೈಟುಗಳನ್ನು ಕೊಳ್ಳಲು/ಮಾರಲು**
MUDA / MUDA APPROVED
9538412881

**ಬೇಕಾಗಿದ್ದಾರೆ**
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ.
ವಸತಿಯೂಟದೊಂದಿಗೆ
Salary+OT : 18800/- 78000/-
9964435077
9964435081

**ಬೇಕಾಗಿದ್ದಾರೆ**
ಮೈಸೂರು & ಪಾಂಡವಪುರದಲ್ಲಿ ಮಾರ್ಕೆಟಿಂಗ್ ಕೆಲಸಕ್ಕೆ ಅನುಭವ ಇರುವ ಹುಡುಗರು (3 ಜನ ದ್ವಿಚಕ್ರ ವಾಹನ ಕಡ್ಡಾಯವಾಗಿ ಇರಬೇಕು) ಬೇಕಾಗಿದ್ದಾರೆ. ವೇತನ: 15000/– ಕಾವೇರಿ ಆಗ್ರೋ, ವ್ಯವಸಾಯ ಸಂಬಂಧ ಉತ್ಪನ್ನಗಳ ಕಂಪನಿ
8618819433
8792815818

**WANTED**
ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ.
9845028614

**ಸೈಟ್ ಮಾರಾಟಕ್ಕಿದೆ**
JSS 1ನೇ ಹಂತ, 40x60 ಪೂರ್ವದಿಕ್ಕು, JSS 2ನೇ ಹಂತ, 30x50 ಕಾರ್ನರ್ ಶಕ್ತಿನಗರ 30x40 ದಕ್ಷಿಣ ದಿಕ್ಕು ರೆಡ್ಡಿ ಲೇಔಟ್ 40x45
9901772178
ಸಿ.ಮಹೇಶ್‌ಪ್ರಸಾದ್

**REQUIRED**
OT Scrub Nurse Needed
Minimum 2 Years Experience Contact
9343055819

**ಮನೆಯಿಂದಲೇ ಕೆಲಸ**
ನಿಮ್ಮ ಬಿಡುವಿನ ವೇಳೆಯಲ್ಲಿ ಕಥಾ ಪುಸ್ತಕ ಬರವಣಿಗೆ ಫಾರಂ ಫಿಲ್ಲಿಂಗ್ ಡಾಟಾ ಎಂಟ್ರಿ ಮೊಬೈಲ್ ವಾಟ್ಸಾಪ್ ಟೈಪಿಂಗ್ ಕೆಲಸ ಮಾಡಿ ಗಳಿಸಿ ವಾರಕ್ಕೆ 10000 ದಿಂದ 20000 ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ
7624843504

**ಮೈಸೂರು ಮಿತ್ರ ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ




ಮೈಸೂರಿನ ಓವಲ್ ಮೈದಾನದಲ್ಲಿ ಏರ್ಪಡಿಸಿದ್ದ ಭಾರತದ ಸಂವಿಧಾನ ಪೀಠಿಕೆ ಪಠನ ಕಾರ್ಯಕ್ರಮದ ವೈಮಾನಿಕ ದೃಶ್ಯ ಡ್ರೋನ್ ಮೂಲಕ ಈ ವಿಹಂಗಮ ದೃಶ್ಯ ಸೆರೆಹಿಡಿಯಲಾಗಿತ್ತು.

# ಲಂಚಕ್ಕೆ ಮಾಸ್ಟರ್ ಪ್ಲಾನ್ ಮಾಡಿಯೂ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದ ಆಹಾರ ಇಲಾಖೆ ಅಧಿಕಾರಿ!

- ದಿನಸಿ ಅಂಗಡಿ ಮಾಲೀಕನಿಂದ ಸಹೋದ್ಯೋಗಿಯ ಫೋನ್ ನಂಬರ್‌ಗೆ ಫೋನ್ ಪೇ ಮಾಡಿಸಿಕೊಂಡು ಪಾರಾಗುವ ಪ್ಲಾನ್!
- ಲೈಸೆನ್ಸ್ ನವೀಕರಣಕ್ಕೆ 15 ಸಾವಿರ ಲಂಚಕ್ಕೆ ಬೇಡಿಕೆ
- ಕೊನೆಗೆ 7 ಸಾವಿರಕ್ಕೆ ಚೌಕಾಸಿ; ಫೋನ್ ಸಂಭಾಷಣೆ ಸಾಕ್ಷ್ಯಾಧಾರ ಆಧರಿಸಿ ಆರೋಪಿ ವಶಕ್ಕೆ



ಮೈಸೂರು, ಸೆ.15(ಆರ್‌ಕೆ, ಎಸ್‌ಬಿಡಿ)– ಲಂಚದ ಹಣವನ್ನು ಸಹೋದ್ಯೋಗಿ ಖಾತೆಗೆ ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿದ್ದ ಆಹಾರ ಮತ್ತು ಸುರಕ್ಷತಾ ಇಲಾಖೆ ಅಧಿಕಾರಿಯನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ದಿನಸಿ ಅಂಗಡಿ ಲೈಸೆನ್ಸ್ ನವೀ ಕರಣಕ್ಕೆ 7 ಸಾವಿರ ರೂ. ಲಂಚ ಪಡೆದ ಆರೋಪದಡಿ ಆಹಾರ ಮತ್ತು ಸುರಕ್ಷತೆ ಇಲಾಖೆ ಮೈಸೂರು ಗ್ರಾಮಾಂತರ ವಿಭಾಗದ ಅಧಿಕಾರಿ ಲೋಕೇಶ್‌ನನ್ನು ಮೈಸೂರಿನ ತಿಲಕ್‌ನಗರದಲ್ಲಿರುವ ಕಚೇರಿಯಲ್ಲಿ ಶುಕ್ರವಾರ ವಶಕ್ಕೆ ಪಡೆದು, ವಿಚಾರಣೆ ನಡೆಸಲಾಗುತ್ತಿದೆ.

ನಂಜನಗೂಡಿನ ಗುಂಡ್ಲುಪೇಟೆ ರಸ್ತೆಯಲ್ಲಿ ರಘು ಎಂಬುವವರು ಹೋಲ್‌ಸೇಲ್ ದಿನಸಿ ಅಂಗಡಿ ನಡೆಸುತ್ತಿದ್ದಾರೆ. ಇದಕ್ಕೆ ಆಹಾರ ಮತ್ತು ಸುರಕ್ಷತಾ ಇಲಾಖೆಯಿಂದ ಪಡೆದಿರುವ ಲೈಸೆನ್ಸ್ ನವೆಂಬರ್‌ಗೆ ಮುಕ್ತಾಯವಾಗಲಿದೆ. ಆದರೆ ಇಲಾಖೆ ಅಧಿಕಾರಿ ಲೋಕೇಶ್, ಲೈಸೆನ್ಸ್ ಅವಧಿ ಮುಗಿದ ನಂತರ ನವೀಕರಣ ಮಾಡಿಸುವುದು ಕಷ್ಟ, ನನಗೆ 15 ಸಾವಿರ ನೀಡಿದರೆ ಮುಂಚಿತವಾಗಿಯೇ ಲೈಸೆನ್ಸ್ ನವೀಕರಣ ಮಾಡಿಸಿಕೊಡುತ್ತೇನೆ ಎಂದು ರಘು ಅವರಿಗೆ ತಿಳಿಸಿದ್ದ. ಕೊನೆಗೆ 7 ಸಾವಿರ ಕೊಡುವಂತೆ ಪದೇ ಪದೆ ಕರೆ ಮಾಡಿ, ಒತ್ತಾಯಿಸುತ್ತಿದ್ದ.

ಲೈಸೆನ್ಸ್ ನವೀಕರಣ ಮಾಡಿಸಲು ರಘು ಒಪ್ಪಿದಾಗ ಲೋಕೇಶ್ ಲಂಚ ಪಡೆಯಲು ಬೇರೊಂದು ಪ್ಲಾನ್ ಮಾಡಿದ್ದ. ತನ್ನ ಕಚೇರಿ ಮಹಿಳಾ ಸಿಬ್ಬಂದಿಗೆ ನನ್ನ ಫೋನ್‌ಪೇ ಆಪ್‌ನಲ್ಲಿ ತೊಂದರೆ ಇದೆ, ಹಾಗಾಗಿ ನಮ್ಮ ಪರಿಚಿತರೊಬ್ಬರು ನಿಮ್ಮ ನಂಬರ್‌ಗೆ 7 ಸಾವಿರ ರೂ. ಹಣ ಹಾಕುತ್ತಾರೆ. ನಂತರ ತನಗೆ ಕೊಡುವಂತೆ ಹೇಳಿ ಕೊಂಡಿದ್ದ. ಇತ್ತ ಆ ಸಿಬ್ಬಂದಿಯ ಮೊಬೈಲ್ ಸಂಖ್ಯೆಯನ್ನು ರಘುಗೆ ನೀಡಿದ್ದ. ಈ ಬಗ್ಗೆ ರಘು, ಲೋಕಾಯುಕ್ತ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಶುಕ್ರವಾರ ಮಧ್ಯಾಹ್ನ ರಘು, ತಿಲಕ್‌ನಗರದ ಕಚೇರಿ ಬಳಿ ಬಂದು ಲೋಕೇಶ್ ನೀಡಿದ್ದ ಮೊಬೈಲ್ ಸಂಖ್ಯೆಗೆ 7 ಸಾವಿರ ರೂ. ಫೋನ್‌ಪೇ ಮಾಡುತ್ತಿದ್ದಂತೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ಲೋಕೇಶ್‌ನನ್ನು ವಶಕ್ಕೆ ಪಡೆದಿದ್ದಾರೆ. ಲೋಕೇಶ್ ಲಂಚದ ವಿಚಾರವಾಗಿ ರಘು ಅವರೊಂದಿಗೆ ನಡೆಸಿರುವ ಸಂಭಾಷಣೆ ಸಾಕ್ಷ್ಯಾಧಾರದೊಂದಿಗೆ ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ಮುಂದುವರೆಸಿದ್ದಾರೆ. ಆದರೆ ಆ ಮಹಿಳಾ ಸಿಬ್ಬಂದಿಗೆ ಲೋಕೇಶ್ ಪ್ಲಾನ್ ತಿಳಿದಿರಲಿಲ್ಲ ಎನ್ನಲಾಗಿದೆ. 2015ರಲ್ಲೂ ಲೋಕೇಶ್ ಲಂಚ ಪಡೆದು ಸಿಕ್ಕಿಬಿದ್ದಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ಮಾರ್ಗದರ್ಶನದಲ್ಲಿ ಡಿವೈಎಸ್ಪಿ ವಿ.ಕೃಷ್ಣಯ್ಯ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್‌ಗಳಾದ ಎ.ರವಿಕುಮಾರ್, ಎಂ.ಜಯರತ್ನ, ಬಿ.ವಿ.ರೂಪಶ್ರೀ, ಲೋಕೇಶ್ ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ.

# ಪಕ್ಷ ಸಂಘಟನೆಗಾಗಿ ಸೆ. 26ರಿಂದ ಗುಲ್ಬರ್ಗಾದಿಂದ ಪ್ರವಾಸ

- ರೈತರ ಆತ್ಮಹತ್ಯೆ ಕಾಂಗ್ರೆಸ್ ಸರ್ಕಾರದ 6ನೇ ಗ್ಯಾರಂಟಿ: ಜಿಟಿಡಿ
- ಬಿಜೆಪಿ–ಜೆಡಿಎಸ್ ಮೈತ್ರಿ ಖಚಿತ; ಮತ್ತೆ ನರೇಂದ್ರ ಮೋದಿ ಪ್ರಧಾನಿ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ

ಬೆಂಗಳೂರು, ಸೆ. 15– ಪಕ್ಷ ಸಂಘಟನೆ ದೃಷ್ಟಿಯಿಂದ ಕೋರ್ ಕಮಿಟಿ ಸದಸ್ಯರು ಸೆಪ್ಟೆಂಬರ್ 26ರಿಂದ ಗುಲ್ಬರ್ಗಾದಿಂದ ಪ್ರವಾಸ ಮಾಡಲಿದ್ದಾರೆ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ. ದೇವೇಗೌಡ ತಿಳಿಸಿದರು.

ಬೆಂಗಳೂರಿನ ಜೆಡಿಎಸ್ ಕಚೇರಿ ಜೆಪಿ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಮುಂಗಾರು ಕೈಕೊಟ್ಟಿದ್ದು, ಬಿತ್ತನೆ ಮಾಡಿದ ಬೆಳೆ ಕೈಗೆ ಬಾರದೇ ಕಂಗಾಲಾಗಿರುವ ರೈತರು ಸರ್ಕಾರದ ನೆರವು ಸಿಗದೇ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ರೈತರ ಆತ್ಮಹತ್ಯೆ ಈ ಸರ್ಕಾರದ 6ನೇ ಗ್ಯಾರಂಟಿಯಾಗಿದೆ ಎಂದು ಕುಹಕವಾಡಿದರು.

ಮಳೆ ಬರುತ್ತದೆ ಎಂಬ ವಿಶ್ವಾಸದಿಂದ ಉತ್ತರ ಕರ್ನಾಟಕ ಭಾಗದಲ್ಲಿ ರೈತರು ಸಾಲ–ಸೋಲ ಮಾಡಿ ಉದ್ದು, ತೊಗರಿ, ಹೆಸರು, ಹತ್ತಿ, ಸೋಯಾ ಬೀನ್ಸ್ ಮುಂತಾದ ಬೆಳೆಗಳನ್ನು ಬಿತ್ತನೆ ಮಾಡಿದ್ದರು. ಮಳೆ ಬಾರದ ಕಾರಣ ಬೆಳೆ ಕೈಕೊಟ್ಟಿದ್ದು, ಸರ್ಕಾರವು ಕೂಡ ಅವರ ನೆರವಿಗೆ ಬರುತ್ತಿಲ್ಲ. ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಪಿಎಂ ಕಿಸಾನ್ ಯೋಜನೆಯಡಿ ಕೇಂದ್ರ ಸರ್ಕಾರದಿಂದ ನೀಡುತ್ತಿದ್ದ 6 ಸಾವಿರದ ಜೊತೆಗೆ ರಾಜ್ಯ ಸರ್ಕಾರ 4 ಸಾವಿರ ಸೇರಿಸಿ ಒಟ್ಟು ವಾರ್ಷಿಕ 10 ಸಾವಿರ ರೂ.ಗಳನ್ನು ರಾಜ್ಯದ 45 ಲಕ್ಷಕ್ಕೂ ಹೆಚ್ಚು ರೈತರಿಗೆ ನೀಡಲಾಗುತ್ತಿತ್ತು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ನಂತರ 4 ಸಾವಿರ ರೂ. ಕೊಡುವುದನ್ನು ನಿಲ್ಲಿಸಿದ್ದಾರೆ. ಈ ಸರ್ಕಾರ ರೈತರ ಆತ್ಮಹತ್ಯೆ ತಡೆಯುವಲ್ಲಿ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ಟ್ರಿಬ್ಯೂನಲ್ ಪ್ರತಿದಿನ 5 ಕ್ಯೂಸೆಕ್‌ನಂತೆ 15 ದಿನ ತಮಿಳುನಾಡಿಗೆ ನೀರು ಬಿಡಬೇಕೆಂದು ನೀಡಿರುವ ಆದೇಶದಂತೆ ರಾಜ್ಯ ಸರ್ಕಾರ ನೀರು ಬಿಡುತ್ತಿದೆ. ಹಾಲಿ ಕಾವೇರಿ ಜಲಾನಯನ ಪ್ರದೇಶದ ಅಣೆಕಟ್ಟೆಗಳಲ್ಲಿ 16.5 ಟಿಎಂಸಿ ನೀರು ಮಾತ್ರ ಇದ್ದು, 15 ದಿನ ತಮಿಳುನಾಡಿಗೆ ನೀರು ಹರಿಸಿದರೆ 7 ಟಿಎಂಸಿ ಖಾಲಿಯಾಗಿ ಕೇವಲ 9 ಟಿಎಂಸಿ ನೀರು



ಮಾತ್ರ ಉಳಿಯುತ್ತದೆ. ರೈತರ ಬೆಳೆಗಳಿಗೆ, ಬೆಂಗಳೂರು, ಮೈಸೂರು ಮುಂತಾದ ನಗರಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸಾಧ್ಯವಾಗುವುದಿಲ್ಲ. ಹೀಗಾಗಿ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡಬಾರದು ಎಂದು ಒತ್ತಾಯಿಸಿದ ಅವರು, ತುಂಗಭದ್ರ ಟ್ರಿಬ್ಯೂನಲ್‌ನಲ್ಲಿ ತೆಲಂಗಾಣ, ಆಂಧ್ರಪ್ರದೇಶ ಸದಸ್ಯರನ್ನೊಳಗೊಂಡ ಸಂಕಷ್ಟ ಸೂತ್ರ ಸಮಿತಿಯನ್ನು ರಚಿಸಿರುವುದರಿಂದ ಅಲ್ಲಿ ಮಳೆ ಬಾರದಿದ್ದರೂ ಯಾವುದೇ ರೀತಿಯ ಜಗಳಗಳಾಗುವುದಿಲ್ಲ. ಅದರಂತೆ ಕಾವೇರಿ ನೀರಿಗೆ ಸಂಬಂಧಪಟ್ಟಂತೆಯೂ ಸಂಕಷ್ಟ ಸೂತ್ರ ರಚಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

**ಬಿಜೆಪಿ–ಜೆಡಿಎಸ್ ಮೈತ್ರಿ:** ಜೆಡಿಎಸ್–ಬಿಜೆಪಿ ಮೈತ್ರಿ ನೂರಕ್ಕೆ ನೂರು ಖಚಿತ ಎಂದ ಅವರು, ಪ್ರಧಾನಿ ಮೋದಿ, ಅಮಿತ್ ಶಾ, ಜೆ.ಪಿ. ನಡ್ಡಾ ಅವರನ್ನು ಭೇಟಿ ಮಾಡಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಮಾತನಾಡಿದ್ದಾರೆ. ಮೈತ್ರಿ ಖಚಿತವಾಗಿದ್ದು, ಸೀಟು ಹಂಚಿಕೆ ಬಗ್ಗೆ ಚರ್ಚೆ ಆಗಿಲ್ಲ ಅಷ್ಟೇ ಎಂದ ಅವರು, ಕಾಂಗ್ರೆಸ್ ಅನ್ನು ದೂರವಿಡುವುದೇ ನಮ್ಮ ಗುರಿಯಾಗಿದ್ದು, ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಹೆಚ್ಚು ಸ್ಥಾನಗಳನ್ನು ಗಳಿಸಲಿದೆ. ಮುಂದಿನ ಚುನಾವಣೆಯಲ್ಲೂ ನರೇಂದ್ರ ಮೋದಿಯವರು ಪ್ರಧಾನಿಯಾಗುವುದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ. ದೇವೇಗೌಡರೇ ಅವರಿಗೆ ಬೆಂಬಲ ಸೂಚಿಸಿದ್ದಾರೆ ಎಂದರು. ಬಿಜೆಪಿಯನ್ನು ಕೋಮುವಾದಿ ಪಕ್ಷ ಎಂದು ಹೇಳುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದ ಜಿ.ಟಿ. ದೇವೇಗೌಡರು, 1983ರಲ್ಲಿ ಬಿಜೆಪಿ ಬೆಂಬಲದೊಂದಿಗೆ ರಾಮಕೃಷ್ಣ ಹೆಗಡೆಯವರ ನೇತೃತ್ವದ ಸರ್ಕಾರ ರಚನೆಯಾಗಿತ್ತು. ಆಗ ಬಿಜೆಪಿಯೊಂದಿಗೆ ಅಧಿಕಾರ ಹಂಚಿಕೊಂಡು ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿ ಅಧಿಕಾರ ಅನುಭವಿಸಿದಿರಲ್ಲ ಆಗ ನಿಮಗೆ (ಸಿದ್ದರಾಮಯ್ಯ) ಬಿಜೆಪಿ ಕೋಮುವಾದಿಯಾಗಿರಲಿಲ್ಲವೇ? ಎಂದು ಪ್ರಶ್ನಿಸಿದರು.

ಮಾತೆತ್ತಿದರೆ ದೇವರಾಜ ಅರಸು ಅವರ ಹೆಸರನ್ನು ಹೇಳುತ್ತೀರಿ. ಅರಸು ಕುಟುಂಬದವರಿಗೆ ಏನಾದರೂ ಸಹಾಯ ಮಾಡಿದ್ದೀರಾ? ಅವರ ಕುಟುಂಬದ ಯಾರನ್ನಾದರೂ ಎಂಎಲ್‌ಸಿ ಮಾಡಿದ್ದೀರಾ? ಕೊನೆಗಾಲದಲ್ಲಿ ಅರಸು ಅವರಿಗೆ ಏನಾಯಿತು ಎಂಬುದು ನಿಮಗೆ ಗೊತ್ತಿಲ್ಲವೇ ಎಂದು ಪ್ರಶ್ನಿಸಿದರಲ್ಲದೇ, ನಿಮಗೆ ಆ ರೀತಿ ಆಗುವುದು ಬೇಡ. ದೇವರು ನಿಮ್ಮನ್ನು ಚೆನ್ನಾಗಿ ಇಟ್ಟಿರಲಿ ಎಂದು ಹಾರೈಸಿದರು.

ಈ ಸರ್ಕಾರದಲ್ಲಿ ವರ್ಗಾವಣೆ ದಂಧೆ ಹೆಚ್ಚಾಗಿದೆ ಎಂದು ಆರೋಪಿಸಿದ ಜಿಟಿಡಿ, ಕಾಂಗ್ರೆಸ್‌ನಿಂದ ಹುಟ್ಟಿರುವ ಅಧಿಕಾರಿ ಯಾರೂ ಇರುವುದಿಲ್ಲ. ಯಾವ ಸರ್ಕಾರ ಬಂದರೂ ಅದೇ ಅಧಿಕಾರಿಗಳು ಇರುತ್ತಾರೆ. ಅದಕ್ಕೆ ಯಾಕೆ ವರ್ಗಾವಣೆ ಮಾಡುತ್ತಿದ್ದೀರಿ? ಈ ವರ್ಗಾವಣೆ ನಿಲ್ಲಿಸಿ ಎಂದರು. ಕಾವೇರಿ ವಿಚಾರವಾಗಿ ಪ್ರಧಾನಿ ಬಳಿಗೆ ನಿಯೋಗ ಕರೆದುಕೊಂಡು ಹೋಗಿ ಬರದ ಬಗ್ಗೆ ಮನವರಿಕೆ ಮಾಡಬೇಕಾಗಿತ್ತು. ಆದರೆ ನಿಯೋಗ ಕರೆದೊಯ್ಯದೇ ಕೇವಲ ಪತ್ರ ಬರೆಯುತ್ತಿದ್ದೀರಿ ಎಂದು ಹರಿಹಾಯ್ದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯಸಭಾ ಮಾಜಿ ಸದಸ್ಯ ಕುಪೇಂದ್ರ ರೆಡ್ಡಿ, ವಿಧಾನಪರಿಷತ್ ಸದಸ್ಯ ಬಿ.ಎಂ. ಫಾರೂಖ್, ವಿಧಾನಪರಿಷತ್ ಮಾಜಿ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡ, ರಮೇಶ್‌ಗೌಡ ಉಪಸ್ಥಿತರಿದ್ದರು.

# ಗೊರವನಹಳ್ಳಿ ದೇವಿ ದರ್ಶನಕ್ಕೆ ಹೊರಟು ಮಸಣ ಸೇರಿದ ಶ್ರೀರಂಗಪಟ್ಟಣದ ಇಬ್ಬರು ಮಹಿಳೆಯರು

## ತುಮಕೂರು ಬಸ್ ನಿಲ್ದಾಣದಲ್ಲಿ ದುರ್ಘಟನೆ

ಬೆಂಗಳೂರು: ರಾಜ್ಯ ಸರ್ಕಾರ ಶಕ್ತಿ ಯೋಜನೆ ಜಾರಿಗೆ ತಂದಲ್ಲಿಂದ ಮಹಿಳೆಯರು ಪುಣ್ಯ ಕ್ಷೇತ್ರಗಳಿಗೆ ಭೇಟಿ ನೀಡುವ ಸಂಖ್ಯೆ ಹೆಚ್ಚಾಗಿದೆ ಎಂಬ ಸುದ್ದಿಯ ನಡುವೆ ದೇವಸ್ಥಾನಕ್ಕೆಂದು ಹೊರಟಿದ್ದ ಇಬ್ಬರು ಮಹಿಳೆಯರು ತುಮಕೂರು ಕೆಎಸ್ ಆರ್ ಟಿಸಿ ಬಸ್ಸು ನಿಲ್ದಾಣದಲ್ಲಿ ದಾರುಣ ಅಂತ್ಯ ಕಂಡ ಘಟನೆ ನಡೆದಿದೆ.

ಶ್ರೀರಂಗಪಟ್ಟಣದಿಂದ ಹೊರಟಿದ್ದ ಇಬ್ಬರು ಮಹಿಳೆಯರು ತುಮಕೂರಿಗೆ ಬಸ್ ಹತ್ತುವ ವೇಳೆ ಬಸ್ ಚಾಲಕನ ನಿರ್ಲಕ್ಷ್ಯ ಮತ್ತು ಅಜಾಗರೂಕತೆಗೆ ಚಕ್ರದಡಿಗೆ ಸಿಲುಕಿ ಪ್ರಾಣ ಕಳೆದುಕೊಂಡಿದ್ದಾರೆ. ಮಹಿಳೆಯರು ಶ್ರೀರಂಗಪಟ್ಟಣದಿಂದ ಗೊರವನಹಳ್ಳಿ ದೇವಸ್ಥಾನಕ್ಕೆ ಹೊರಟಿದ್ದರು.

ಎರಡು ಬಸ್‌ಗಳ ನಡುವೆ ಸಿಲುಕಿ ಈ ಇಬ್ಬರು ಮಹಿಳೆಯರು ಮೃತಪಟ್ಟಿದ್ದು, ಬಸ್ ನಿಲ್ದಾಣದಲ್ಲಿ ಬಸ್‌ನ್ನು ರಿವರ್ಸ್ ತೆಗೆಯುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದ್ದು, ಚಾಲಕನ ನಿರ್ಲಕ್ಷ್ಯದಿಂದ ಈ ಘಟನೆ ಸಂಭವಿಸಿದೆ ಎಂದು ಹೇಳಲಾಗುತ್ತಿದೆ.

ಶ್ರೀರಂಗಪಟ್ಟಣದ ಕೆ.ಶೆಟ್ಟಿಹಳ್ಳಿ ಗ್ರಾಮದ ಪುಟ್ಟತಾಯಮ್ಮ (60) ಮತ್ತು ಪಂಕಜ (50) ಮೃತ ದುರ್ದೈವಿಗಳು. ಉಚಿತ ಬಸ್ ಪ್ರಯಾಣ ಹಿನ್ನೆಲೆ ಕೆಎಸ್‌ಆರ್‌ಟಿಸಿ ಬಸ್ ಮೂಲಕ ಗೊರವನಹಳ್ಳಿ ದೇವಸ್ಥಾನಕ್ಕೆ ಹೋಗಲು ಏಳು ಮಹಿಳೆಯರ ತಂಡ ಬಸ್ ನಿಲ್ದಾಣಕ್ಕೆ ಆಗಮಿಸಿತ್ತು ಈ ವೇಳೆ ದುರ್ಘಟನೆ ನಡೆದಿದೆ. ಸದ್ಯ, ಮೃತದೇಹಗಳನ್ನು ತುಮಕೂರು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ರವಾನೆ ಮಾಡಲಾಗಿದ್ದು, ತುಮಕೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ತಿರುಪತಿಗೆ ತೆರಳುತ್ತಿದ್ದ ಕ್ರೂಸರ್ ಲಾರಿಗೆ ಡಿಕ್ಕಿ: ಐವರು ಸಾವು, 11 ಮಂದಿಗೆ ಗಾಯ

**ಅನ್ನಮಯ:** ಆಂಧ್ರಪ್ರದೇಶದ ಅನ್ನಮಯ ಜಿಲ್ಲೆಯಲ್ಲಿ ತಿರುಪತಿಗೆ ತೆರಳುತ್ತಿದ್ದ ಯಾತ್ರಾರ್ಥಿಗಳಿದ್ದ ಕ್ರೂಸರ್ ಶುಕ್ರವಾರ ಬೆಳಗ್ಗೆ ಲಾರಿಗೆ ಡಿಕ್ಕಿ ಹೊಡೆದಿದ್ದು, ಭೀಕರ ಅಪಘಾತದಲ್ಲಿ ಐವರು ಸಾವನ್ನಪ್ಪಿದ್ದಾರೆ ಮತ್ತು ಹನ್ನೊಂದು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಗಾಯಗೊಂಡವರಲ್ಲಿ ಏಳು ಮಂದಿಯ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದು, ಮೃತರಲ್ಲಿ ಇಬ್ಬರು ಪುರುಷರು ಮತ್ತು ಮೂವರು ಮಹಿಳೆಯರಿದ್ದಾರೆ ಎಂದು ಹೇಳಿದ್ದಾರೆ. ಅಪಘಾತದಲ್ಲಿ ಒಟ್ಟು ಐದು ಜನರು ಸಾವನ್ನಪ್ಪಿದ್ದಾರೆ. ಗಾಯಾಳುಗಳ ಪೈಕಿ ಏಳು ಮಂದಿಯ ಸ್ಥಿತಿ ಗಂಭೀರವಾಗಿದೆ. ಅವರನ್ನು ತಿರುಪತಿ ರುವಾ



ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೆಥಂಪಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ನಾಗಬಾಬು ಎಎನ್‌ಐಗೆ ತಿಳಿಸಿದ್ದಾರೆ. ಗಾಯಗೊಂಡವರಲ್ಲಿ ಏಳು ಮಂದಿಯ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಅವರು ಹೇಳಿದ್ದಾರೆ. ಅಪಘಾತಕ್ಕೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

# ವಿದ್ವಾಂಸರ ಮಾತಿಗೆ ಕಿವಿಗೊಡದೆ ಧಾರಾವಾಹಿಗಳ ವಿಮರ್ಶೆಗೆ ಕಿವಿಗೊಡುತ್ತಿರುವುದು ಒಳ್ಳೆಯದಲ್ಲ!

ಮೈಸೂರು, ಸೆ.15(ಎಸ್‌ಪಿಎನ್)– ಇತ್ತೀಚಿನ ದಿನಗಳಲ್ಲಿ ವಿದ್ವಾಂಸರು ಹೇಳುವ ಜೀವನಮೌಲ್ಯದ ಮಾತುಗಳನ್ನು ಇಂದಿನ ಯುವ ಪೀಳಿಗೆ ಹೆಚ್ಚು ಆಲಿಸುವ ಮನಸ್ಸು ಮಾಡುತ್ತಿಲ್ಲ ಎಂದು ನಗರ ಸಾರ್ವಜನಿಕ ಗ್ರಂಥಾಲಯದ ಉಪ ನಿರ್ದೇಶಕ ಬಿ.ಮಂಜುನಾಥ್ ಹಾಸ್ಯಧಾಟಿಯಲ್ಲಿ ತಿಳಿಸಿದರು.

ಮೈಸೂರು ನ್ಯೂ ಕಾಂತರಾಜೇ ಅರಸು ರಸ್ತೆಯಲ್ಲಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕದ ವತಿಯಿಂದ ನಡೆದ ಮನೆಮನೆಗೆ ಶ್ರಾವಣ ಮಾಸದ ಶರಣ ಸಂದೇಶ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಆದರೆ, ಸಮೂಹದಲ್ಲಿ ಹೆಂಗಸರು ಅಥವಾ ಯುವತಿಯರು ಧಾರಾವಾಹಿಗಳ ವಿಮರ್ಶೆ ಮಾಡಿದರೆ ಕೇಳುವ ಪ್ರವೃತ್ತಿ ಪುರುಷರಲ್ಲಿ ಹೆಚ್ಚಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ ಎಂದರು.

ಇಂದಿನ ವಿದ್ಯಾರ್ಥಿಗಳು, ಗೃಹಿಣಿಯರು




ತಮ್ಮತಮ್ಮ ಬಡಾವಣೆಯ ಗ್ರಂಥಾಲಯಗಳಿಗೆ ಭೇಟಿ ನೀಡುವುದು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ. ಹಾಗೊಂದು ವೇಳೆ ಭೇಟಿ ನೀಡಿದರೂ ವಿವಿಧ ಲೇಖಕರ ಕಥೆ ಪುಸ್ತಕಗಳು, ವಿವಿಧ ಲೇಖಕರ ಕಾದಂಬರಿಗಳನ್ನು ಓದುವ ಹವ್ಯಾಸಗಳು ಕಡಿಮೆಯಾಗುತ್ತಿದೆ. ಆದರೆ, ಇತ್ತೀಚಿನ ಗೃಹಿಣಿಯರು–ಯುವತಿಯರು ಹೋದಲ್ಲಿ –ಬಂದಲ್ಲಿ ನಿತ್ಯ ಟಿವಿಗಳಲ್ಲಿ ಪ್ರಸಾರವಾಗುವ ಧಾರಾವಾಹಿಗಳ ವಿಮರ್ಶೆ ಮಾಡುತ್ತಾರೆ. ಇಂತಹ ವಿಮರ್ಶಾ ಗುಂಪುಗಳಿಗೆ ಪುರುಷರೂ ಆಕರ್ಷಣೆಗೊಳ್ಳುತ್ತಿರುವುದು ಬೇಸರದ ಸಂಗತಿ ಎಂದರು.

ಈ ಕಾರಣವೂ ಸೇರಿದಂತೆ ಬೇರೆ ಬೇರೆ ಕಾರಣಗಳಿಗೆ ಯುವ ಪೀಳಿಗೆ ಗ್ರಂಥಾಲಯಗಳಿಗೆ ಭೇಟಿ ನೀಡಿ, ಪುಸ್ತಕ ಓದುವ ಹವ್ಯಾಸದಿಂದ ದೂರು ಉಳಿಯುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದ ಅವರು, ಮೈಸೂರು ನಗರದ ಎಲ್ಲಾ ವಾರ್ಡ್‌ಗಳಲ್ಲೂ ಗ್ರಂಥಾಲಯಗಳನ್ನು ಸ್ಥಾಪಿಸುವ ಉದ್ದೇಶವಿದೆ. ಆದರೆ, ತಾಂತ್ರಿಕ ಕಾರಣಗಳಿಂದ ಅದು ಸಾಧ್ಯವಾಗುತ್ತಿಲ್ಲ. ಈಗಿರುವ ಗ್ರಂಥಾಲಯಗಳಿಗೆ ಭೇಟಿ ನೀಡಿ, ಉತ್ತಮ ಪುಸ್ತಕಗಳನ್ನು ಆಯ್ಕೆಮಾಡಿಕೊಂಡು ಓದುವ ಹವ್ಯಾಸವನ್ನು ಪ್ರತಿಯೊಬ್ಬರು ಬೆಳಸಿಕೊಳ್ಳುವಂತೆ ಮನವಿ ಮಾಡಿದರು.

ಅಲ್ಲದೆ, ಮೈಸೂರು ನಗರದ ವಿವಿಧ ಬಡಾವಣೆಗಳಲ್ಲಿ ವಾಸಿಸುತ್ತಿರುವ ಯುವ ಬರಹಗಾರರನ್ನು ಪ್ರೋತ್ಸಾಹಿಸಲು ಸರ್ಕಾರದ ವತಿಯಿಂದ ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಇದರ ಸದುಪಯೋಗ ಪಡೆದುಕೊಳ್ಳುವಂತೆ ಬರಹಗಾರರಿಗೆ ಮನವಿ ಮಾಡಿದ ಅವರು, ಸ್ನಾತಕೋತ್ತರ ಪದವಿ ಮುಗಿಸಿರುವ ಯುವಕ–ಯುವತಿಯರು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಗ್ರಂಥಾಲಯದ ವತಿಯಿಂದ ಬೇಕಾಗುವ ಪುಸ್ತಕ, ತರಬೇತಿಗಳನ್ನು ಒದಗಿಸಲಾಗುವುದು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕಿವಿ ಮಾತು ಹೇಳಿದರು.

ಶರಣ ಚಿಂತಕ ಡಾ.ಡಿ.ಎಸ್.ಗುರು ಅವರು 'ಏನ ಬಂದಿರಿ ಹದುಳವಿದ್ದಿರಿ ಎಂದರೆ ವಿಷಯ ಕುರಿತು ಮಾತನಾಡಿ, ಶರಣರ ವಚನಗಳನ್ನು ಅಧ್ಯಯನ ಮಾಡಿದರೆ ಅಥವಾ ಕೇಳಿದರೆ ಅಂತಹ ವ್ಯಕ್ತಿ ಮನಸ್ಸು ಪರಿವರ್ತನೆ ಆಗುವುದು ಖಂಡಿತ. ಒಂದೇ ವೇಳೆ ರಾಜಕಾರಣಿಗಳಿಗೆ ಬಸವಣ್ಣನ ವಚನದ ಸಾಲು 'ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ' ಸಾಲಿನ ಬಗ್ಗೆ ಮಾತನಾಡಲು ಹೇಳಿದರೆ, ಆ ವಿಷಯದ ಬಗ್ಗೆ ಮಾತನಾಡಿದ ಮೇಲಾದರೂ ಆ ರಾಜಕಾರಣಿಯ ಮನಸ್ಸು ಪರಿವರ್ತನೆಯಾಗಬಹುದು. ವಚನಗಳಿಗೆ ಅಂತಹ ಶಕ್ತಿ ಇದೆ ಎಂದು ಪ್ರತಿಪಾದಿಸಿದರು.

ಈ ವೇಳೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಟಿ.ಎಸ್. ಕುಮಾರಸ್ವಾಮಿ, ಜಯಗೌಡ ಸೇರಿದಂತೆ ಇತರರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

# ಸರಗೂರು ಬಳಿ ಕಾಡಾನೆ ದಾಳಿಯಿಂದ ರೈತ ಸಾವು

## ಹತ್ತಿ ಬಿಡಿಸಲು ಹೋದಾಗ ದುರಂತ, ಸಹೋದರ ಅಪಾಯದಿಂದ ಪಾರು

### ಅರಣ್ಯ ಇಲಾಖೆ ವಿರುದ್ಧ ಗ್ರಾಮಸ್ಥರು, ಕುಟುಂಬಸ್ಥರು ಪ್ರತಿಭಟನೆ





ಸರಗೂರು, ಸೆ.15– ಕಾಡಾನೆಯೊಂದು ದಾಳಿ ನಡೆಸಿದ ಪರಿಣಾಮ ಹತ್ತಿ ಬಿಡಿಸಲು ಹೋಗಿದ್ದ ರೈತರೊಬ್ಬರು ಸಾವನ್ನಪ್ಪಿ, ಮತ್ತೊಬ್ಬರು ಪಾರಾಗಿದ್ದು, ಇದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಮತ್ತು ಕುಟುಂಬಸ್ಥರು ಪ್ರತಿಭಟನೆ ನಡೆಸಿದ ಘಟನೆ ತಾಲೂಕಿನ ಚನ್ನಗುಂಡಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ವಾಸಿ ಮಹೇಂದ್ರ(38) ಎಂಬುವರೇ ಆನೆ ದಾಳಿಗೆ ಬಲಿಯಾದ ರೈತ. ಇವರ ಸಹೋದರ ಶಂಕರ್ ಆನೆ ದಾಳಿಯಿಂದ ಪಾರಾಗಿದ್ದಾರೆ. ಶುಕ್ರವಾರ ಮುಂಜಾನೆ 6 ಗಂಟೆ ಸಮಯದಲ್ಲಿ ಮಹೇಂದ್ರ ತಮ್ಮ ಸಹೋದರ ಶಂಕರ್ ಜೊತೆ ಊರಿನ ಹೊರ ಭಾಗದಲ್ಲಿರುವ ತಮ್ಮ ಜಮೀನಿನಲ್ಲಿ ಹತ್ತಿ ಬಿಡಿಸುತ್ತಿದ್ದಾಗ ಏಕಾಏಕಿ ಕಾಡಾನೆ ದಾಳಿ ಮಾಡಿದೆ. ಇದರಿಂದ ಮಹೇಂದ್ರ ಸ್ಥಳದಲ್ಲೇ ಸಾವನ್ನಪ್ಪಿದರೆ, ಸಹೋದರ ಶಂಕರ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾಡಾನೆ ದಾಳಿಯ ವಿಷಯ ತಿಳಿದ ಕೂಡಲೇ ಮನೆಯವರು ಹಾಗೂ ಗ್ರಾಮಸ್ಥರು ಸ್ಥಳಕ್ಕೆ ಆಗಮಿಸಿದರು. ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಗ್ರಾಮಸ್ಥರು ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಶಾಸಕ ಅನಿಲ್ ಚಿಕ್ಕಮಾದು ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿ ವೈಯಕ್ತಿಕವಾಗಿ ಸಹಾಯ ಮಾಡಿದರು. ಸ್ಥಳದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಕರೆ ಮಾಡಿ ಘಟನೆ ಬಗ್ಗೆ ತಿಳಿಸಿದರು. ರೈಲ್ವೆ ಬ್ಯಾರಿಕೆಡ್ 53 ಕಿ.ಮೀ ಬಾಕಿ ಇದೆ. ಅದನ್ನು ಪೂರ್ಣಗೊಳಿಸುವಂತೆ ಮನವಿ ಮಾಡಿದರು. ಸಿಸಿಎಫ್ ರಮೇಶ್ ಕುಮಾರ್ ಅರಣ್ಯ ಇಲಾಖೆಯಿಂದ 15 ಲಕ್ಷ ರೂ.ಗಳ ಚೆಕ್ ಅನ್ನು ಸ್ಥಳದಲ್ಲಿ ನೀಡಿದರು. ಅರಣ್ಯ ಇಲಾಖೆಯ ಕಚೇರಿಯಲ್ಲಿ ಅವರ ಕುಟುಂಬದವರಿಗೆ ಉದ್ಯೋಗ ನೀಡಲಾಗುತ್ತದೆ. ಪ್ರತಿ ತಿಂಗಳು 4 ಸಾವಿರ ರೂ. ಮಾಸಾಸನ ನೀಡಲಾಗುತ್ತದೆ ಎಂದು ತಿಳಿಸಿದರು.

**ಪ್ರತಿಭಟನೆ:** ಸರಗೂರು ತಾಲೂಕಿನಲ್ಲಿ ಸೆ.3ರಂದು ಸಿದ್ದರಾಜನಾಯಕ, ಇಂದು ಮಹೇಂದ್ರ ಕಾಡು ಪ್ರಾಣಿಗಳ ದಾಳಿಯಿಂದ ಮೃತಪಟ್ಟಿದ್ದಾರೆ. ಕಳೆದ ವಾರ ಎಚ್.ಡಿ. ಕೋಟೆ ತಾಲೂಕಿನ ಮೇಟಿಕುಪ್ಪೆ ಗ್ರಾಮದಲ್ಲಿ 8 ವರ್ಷದ ಯುವಕ ಹುಲಿ ದಾಳಿಗೆ ಮೃತಪಟ್ಟಿರುವ ಘಟನೆ ನಡೆದಿದೆ. ಆದರೂ ಅರಣ್ಯ ಇಲಾಖೆ ಇತ್ತ ಗಮನ ಕೊಡುತ್ತಿಲ್ಲ ಎಂದು ಆರೋಪಿಸಿದರಲ್ಲದೆ, ಅರಣ್ಯ ಇಲಾಖೆಯವರು ಸ್ಥಳಕ್ಕೆ ತಡವಾಗಿ ಆಗಮಿಸಿದರು ಎಂದು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಕಾಡು ಪ್ರಾಣಿಗಳಿಂದ ರೈತರು ಸಾಯುತ್ತಿದ್ದಾರೆ. ಬೆಳೆದ ಬೆಳೆ ಕಾಡು ಪ್ರಾಣಿಗಳಿಗೆ ಆಹಾರವಾಗುತ್ತಿದೆ. ರೈತರಿಗೆ ರಕ್ಷಣೆಯೆ ಇಲ್ಲವಾಗಿದೆ ಎಂದು ರೈತರು ಮತ್ತು ಗ್ರಾಮಸ್ಥರು ಅರಣ್ಯ ಇಲಾಖೆಯವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ದಡದಹಳ್ಳಿ ಮಠದ ಷಡಕ್ಷರ ಸ್ವಾಮಿಜಿ ಮಾತನಾಡಿ ಕಾಡಂಚಿನ ಗ್ರಾಮದಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದೆ, ಈ ಪ್ರದೇಶದಲ್ಲಿ ರೈತರು ಬೆಳೆದ ಬೆಳೆ ಕೈ ಸೇರುವುದು ಕಷ್ಟ ಆಗಿದೆ. ಬ್ಯಾಂಕಿನಲ್ಲಿ ಹಾಗೂ ಕೈ ಸಾಲ ಮಾಡಿ ಬೆಳೆ ಬೆಳೆಯುತ್ತಿದ್ದು, ಅದು ಕಾಡು ಪ್ರಾಣಿಗಳ ಪಾಲಾಗುತ್ತಿರುವುದರಿಂದ ರೈತರು ಸಾಲ ತೀರಿಸಲು ಸಾಧ್ಯವಾಗುತ್ತಿಲ್ಲ, ರೈತರಿಗೆ ಸರ್ಕಾರ ನೆರವಾಗಬೇಕು ಎಂದರು.

ತಾಲೂಕು ವೀರಶೈವ ಸಮಾಜದ ಅಧ್ಯಕ್ಷ ದಡದಹಳ್ಳಿ ಶಿವರಾಜು, ಗಣಪತಿ, ಗುರುಸ್ವಾಮಿ, ಎಚ್.ಸಿ.ನರಸಿಂಹಮೂರ್ತಿ, ಶಂಬುಲಿಂಗನಾಯಕ, ಎಂ.ಎನ್. ಅಣ್ಣಯ್ಯಸ್ವಾಮಿ, ಎಂ.ಬಿ.ಆನಂದ್, ಮಾದಪ್ಪ, ತಹಶೀಲ್ದಾರ್, ಪರಶಿವ ಮೂರ್ತಿ, ಎಸಿಎಫ್ ಕೆ.ಪರಮೇಶ್, ಸಿಪಿಐ ಲಕ್ಷ್ಮೀಕಾಂತ, ಪಿಎಸ್ಐ ನಂದೀಶ್ ಕುಮಾರ್, ವಲಯ ಅರಣ್ಯಾಧಿಕಾರಿ ನಾರಾಯಣ್, ಹನುಮಂತರಾಜು, ನಿವೇದಿತಾ, ಪ್ರಕಾಶ್ ಚಂದ್ರ, ಬಸವಣ್ಣ, ರಮೇಶ್, ವೆಂಕಟರಾಮ್, ಬೆಟ್ಟಸ್ವಾಮಿ, ನಿಜಪ್ಪ, ಹನು, ಯೋಗೇಶ್, ಚಿಕ್ಕಕ್ಯಾತ ಹಾಗೂ ನವೀನ್‌ಗೌಡ, ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಹೆಚ್ಚು ಹಾಲು ಸರಬರಾಜು ಮಾಡಿದವರಿಗೆ ಬಹುಮಾನ



ಬೆಟ್ಟದಪುರ, ಸೆ.15– ಸಮೀಪದ ಬಿಲಗುಂದ ಗ್ರಾಮದ ಹಾಲು ಉತ್ಪಾದಕ ಮಹಿಳಾ ಸಹಕಾರ ಸಂಘದಲ್ಲಿ ಶುಕ್ರವಾರ ನಡೆದ ವಾರ್ಷಿಕ ಮಹಾಸಭೆಯಲ್ಲಿ ಸಂಘಕ್ಕೆ ಅತಿ ಹೆಚ್ಚು ಹಾಲು ಸರಬರಾಜು ಮಾಡಿದ ಹೇಮಾ, ಸುಜಾತ ಅವರಿಗೆ ಬಹುಮಾನ ನೀಡಿ ಪ್ರೋತ್ಸಾಯಿಸಲಾಯಿತು.

ವಿಸ್ತರಣಾಧಿಕಾರಿ ಆಕಾಶ್, ಮುಖಂಡ ಗ್ರಾಮ ಪಂಚಾಯತಿ ಸದಸ್ಯ ಕೃಷ್ಣೇಗೌಡ, ಪಾಲಾಕ್ಷ, ಆನಂದ್, ಸಂಘದ ಅಧ್ಯಕ್ಷ ಕಮಲಾಕ್ಷಮ್ಮ, ಉಪಾಧ್ಯಕ್ಷ ಸಿದ್ದಲಿಂಗಮ್ಮ, ನಿರ್ದೇಶಕ ಪುಟ್ಟತಾಯಮ್ಮ, ಕುಮಾರಿ, ರೇಣುಕಾ, ತಾಯಮ್ಮ, ರೂಪಾ, ಸರಿತಾ, ಸುಧಾ, ಮಹದೇವಮ್ಮ, ಲಕ್ಷ್ಮಮ್ಮ ಭಾಗವಹಿಸಿದ್ದರು.

# ಹುಣಸೂರಲ್ಲಿ ಸಂವಿಧಾನ ಪೀಠಿಕೆ ವಾಚನ



ಹುಣಸೂರು, ಸೆ.15– ನಗರದ ಸಂವಿಧಾನ ವೃತ್ತದಲ್ಲಿ ಶುಕ್ರವಾರ ಬೆಳಿಗ್ಗೆ ತಾಲೂಕು ಆಡಳಿತ ಮತ್ತು ಲಾ–ಸಾಲೇಟ್ ವಿದ್ಯಾ ಸಂಸ್ಥೆ ವತಿಯಿಂದ ನೂರಾರು ಸಾರ್ವಜನಿಕರು ತಾಲೂಕು ಮುಖಂಡರು, ಶಾಲಾ ಮಕ್ಕಳು ಜೊತೆಗೂಡಿ ಭಾರತ ಸಂವಿಧಾನ ಪೀಠಿಕೆ ವಾಚನ ಮಾಡಿದರು.

ಈ ಸಂದರ್ಭದಲ್ಲಿ ರಾಜ್ಯ ದಲಿತ ಮುಖಂಡ ಹರಿಹರ ಆನಂದಸ್ವಾಮಿ ಮಾತನಾಡಿ, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವಾದ ಇಂದು ನಮ್ಮ ದೇಶದ ಸಂವಿಧಾನ ಪೀಠಿಕೆಯನ್ನು ಸಾಮೂಹಿಕ ವಾಚನ ಮಾಡುತ್ತಿರುವುದು ಸಂತಸದ ವಿಚಾರವಾದರು ಸ್ವಾತಂತ್ರ್ಯ ಬಂದು 70 ವರ್ಷಗಳೆ ಕಳೆದರೂ ದೇಶದಲ್ಲಿ ಇನ್ನೂ ಕೆಲವರು ಸಂವಿಧಾನವನ್ನು ಪರಿಪೂರ್ಣವಾಗಿ ಒಪ್ಪಿಕೊಳ್ಳಲು ಸಿದ್ದರಿಲ್ಲದ ಪರಿಸ್ಥಿತಿ ಇದೆ ಎಂದು ವಿಷಾದ ವ್ಯಕ್ತಪಡಿಸಿದರು.

ಅಲ್ಲದೆ ದೇಶದ ಪ್ರತಿಯೊಬ್ಬರಿಗೂ ಸಮಾನತೆ ತಂದುಕೊಟ್ಟಂತಹ ಸಂವಿದಾನದ ಪೀಠಿಕೆಯನ್ನು ಸಾರ್ವತ್ರಿಕವಾಗಿ ವಾಚನ ಮಾಡುವಂತಹ ಈ ಪವಿತ್ರ ಕಾರ್ಯಕ್ರಮದ ಬಗ್ಗೆ ನಾಯಕರಿಗೆ, ಜನಪ್ರತಿನಿಧಿಗಳಿಗೆ, ಚುನಾಯಿತ ಪ್ರತಿನಿಧಿಗಳಿಗೆ, ಮುಖಂಡರಿಗೆ ಹಾಗೂ ಸಾರ್ವಜನಿಕರಿಗೆ ತಿಳಿಸುವಲ್ಲಿ ತಾಲೂಕು ಆಡಳಿತ ಮತ್ತು ಸಮಾಜ ಕಲ್ಯಾಣ ಇಲಾಖೆ ವಿಫಲವಾಗಿದೆ. ಕೆಲವೆ ಕೆಲವರನ್ನು ಸೇರಿಸಿ ಸರಳವಾಗಿ ಆಚರಿಸುತ್ತಿರುವುದು ನಮ್ಮ ಸಂವಿದಾನಕ್ಕೆ ಅಪಚಾರ ಮಾಡುವ ಉದ್ದೇಶವಾಗಿದೆ. ಈ ಬಗ್ಗೆ ಉಪವಿಬಾಗಧಿಕಾರಿಗಳು ಸಂಬಂದಪಟ್ಟ ಅಧಿಕಾರಿಗಳಿಗೆ ತಕ್ಕ ಶಿಕ್ಷೆ ನೀಡಬೇಕು ಎಂದು ನೆರದಿದ್ದ ಎಲ್ಲ ನಾಯಕ ಮುಖಂಡರು ಮತ್ತು ಸಾರ್ವಜನಿಕರು ಒತ್ತಾಯಿಸಿದರು.

ಈ ಅವ್ಯವಸ್ಥೆಯ ಬಗ್ಗೆ ತಾಹಸಿಲ್ದಾರ್ ಲೆಫ್ಟಿನೆಂಟ್ ಕರ್ನಲ್ ಡಾ.ಅಶೋಕ್ ಮಾತನಾಡಿ ಕ್ಷಮೆ ಯಾಚಿಸಿದರು ಹಾಗೂ ಈ ಸಂಬಂದ ಉಪವಿಬಾಗಧಿಕಾರಿಗಳ ಗಮನಕ್ಕೆ ತಂದು ತಕ್ಷಣ ಸಭೆ ಕರೆದು ಕ್ರಮ ವಹಿಸಲಾಗುವುದು ಎಂದರು.

ನಂತರ ಎಲ್ಲರೂ ಶಾಂತಿಯುತವಾಗಿ ಸಂವಿದಾನ ಪೀಠಿಕೆ ವಾಚನ ಮಾಡಿ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ತಾಪಂ ಕಾರ್ಯನಿರ್ವಹಣಾಧಿಕಾರಿ ಮನು, ತಾಲೂಕು ಕೃಷಿ ಸಹಾಯಕ ನಿರ್ದೇಶಕ ವೆಂಕಟೇಶ್, ಪೌರಾಯುಕ್ತೆ ಮಾನಸ, ಬಿಇಒ ರೇವಣ್ಣ ಸಿಡಿಪಿಒ ರಶ್ಮಿ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಮುಖಂಡ ರಾದ ನಿಂಗರಾಜ್ ಮಲ್ಲಾಡಿ, ಜಿಲ್ಲಾ ರೈತ ಸಂಘದ ಅಧ್ಯಕ್ಷ ಹೊಸೂರ್ ಕುಮಾರ್, ಅತ್ತಿಕುಪ್ಪೆ ರಾಮಕೃಷ್ಣ, ಡಿ.ಕುಮಾರ್, ಎಸ್. ಜಯರಾಮ್, ಕೋಳಗಟ್ಟ ಕೃಷ್ಣ ಮಹದೇವಮ್ಮ, ಚಿಕ್ಕಹುಣಸೂರು ರಾಜು, ವಕಿಲ ಪುಟ್ಟರಾಜು, ಬೀಳ್ಗೂರ್ ವೆಂಕಟೇಶ್, ಲಾಸಾಲೇಟ್ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ಭೋದಕ ವೃಂದದವರು, ಸೇರಿದಂತೆ ನೂರಾರು ಜನ ಬಾಗವಹಿಸಿದರು.

# ಹೆಚ್.ಡಿ. ಕೋಟೆಯಲ್ಲಿ ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮ



ಹೆಚ್.ಡಿ.ಕೋಟೆ, ಸೆ.15– ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನದಿಂದ ನಾನು ಶಾಸಕನಾಗಲು ಸಾಧ್ಯವಾಯಿತು ಎಂದು ಶಾಸಕ ಅನಿಲ್ ಚಿಕ್ಕಮಾದು ಪ್ರತಿಪಾದಿಸಿದ್ದಾರೆ.

ಪಟ್ಟಣದ ಜೂನಿಯರ್ ಕಾಲೇಜು ಆವರಣದಲ್ಲಿ ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಭಾರತದ ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶದಲ್ಲಿ ಗ್ರಾಮ ಪಂಚಾಯತಿಯಿಂದ ಹಿಡಿದು ಒಬ್ಬ ಟೀ ಮಾರುವವರು, ರೈತನೊಬ್ಬ ಪ್ರಧಾನಮಂತ್ರಿ ಆಗುತ್ತಾರೆ ಎಂದರೆ ಅದಕ್ಕೆ ಮೂಲ ಸಂವಿಧಾನ ಕಾರಣ. ಒಬ್ಬ ಮಹಿಳೆ ಕೂಡ ಗ್ರಾಮ ಪಂಚಾಯಿತಿ ಸದಸ್ಯೆಯಿಂದ ಈ ದೇಶದ ಉನ್ನತ ಹುದ್ದೆ ಪ್ರಧಾನ ಮಂತ್ರಿ ಆಗಬಹುದು ಎಂಬುದಕ್ಕೆ ಸಂವಿಧಾನ ಕಾರಣ. ಇಂತಹ ಒಂದು ಶ್ರೇಷ್ಠವಾದ ಸಂವಿಧಾನವನ್ನು ನಮ್ಮ ದೇಶಕ್ಕೆ ಅಂಬೇಡ್ಕರ್ ಅವರು ಕೊಟ್ಟಿರುವುದು ಇತಿಹಾಸ ಎಂದು ನುಡಿದರು.

ವಿಚಾರವಾದಿ ಹಾಗೂ ಚಿಂತಕ ಕೃಷ್ಣಮೂರ್ತಿ ಚಮಾರಂ ಮಾತನಾಡಿ ಭಾರತ ಸ್ವತಂತ್ರ ಸಿಗುವುದಕ್ಕೂ ಸಾವಿರಾರು ವರ್ಷಗಳ ಕಾಲ ಗುಲಾಮಗಿರಿಗೆ ಒಳಗಾಗಿತ್ತು. ಡಚ್ಚರು, ಫ್ರೆಂಚರು, ಪೋರ್ಚುಗೀಸರು, ಬ್ರಿಟಿಷರ ಕಪಿ ಮುಷ್ಟಿಯಲ್ಲಿ ನಮ್ಮ ದೇಶವಿತ್ತು. ಅನೇಕ ಜನರ ತ್ಯಾಗ ಬಲಿದಾನದಿಂದಾಗಿ ಸ್ವಾತಂತ್ರ ದೊರಕಿತು ಎಂದರು.

ರಕ್ತರಹಿತವಾದ ಕ್ರಾಂತಿ ಮೂಲಕ ಭಾರತವನ್ನು ಕಟ್ಟಬೇಕು ಎಂದು ಅಂಬೇಡ್ಕರ್ ಆಶಯವನ್ನು ಹೊಂದಿದ್ದರು. ಆದರೆ ನಾವು ಇಂದು ಆ ವ್ಯವಸ್ಥೆಯಲ್ಲಿ ಇದ್ದೀವಿ ಎಂಬುದನ್ನು ಮನಗಾಣಬೇಕಾಗಿದೆ. ದುರ್ಬಲ ಭಾರತವನ್ನು ಕಟ್ಟುತ್ತಿದ್ದೇವೆ ಎಂದು ಅನಿಸುತ್ತದೆ. ಧರ್ಮದ ಹಿಡಿತದಿಂದ ಸಂವಿಧಾನದ ಹಿಡಿತಕ್ಕೆ ಬಂದಿದ್ದೇವೆ. ಧರ್ಮ ಮಹಿಳೆಯರನ್ನು ಕಟ್ಟಿಹಾಕಿತ್ತು ಸಂವಿಧಾನ ಅವರಿಗೆ ಸ್ವಾತಂತ್ರ್ಯ ನೀಡಿದೆ. ಪ್ರತಿಯೊಬ್ಬ ವ್ಯಕ್ತಿಯು ಈ ದಿನದ ಮಹತ್ವವನ್ನು ತಿಳಿದುಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ತಹಸಿಲ್ದಾರ್ ಸಣ್ಣರಾಮಪ್ಪ ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್, ಸದಸ್ಯ ಎಚ್.ಸಿ. ನರಸಿಂಹಮೂರ್ತಿ, ರಾಜು, ಮಿಲ್ ನಾಗರಾಜು, ಸರ್ಕಲ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ, ಇಓ ಧರಣೇಶ್, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಬಿಇಓ ಮಾರಯ್ಯ, ಇಓ ಧರಣೇಶ್, ನಾರಾಯಣಸ್ವಾಮಿ, ಡಾ. ಸೋಮಣ್ಣ ಮುಂತಾದವರು ಹಾಜರಿದ್ದರು.

# ಮೈಮುಲ್‌ನಿಂದ 10 ಲಕ್ಷ ಲೀಟರ್ ಹಾಲು ಶೇಖರಣೆ ಮಾಡುವ ಘಟಕ ನಿರ್ಮಾಣ

ಭೇರ್ಯ, ಸೆ,15– ಮೈಮುಲ್‌ನಲ್ಲಿ 10 ಲಕ್ಷ ಲೀಟರ್ ಹಾಲನ್ನು 6 ತಿಂಗಳ ಅವದಿ ಶೇಖರಣೆ ಮಾಡಲು ಅಂದಾಜು 120 ಕೋಟಿ ರೂ.ವೆಚ್ಚದಲ್ಲಿ ಹಾಲು ಶೇಖರಣಾ ಘಟಕ ನಿರ್ಮಾಣ ಮಾಡಲಾಗುವುದು ಎಂದು ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್ ತಿಳಿಸಿದರು.

ಭೇರ್ಯ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮೈಮುಲ್ ಹಾಲಿಗೆ ಹೊರ ರಾಜ್ಯ ಹಾಗೂ ವಿದೇಶಗಳಲ್ಲಿ ಬಾರಿ ಬೇಡಿಕೆಯಿದ್ದು, ಅಂದಾಜು 10 ಲಕ್ಷ ಲೀ. ಹಾಲನ್ನು ಶೇಖರಿಸಿ ನಂತರ ಟೆಟ್ರೋ ಪ್ಯಾಕ್ ಮೂಲಕ ಮಾರಾಟದ ವ್ಯವಸ್ಥೆ ಮಾಡಲು ಆಡಳಿತ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಿದ್ದು, ಮುಂದಿನ ತಿಂಗಳೊಳಗೆ ಮೈಸೂರಿನಲ್ಲಿ 120 ಕೋಟಿ ವೆಚ್ಚದ ಘಟಕದ ಸ್ಥಾಪನೆಗೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಶಂಕುಸ್ಥಾಪನೆ ಮಾಡಲಿದ್ದಾರೆ ಎಂದರು.

ಭೇರ್ಯ ಹಾಲು ಉತ್ಪಾದಕರ ಸಹಕಾರ ಸಂಘ 2.16 ಕೋಟಿ ವಹಿವಾಟು ನಡೆಸುವ ಮೂಲಕ 5 ಲಕ್ಷದಷ್ಟು ನಿವ್ವಳ ಲಾಭಾಂಶ ಬಂದಿದೆ, ನಿಮ್ಮಗಳ ಸಹಕಾರ ಸದಾ ಇರಲಿ ಎಂದು ಮನವಿ ಮಾಡಿದರು. ನಂತರ ಡೈರಿಗೆ ಅತಿ ಹೆಚ್ಚು ಹಾಲು ಸರಬರಾಜು ಮಾಡಿದ ಮೂವರಿಗೆ ಸಂಘದಿಂದ ಉಡುಗೊರೆ ನೀಡಿ ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಮಕ್ಸೂದ್ ಅಲಿಖಾನ್, ಉಪಾಧ್ಯಕ್ಷ ಬಿ.ಆರ್.ಪುಟ್ಟಸ್ವಾಮೀಗೌಡ, ಮೈಮುಲ್ ನಿವೃತ್ತ ವ್ಯವಸ್ಥಾಪಕ ಡಾ.ಸಣ್ಣತಮ್ಮೇಗೌಡ, ಮೈಮುಲ್ ಉಪ ವ್ಯವಸ್ಥಾಪಕ ಡಾ.ಪ್ರವೀಣ್ ಪತ್ತರ್, ಪಶುವೈದ್ಯಾಧಿಕಾರಿ ಡಾ.ಹರೀಶ್, ಮೈಮುಲ್ ಮಾರ್ಗ ವಿಸ್ತರಣಾಧಿಕಾರಿ ಸುಮಂತ್ ಸದಸ್ಯರು ಭಾಗವಹಿಸಿದ್ದರು.



# ಮೈಮುಲ್‌ನಿಂದ ಹಾಸ್ಟೆಲ್ ನಿರ್ಮಾಣ



ತಿ.ನರಸೀಪುರ.ಸೆ 15– ಪದವಿ ವ್ಯಾಸಾಂಗ ಮಾಡುವ ಹಾಲು ಉತ್ಪಾದಕ ರೈತ ಮಕ್ಕಳಿಗೆ ವಸತಿ ಸೌಕರ್ಯ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಒಕ್ಕೂಟದ ವತಿಯಿಂದ ನಿರ್ಮಿಸುತ್ತಿರುವ ಹಾಸ್ಟೆಲ್ ಕಟ್ಟಡದ ನಿರ್ಮಾಣ ಕಾರ್ಯ ಪ್ರಗತಿಯ ಹಂತದಲ್ಲಿದೆ ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಹೇಳಿದರು.

ತಾಲೂಕಿನ ಕಗ್ಗಲೀಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಸಂಘದ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು ಈ ಹಿಂದೆ ರೈತರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಹಾಸ್ಟೆಲ್ ಸೌಲಭ್ಯ ಕಲ್ಪಿಸಲಾಗಿತ್ತು 80 ಮಕ್ಕಳಿಗೆ ಹಾಸ್ಟೆಲ್‌ನಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಆದರೆ ಪ್ರಸ್ತುತ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿ ಒತ್ತಡ ಹೆಚ್ಚಿದ್ದರಿಂದ 250 ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲು ಕಟ್ಟಡ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ನಿರ್ಮಾಣ ಹಂತದಲ್ಲಿದೆ ಎಂದರು.

ಪೀ ಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಮಾತನಾಡಿ ಚೆಲುವರಾಜು ಅವರನ್ನು ರೈತರು ನಿರ್ದೇಶಕರನ್ನಾಗಿ ಮಾಡಿದ್ದರಿಂದ ಜಿಲ್ಲೆಯಲ್ಲಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ಅವರು ಮುಂದೆ ಮೈಮುಲ್ ಅಧ್ಯಕ್ಷರಾಗಿ ಮತ್ತಷ್ಟು ಉತ್ತಮ ಕೆಲಸಗಳನ್ನು ಮಾಡುವಂತಾಗಲಿ ಎಂದು ಹಾರೈಸಿದರು.

ಮಾರ್ಗ ವಿಸ್ತರಣಾಧಿಕಾರಿ ಆರ್.ಪ್ರಮೋದ್ ವಾರ್ಷಿಕ ವರದಿ ಮಂಡಿಸಿದರು. ಇದೇ ವೇಳೆ ಸಂಘಕ್ಕೆ ಹೆಚ್ಚಿನ ಹಾಲು ಸರಬರಾಜು ಮಾಡಿದ 8 ಮಂದಿ ರೈತರಿಗೆ ಬಹುಮಾನ ನೀಡಿ ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಆರ್.ರಾಜೇಶ್, ಉಪಾಧ್ಯಕ್ಷ ನಾಗೇಂದ್ರ, ನಿರ್ದೇಶಕರಾದ ಕೆ.ಎಂ. ಮಂಜುನಾಥ್(ಕಪಾಲಿ), ಎನ್.ಮಹದೇವಸ್ವಾಮಿ, ನಾಗರಾಜು, ಚಿಕ್ಕಸ್ವಾಮಿ, ಕೃಷ್ಣ, ತ್ರಿವೇಣಿ, ಸುಜಾತ, ಮಾಜಿ ಅಧ್ಯಕ್ಷ ಬೋರೇಗೌಡ, ನಾಗರಾಜು, ರಾಜು, ಮಾಜಿ ನಿರ್ದೇಶಕರಾದ ನಾಗಮ್ಮ, ರಾಜೇಶ್, ಮಹದೇವ, ದೇವರಾಜ್, ಕುಮಾರ್, ಮುಖಂಡರಾದ ಪ್ರಥಮ ದರ್ಜೆ ಗುತ್ತಿಗೆದಾರ ಕೆ.ಎಂ. ಮಧು ಕುಮಾರ್, ನ್ಯಾಯಬೆಲೆ ಅಂಗಡಿ ನಾಗೇಂದ್ರ, ಗಿರೀಶ್‌ಗೌಡ, ಪಿ.ಮಹೇಶ್, ಕಾರ್ಯದರ್ಶಿ ಎಂ.ರವಿ, ಬಿಎಂಸಿ ಸಹಾಯಕ ಮಹಾಂತೇಶ್‌ಗೌಡ, ಕಿರಣ್, ಮಧುಕುಮಾರ್, ಹಾಲು ಪರೀಕ್ಷಕ ಮಹದೇವು ಮತ್ತಿತರರಿದ್ದರು.

# ವಿಶ್ವ ಪ್ರಜಾಪ್ರಭುತ್ವ ದಿನಾಚರಣೆಯಿಂದ ಸಂವಿಧಾನದ ಮೂಲ ಆಶಯಗಳನ್ನು ತಿಳಿಯಲು ಸಾಧ್ಯ



ನಂಜನಗೂಡು, ಸೆ.15– ಸಂವಿಧಾನದ ಮೂಲ ಆಶಯಗಳನ್ನು ಮತ್ತು ಪ್ರಜಾಪ್ರಭುತ್ವದ ಮಹತ್ವವನ್ನು ಅರಿಯಲು ವಿಶ್ವ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮ ಸಹಾಯಕವಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದ್ದಾರೆ.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ತಾಲೂಕು ಆಡಳಿತ ವತಿಯಿಂದ ಏರ್ಪಡಿಸಿದ್ದ ವಿಶ್ವ ಪ್ರಜಾಪ್ರಭುತ್ವ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಭಾರತದಂತಹ ವಿವಿಧ ಭಾಷೆ, ಸಂಸ್ಕೃತಿ, ಧರ್ಮವನ್ನು ಹೊಂದಿರುವ ದೇಶದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಶ್ರೇಷ್ಠ ಸಂವಿಧಾನದಿಂದಾಗಿ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯಿಂದ, ಸರ್ವ ಜನಾಂಗದ ಶಾಂತಿಯ ತೋಟದಂತೆ ಬಾಳ್ವೆ ಮಾಡಲು ಕಾರಣವಾಗಿದೆ. ಸಂವಿಧಾನ ಎಲ್ಲಾ ವರ್ಗದ ಜನರಿಗೂ ಸಹ ಆರ್ಥಿಕ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸಿದೆ ಎಂದು ಅವರು ತಿಳಿಸಿದರು.

ಶೋಷಿತ ಸಮುದಾಯಗಳಿಗೆ ಮತ್ತು ಧ್ವನಿ ಇಲ್ಲದವರಿಗೆ ಧ್ವನಿಯಾಗಿರುವುದು ನಮ್ಮ ಸಂವಿಧಾನ, ಸಂವಿಧಾನದಂತಹ ಶ್ರೇಷ್ಠ ಗ್ರಂಥದಿಂದಾಗಿ ವಿಶ್ವದಲ್ಲಿ ಅತಿ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ಇನ್ನೂ ಜೀವಂತವಾಗಿರುವುದು. ಆದ್ದರಿಂದ ಇಂದಿನ ಯುವಕ ಯುವತಿಯರು ಸಂವಿಧಾನದ ಮಹತ್ವವನ್ನು ಅರಿತು ನಮ್ಮ ಹಕ್ಕು ಬಾಧ್ಯತೆಗಳನ್ನು ತಿಳಿದುಕೊಂಡು ನಮ್ಮ ಸಂವಿಧಾನ ರಕ್ಷಣೆಗೆ, ಹಾಗೂ ಉತ್ತಮ ಸಮಾಜ ನಿರ್ಮಿಸಲು ಮುಂದಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಸಂವಿಧಾನದ ಪೀಠಿಕೆಯನ್ನು ಓದಿ ಗೌರವ ಸಮರ್ಪಿಸಲಾಯಿತು.

ಸಮಾರಂಭದಲ್ಲಿ ತಹಸಿಲ್ದಾರ್ ಶಿವಪ್ರಸಾದ್, ತಾಪಂ ಇಓ ಜೆರಾಲ್ಡ್ ರಾಜೇಶ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಭೀಮರಾವ್ ವಡ್ಡಾರ್, ಡಿವೈಎಸ್ಪಿ ಗೋವಿಂದರಾಜು, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಸಿಎಂ ಶಂಕರ್, ಶ್ರೀಕಂಠನಾಯಕ, ನಗರಸಭಾ ಸದಸ್ಯರಾದ ಎಸ್.ಪಿ.ಮಹೇಶ್, ಗಂಗಾಧರ್, ಶ್ರೀಕಂಠ ಸ್ವಾಮಿ, ಶ್ವೇತ ಲಕ್ಷ್ಮಿ, ವಿಜಯಲಕ್ಷ್ಮಿ, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿಂ, ಮುಖಂಡರಾದ ಅಬ್ದುಲ್ ಖಾದರ್, ಗೋವಿಂದರಾಜು, ವಿದ್ಯಾಸಾಗರ್, ಕಾಲೇಜಿನ ಪ್ರಾಂಶುಪಾಲರಾದ ರೇಣುಕಾಬಾಯಿ, ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಇದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ



| | |
|---|---|
| **ಪದ್ಮ ಚಿತ್ರಮಂದಿರ** | **(ದೂ: 2521923)** |
| ಮಾರ್ಕ್ ಆಂಟೋನಿ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | **(ದೂ: 2422871)** |
| ತತ್ಸಮ ತದ್ಭವ(ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | **(ದೂ: 2497199)** |
| ಜವಾನ್ (ಹಿ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | **(ಮೊ:9900820093)** |
| ಸಪ್ತಸಾಗರದಾಚೆ ಎಲ್ಲೋ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಸಪ್ತಸಾಗರದಾಚೆ ಎಲ್ಲೋ (ಕ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ಮಾರ್ಕ್ ಆಂಟೋನಿ (ತ) | 4 ಪ್ರದರ್ಶನಗಳು |
| **ಸಂಗಂ** | |
| ಜವಾನ್ (ಹಿ) | 4 ಪ್ರದರ್ಶನಗಳು |
| **ಲಿಡೋ** | |
| ಖುಷಿ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಜವಾನ್ (ಹಿ) | 4 ಪ್ರದರ್ಶನಗಳು |
| **ಪ್ರಭಾ** | |
| ನಮೋ ಭೂತಾತ್ಮ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಸಪ್ತಸಾಗರದಾಚೆ ಎಲ್ಲೋ (ಕ): ಬೆ.10.15ಕ್ಕೆ, ಮ.1.05ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ, ಜವಾನ್ (ಹಿಂ): ಮ.3.55ಕ್ಕೆ. |
| ಸ್ಕ್ರೀನ್ 2 | ತತ್ಸಮ ತದ್ಭವ (ಕ): ಬೆ.11ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, 13 ಪಾರ್ಟ್ 1 (ಕ): ಮ.1.45ಕ್ಕೆ, ಮಿಸ್ ಶೆಟ್ಟಿ ಮಿಸ್ಟರ್ ಪೊಲಿಶೆಟ್ಟಿ (ತೆ): ಸಂ.4.15ಕ್ಕೆ. |
| ಸ್ಕ್ರೀನ್ 3 | ಪರಿಮಳಾ ಡಿಸೋಜಾ (ಕ): ಬೆ.11ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.15ಕ್ಕೆ, ಎ ಹಾಂಟಿಂಗ್ ಇನ್ ವೆನಿಸ್ (ಇಂ): ರಾ.7.15ಕ್ಕೆ, ರಾ.9.50ಕ್ಕೆ. |
| ಸ್ಕ್ರೀನ್ 4 | ಜವಾನ್ (ಹಿಂ): ಬೆ.9.45ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | ತತ್ಸಮ ತದ್ಭವ (ಕ): ಬೆ.11.10ಕ್ಕೆ, ಸಂ.4.45ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ರಾ.7.20ಕ್ಕೆ, ಮಾರ್ಕ್ ಆಂಟೋನಿ (ತ): ರಾ.10.20ಕ್ಕೆ. |
| ಸ್ಕ್ರೀನ್ 2 | ಜವಾನ್ (ಹಿಂ): ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 3 | ಜವಾನ್ (ಹಿಂ): ಬೆ.10.15ಕ್ಕೆ, ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ. |
| ಸ್ಕ್ರೀನ್ 4 | ಪರಿಮಳಾ ಡಿಸೋಜಾ (ಕ): ಬೆ.10.30ಕ್ಕೆ, 13 (ಕ): ಮ.1.20ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ, ಟೇಲ್ ಆಫ್ ಮಹಾನಗರ (ಕ): ರಾ.7.30ಕ್ಕೆ, ಕಾಸರ್‌ಗೋಲ್ಡ್ (ಮ): ರಾ.10.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ. |
| ಸ್ಕ್ರೀನ್ 2 | ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ. |
| ಸ್ಕ್ರೀನ್ 3 | ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ. |
| ಸ್ಕ್ರೀನ್ 4 | ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ. |

### ಪಿವಿಆರ್ ಸಿನಿಮಾಸ್
PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

**ಜೈಲರ್ (ತ):** ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಳಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ಗುಣಮಟ್ಟದ ಹಾಲು ಸರಬರಾಜು ಮಾಡಿ



ತಿ.ನರಸೀಪುರ.ಸೆ.15– ರೈತರು ಸಂಘಕ್ಕೆ ಉತ್ತಮ ಗುಣಮಟ್ಟದ ಹಾಲನ್ನು ಸರಬರಾಜು ಮಾಡುವ ಮೂಲಕ ಸಂಘದ ಬೆಳವಣಿಗೆಗೆ ಸಹಕಾರ ನೀಡಬೇಕು ಹಾಗೂ ತಾವು ಸಹ ಆರ್ಥಿಕವಾಗಿ ಮುನ್ನಡೆ ಸಾಧಿಸಬೇಕು ಎಂದು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಬಿ.ಮಂಟೇಲಿಂಗಪ್ಪ ಹೇಳಿದರು.

ತಾಲೂಕಿನ ಬಿಳಿಗೆರೆಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘವು ಏರ್ಪಡಿಸಿದ್ದ ಸಂಘದ 2022–23ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಹಾಲು ಉತ್ಪಾದಕರನ್ನು ಉದ್ದೇಶಿಸಿ ಮಾತನಾಡಿದ ಅವರು ಪ್ರಸಕ್ತ ಸಾಲಿನಲ್ಲಿ ಸಂಘವು 1.47,391 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದರು.

ಸಂಘವು ವರ್ಷಗಳಷ್ಟು ಹಳೆಯ ಸಂಘವಾಗಿದ್ದು, ಆರಂಭದಿಂದಲೂ ಲಾಭದಾಯಕವಾಗಿ ಮುನ್ನಡೆಯತ್ತಾ ಬಂದಿದೆ. ಇನ್ನೂ ಹೆಚ್ಚಿನ ಹಾಲು ಉತ್ಪಾದನೆಗೆ ರೈತರು ಒತ್ತು ನೀಡಬೇಕಿದೆ ಎಂದರು.

ಇತ್ತೀಚೆಗೆ ಹೈನುಗಾರಿಕೆ ಲಾಭದಾಯಕ ಉದ್ದಿಮೆಯಾಗಿ ಬೆಳೆಯುತ್ತಿದೆ ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಹಸು ಸಾಕುವವರ ಸಂಖ್ಯೆ ಇಳಿಮುಖವಾಗುತ್ತಿರುವುದು ಬೇಸರದ ಸಂಗತಿಯಾಗಿದೆ, ಮನೆಗೊಂದು, ಎರಡು ಹಸು ಇದ್ದರೆ ಹೆಚ್ಚಿನ ಹಾಲು ಉತ್ಪಾದನೆ ಸಾಧ್ಯವಾಗುತ್ತದೆ ಎಂದರು.

ಸಂಘದ ಉಪಾಧ್ಯಕ್ಷ ಬಿ.ಎಂ. ಮಹಾದೇವ, ನಿರ್ದೇಶಕರಾದ ನಾಗರಾಜು, ಮಹದೇವಪ್ಪ, ರಾಜಶೇಖರಪ್ಪ, ಮಂಜು, ಬಸವರಾಜು, ಮಹದೇವ ನಾಯಕ, ಸಿದ್ದೇಗೌಡ, ಸಿದ್ದಯ್ಯಸ್ವಾಮಿ, ಮಹದೇವಮ್ಮ, ಪುಟ್ಟಮಲ್ಲಮ್ಮ, ಸೂಪರ್ವೈಸರ್ ವೀಣಾ, ಸಿಇಓ ಪುರುಷೋತ್ತಮ್, ರೈತರು ಹಾಜರಿದ್ದರು

## ಪಿ.ವಿ. ವಿಶ್ವನಾಥ್ ನಿಧನ



ಪಿರಿಯಾಪಟ್ಟಣ, ಸೆ.15– ಪಟ್ಟಣದ ಪುರಸಭೆ ಮಾಜಿ ಅಧ್ಯಕ್ಷ ಪಿ.ಎಸ್. ವಿಷಕಂಠಯ್ಯನವರ ಪುತ್ರ ಪಿ.ವಿ.ವಿಶ್ವನಾಥ್ (ವಿಶ್ವ) ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಗುರುವಾರ ರಾತ್ರಿ ನಿಧನರಾಗಿದ್ದಾರೆ. ಅವರಿಗೆ 40 ವರ್ಷ ವಯಸ್ಸಾಗಿತ್ತು.

ಮೃತರು ತಂದೆ ವಿಷಕಂಠಯ್ಯ, ತಾಯಿ, ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸ್ವಗ್ರಾಮ ಚೌಡನಹಳ್ಳಿಯ ತೋಟದಲ್ಲಿ ನೆರವೇರಿತು.



JOCKEY

FACTORY SECONDS

UPTO 50% OFF*

*T & C apply

· 10 am to 8 pm · Open All Days · Master / Visa Card Accepted

INNERWEAR · LEISUREWEAR · ACTIVEWEAR · KIDSWEAR · SOCKS

**Venues in Mysore & Hassan**

Mysore: The Institution Of Engineers, (Auditorium Hall) Jhansi Lakshmibai Road, JLB Road - 5

Hassan: Sri Sringeri Shankar Math, Shankar Math Road, K.R. Puram

Org. by: Surya Agency Pvt. Ltd.

PALACE TOYOTA

TOYOTA

Awesome UTSAVA GLANZA

> EXCHANGE BONUS UPTO ₹10,000/-*

> EXTENDED WARRANTY WORTH ₹12,000/-*

> SPECIAL OFFERS ON GLANZA AUTO

> SPOT BOOKING DISCOUNT

> TOYOTA GENUINE ACCESSORIES WORTH ₹15,000/-*

₹1 DOWN PAYMENT*



THE COOL TOYOTA GLANZA

PRICE STARTS FROM ₹ 6.71 Lakhs* | EMI STARTING @ ₹ 4,099* | FUEL EFFICIENCY (P) 22.94 km/l

FOR MORE DETAILS VISIT ON 15TH & 16TH SEPTEMBER

AT HOOTAGALLI SHOWROOM - CALL 9538874906

AT BALLAL CIRCLE SHOWROOM - CALL 9538874923

JSS MAHAVIDYAPEETHA

## JSS COLLEGE OF ARTS, COMMERCE & SCIENCE

Autonomous, NAAC 'A' Grade (CGPA 3.21) & College with Potential for Excellence

Ooty Road, Mysuru – 570 025. Ph: 0821-2548379, 2548380, 2548236 Fax: 0821-2548238

Email: jssautonomous@gmail.com; Website: www.jsscacs.edu.in

### ADMISSIONS FOR POSTGRADUATE DEGREE PROGRAMMES: 2023-24

**PROGRAMMES OFFERED**

Duration: 2 Years / 4 Semesters

- **M.Sc.** Physics, Chemistry, Mathematics, Computer Science, Biochemistry, Bio-Technology, Botany, Zoology
- **M.A.** Kannada, English
- **M.S.W**
- **M.Com**
- **MCA**
- **M.Voc.** Food Processing & Engineering, Software Development

The college lies amid lush-green environment with excellent infrastructure and hostel facilities for women. We foster research activities and career opportunities to the students through various programmes.



13th RANK at state level by Education World ranking

**Registration**

Registration at www.uompgadmissions.com is compulsory for candidates seeking admissions to PG degree programmes of this college under College Quota and University Quota.

**Entrance Examination**

I. Entrance Examination conducted by University of Mysore is compulsory for all candidates seeking admissions to PG degree programmes (Foreign Nationals are exempted from Entrance Examination).

II. Entrance Examination for M.Voc degree programmes will be conducted by the College.

**Applications**

I. Candidates are advised to submit applications either online at www.jsscacs.edu.in or in-person for seeking admissions under College Quota.

II. Candidates seeking admissions to this College under University Quota need to apply only in online mode at www.uompgadmissions.com as per University Notification.

III. Separate applications should be submitted for each PG degree programmes

We provide special coaching for competitive examinations

**MCA Admissions**

30 Seats are filled by Management and 30 seats by KEA.

For more details visit our website: www.jsscacs.edu.in

**JOB OPPORTUNITY**

Required Female STAFF NURSE GNM / ANM & Female PHARMACIST for a reputed hospital in Mysore.

Attractive salaries offered. Free accommodation provided.

Please Contact : 98450 49079 / 63662 25136

neem BOND PLATINUM

PLYWOOD & DOORS

@ FACTORY DEPOT RATES

10 YEARS WARRANTY ISI

9901291267, 9845426862

**SITES FOR SALE**

MUDA APPROVED

20x30, 30x40

4.5 kms from Bogadi Ring Road, attached to Pheripheral Ring Road, Mysore

9611277776, 9880440033

**ಸಾರ್ವಜನಿಕ ಪತ್ರಿಕಾ ಪ್ರಕಟಣೆ**

ನನ್ನ ಕಕ್ಷಿದಾರರಾದ ಟಿಂಕ ಕೌರ ಕೋಂ ವಿಕ್ರಮ್ ಸಿಂಗ್ ಮನೆ ನಂ.1555, ಕೊಳಸಂದಿ ಬೀದಿ, ಮಂಡಿ ಮೊಹಲ್ಲಾ, ಮೈಸೂರು-570001 ಇವರ ಇರಾದೆಯ ಮೇರೆಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಟಿಂಕ ಕೌರ ರವರು ಶರೀನ್ ತಾಜ್ ಕೋಂ ಸೈಯದ್ ಬಾಷಾ ಮನೆ ನಂ.24, 19ನೇ ಕ್ರಾಸ್, 20ನೇ ಮುಖ್ಯ ರಸ್ತೆ, ಕಲ್ಪವೃಕ್ಷ ಅಪಾರ್ಟ್‌ಮೆಂಟ್, ಜೆ.ಪಿ. ನಗರ, 5ನೇ ಫೇಸ್, ಬೆಂಗಳೂರು ದಕ್ಷಿಣ, ಇವರಿಂದ ನಮೂದಿಸಿರುವ ಸ್ವತ್ತನ್ನು ಕ್ರಯದ ಮೂಲಕ ಖರೀದಿಸಲು ಇಚ್ಛಿಸಿದ್ದು, ಇದರ ಬಗ್ಗೆ ಯಾವುದೇ ತಂಟೆ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ. ಸಾರ್ವಜನಿಕರಲ್ಲಿ ಈ ಮೂಲಕ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ತಂಟೆ ತಕರಾರು ಅಥವಾ ಆಕ್ಷೇಪಗಳು ಇದ್ದಲ್ಲಿ ಈ ಕೆಳಕಂಡ ವಿಳಾಸಕ್ಕೆ 7 ದಿನಗಳೊಳಗಾಗಿ ನನಗಾಗಲೀ ಅಥವಾ ನನ್ನ ಕಕ್ಷಿದಾರರಿಗಾಗಲೀ ತಿಳಿಸತಕ್ಕದ್ದು, ಹಾಗೂ ಖುದ್ದು ದಾಖಲಾತಿಗಳೊಂದಿಗೆ ಹಾಜರುಪಡಿಸಲು ಕೋರಿದೆ ಇಲ್ಲವಾದಲ್ಲಿ ನೊಂದಣಿ ಪ್ರಕ್ರಿಯೆಗೆ ಯಾವುದೇ ಆಕ್ಷೇಪಣೆವಿಲ್ಲವೆಂದು ಪರಿಗಣಿಸಿ ಮುಂದುವರೆಸಲಾಗುವುದು.

**ಷೆಡ್ಯೂಲ್ ಸ್ವತ್ತಿನ ವಿವರ**

ಮೈಸೂರು ಸಿಟಿ, 25ನೇ ವಾರ್ಡ್, ಆನೆಗುಂದಿ ರಸ್ತೆ, ಮಂಡಿಮೊಹಲ್ಲಾ, ನಂ. 3333/1 ಎಂ-1/1 ಮತ್ತು 3333/1ಎ. ಎಂ-1/1ಎ. ರಲ್ಲಿ ನಿವೇಶನ ಮತ್ತು ಕಟ್ಟಡದ ವಿಸ್ತೀರ್ಣ ಪೂರ್ವ-ಪಶ್ಚಿಮ 231.885888 ಚದರ ಮೀಟರ್ ಉತ್ತರ ದಕ್ಷಿಣ 125.41905 ಚದರ ಮೀಟರ್‌ಗೆ ಚೆಕ್ಕುಬಂದಿ: ಪೂರ್ವಕ್ಕೆ: ಖಾಸಗಿ ಸ್ವತ್ತು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಖಾಸಗಿ ಸ್ವತ್ತು, ದಕ್ಷಿಣಕ್ಕೆ: ಖಾಸಗಿ ಸ್ವತ್ತು.

ಸಹಿ/- ಯೋಗೇಶ್ ಎಸ್.
ವಕೀಲರು, ಕೆಆರ್ ನಂ.1915/09
ನಂ.797/1, 8ನೇ ಕ್ರಾಸ್, ರಾಮಾನುಜ ರಸ್ತೆ,
ಮೈಸೂರು. ಮೊಬೈಲ್ ನಂ. 9972948415

**ಜಾಗ ಬೇಕಾಗಿದೆ**

ಮುಡಾ/ ಡಿಟಿಸಿಪಿ ಮಿತಿಯಲ್ಲಿ ಲೇಔಟ್ ಅಭಿವೃದ್ಧಿಗಾಗಿ ಜಾಗ ಬೇಕಾಗಿದೆ.
ಜಂಟಿ ಅಭಿವೃದ್ಧಿ 5 ರಿಂದ 25 ಎಕರೆ
ಕರೀದಿಗೆ 4 ರಿಂದ 8 ಎಕರೆ

VALUE SPACE

+91 9845519640 / 7992799205

**INDUSTRIAL BUILDING FOR RENT**

10000 Sq feet of Land and 6000 Sq Feet of Building with KEB Power at Hootagalli Industrial Area, near Theorem including Office Block - 2 Sheds.

Contact Mob No: 9611182006 / 9880707200

**HOUSE FOR RENT / LEASE**

2BHK HOUSE

Gokulam 1st stage (KRS Main Road) Mysore

Owner 8904516491 | 8904516490

**SITES FOR SALE**

A PREMIUM RESIDENTIAL LAYOUT NEAR SRINAGAR (J.P.NAGAR)

MUDA APPROVED

Bank Loan Available

Ready To Construct Locality

Call 90719 66999

Festival Offer

*I Phone 14Pro



LUXURY VILLAS FOR SALE

Ready to Register

30'x50' E/F, 3 BHK, All Teak

9066481068 / 8088861007

**ನೇರವಾಗಿ II ಪಿಯುಸಿ!!**

I PUC /II PUC ಹಾಜರಾತಿ ಕೊರತೆಯೇ/ ಫೇಲಾಗಿದೆಯೇ ಚಿಂತಿಸದಿರಿ. ನಾವು ನಿಮಗೆ II PUC ಗೆ ಪ್ರವೇಶ ನೀಡಿ ಮುದ್ರಿತ ನೋಟ್ಸ್‌ಗಳೊಂದಿಗೆ ಉತ್ತಮ ಕೋಚಿಂಗ್ ಕೊಟ್ಟು ಪರೀಕ್ಷೆಗೆ ಪರಿಣಾಮಕಾರಿಯಾಗಿ ಅಣಿಗೊಳಿಸುತ್ತೇವೆ.

9844355941, 9482674031

www.direct2puc.com

**SITE FOR SALE @ VARDAMAN NAGAR**

30X40, EAST FACING NEAR VTU COLLAGE & MANSINAGAR

9035379769

**RBM ಕಾಲೇಜ್**

ಕುವೆಂಪುನಗರ, ಮೈಸೂರು

ಪ್ರವೇಶ ತೆರೆದಿದೆ

B Com, B.Voc in Medical Lab Technology, Cardiac Care Technology, OT and Dialysis

9886654463 | 9945738573



**ರತ್ನ ಪ್ಯಾರಾ ಮೆಡಿಕಲ್ ಕಾಲೇಜ್**

ರಮಾವಿಲಾಸ್ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ, ಮೈಸೂರು

ಪ್ರವೇಶ ತೆರೆದಿದೆ

ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)

SSLC / PUC Pass / Fail

ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)

9886654463 / 9945738573

**4ನೇ ವರ್ಷದ ಸವಿನೆನಪು**



ಶ್ರೀ ಟಿ.ಎನ್.ದಾಸೇಗೌಡರವರು
(ನಿ॥ ಉಪನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ)
ಮರಣ : 16-09-2019

ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ದುಃಖಿತಪ್ತರು:-
ಪತ್ನಿ ಬಿ.ಸಿ.ಸರಸ್ವತಿ,
ಮಗಳು ಯಶೋದರೆ.ಟಿ.ಡಿ,
ಅಳಿಯ ನಾರಾಯಣ ಸ್ವಾಮಿ
ಮತ್ತು ಮೊಮ್ಮಕ್ಕಳು ಹಾಗೂ
ಕುಟುಂಬ ವರ್ಗದವರು
ಮತ್ತು ಸ್ನೇಹಿತರು

**8ನೇ ವರ್ಷದ ಸವಿನೆನಪು**



ನಮ್ಮ ಪ್ರಾರ್ಥನೆಯಲ್ಲಿ ನೀವು ಇರುವಿರಿ ಸದಾ ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಬೇಡುವ

ತಂದೆ – ಕುಮಾರ್
ತಾಯಿ – ಸುಧಾ,
ಮೋಹನ್ ಹಾಗೂ
ಕುಟುಂಬದವರು

ಕಾರ್ತಿಕ್

ತೊಣಚಿಕೊಪ್ಪಲ್, ಮೈಸೂರು

**ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಸಗಟು ಮಾರಾಟ ಸಂಘ ನಿ., ಮೈಸೂರು**

#66, ಹೊಸ ಸಂತೇಪೇಟೆ, ಬಂಬೂ ಬಜಾರ್, ಮೈಸೂರು - 570001. ದೂ: 0821-2423094

ಎಂ.ಸಿ.ಡಿ.ಸಿ.ಸಿ ಡಬ್ಲ್ಯೂ ಸ್ಟೋರ್

ಕ್ರ.ಸಂ. 355/2023-24 **ಪ್ರಕಟಣೆ** ದಿನಾಂಕ: 14.09.2023

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ ನಿ, ಮೈಸೂರು ಇದರ 2022-23ನೇ ಸಾಲಿನ 59ನೇ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯನ್ನು ದಿನಾಂಕ 24.09.2023ರ ಭಾನುವಾರದಂದು ಬೆಳಗ್ಗೆ 11 ಘಂಟೆಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ ನಿ., ಮೈಸೂರು ನಂ. 66 ಹೊಸ ಸಂತೇಪೇಟೆ, ಬಂಬೂಬಜಾರ್, ಮೈಸೂರು ಇಲ್ಲಿನ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಟಿ.ಪಿ.ಸುಬ್ರಹ್ಮಣ್ಯರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ. ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಬೇಕಾಗಿ ಕೋರಿದೆ. ಹೆಚ್ಚಿನ ವಿವರಗಳಿಗೆ ಕೇಂದ್ರ ಕಛೇರಿಯ ವೇಳೆಯಲ್ಲಿ ಸಂಘದ ಕೇಂದ್ರ ಕಛೇರಿಯನ್ನು ಸಂಪರ್ಕಿಸುವುದು.

ಕಾರ್ಯಕಾರಿ ಮಂಡಳಿಯ ಅಪ್ಪಣೆಯ ಮೇರೆಗೆ, ಸಹಿ/- (ಆರ್. ಪ್ರಕಾಶ್‌ರಾವ್)
ವ್ಯವಸ್ಥಾಪಕ ನಿರ್ದೇಶಕರು (ಪ್ರ). ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಎಂ.ಸಿ.ಡಿ.ಸಿ.ಸಿ.ಡಬ್ಲ್ಯೂ ಎಸ್, ನಿ, ಮೈಸೂರು

**2ನೇ ವರ್ಷದ ಸವಿನೆನಪು**



ರಾಜಶೇಖರ ಮೂರ್ತಿ.ಕೆ.ಎ
ಕೇಂದ್ರಿಯ ರೇಷ್ಮೆ ಇಲಾಖೆ, ಮೈಸೂರು

ಜನನ: 20-09-1963 ಮರಣ : 16-09-2021

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷವಾದರು ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ದುಃಖತಪ್ತರು: ಪತ್ನಿ: ರುಕ್ಮಿಣಿ, ಮಕ್ಕಳು: ತೇಜಸ್ವಿನಿ.ಎಂ.ಆರ್. ದರ್ಶಿನಿ.ಎಂ.ಆರ್ ಹಾಗೂ ಕುಟುಂಬವರ್ಗದವರು

**ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿ.,**

ಎನ್. ಮಾಧವರಾವ್ ವೃತ್ತ, ಮೈಸೂರು ದೂ: 08212520894 / 4259665

ಮಾನ್ಯ ಸದಸ್ಯರುಗಳು ಹಾಗೂ ಠೇವಣಿದಾರರುಗಳಿಗೆ
ಗೌರಿ-ಗಣೇಶ ಹಬ್ಬದ ಶುಭಾಷಯಗಳು

**ಪ್ರಕಟಣೆ**

1. 2022-23 ನೇ ಸಾಲಿಗೆ ಶೇ10 ರಂತೆ ಡಿವಿಡೆಂಡ್ ವಿತರಿಸಲಾಗುತ್ತಿದೆ. ಮಾನ್ಯ ಸದಸ್ಯರು ಪಾಸ್ ಪುಸ್ತಕ ಹಾಜರುಪಡಿಸಿ ಪಡೆಯುವುದು
2. ಚಿನ್ನಾಭರಣಗಳ ಮೇಲೆ ಶೇ 95 ರಂತೆ ಗ್ರಾಂಗೆ ರೂ. 4000/- ಸಾಲ ನೀಡಲಾಗುತ್ತಿದೆ.
3. ಮನೆ ಹಾಗೂ ನಿವೇಶನಗಳ ಮೇಲೆ ಶೇ 12.5 ರಂತೆ ಗರಿಷ್ಠ 20 ಲಕ್ಷ ಸಾಲ ನೀಡಲಾಗುತ್ತಿದೆ. (ಸರಿಯಾಗಿ ಕಂತುಗಳನ್ನು ಕಟ್ಟಿದವರಿಗೆ ಬಡ್ಡಿಯಲ್ಲಿ 1% ರಿಯಾಯಿತಿ ನೀಡಲಾಗುವುದು)
4. ಠೇವಣಿಗಳ ಮೇಲೆ ಗರಿಷ್ಠ ಶೇ 8.0 ರಂತೆ ಹಾಗೂ ಹಿರಿಯ ನಾಗರೀಕರಿಗೆ ಶೇ 8.5 ರಂತೆ ಬಡ್ಡಿ ನೀಡಲಾಗುತ್ತಿದೆ.
5. ಮಾನ್ಯ ಸದಸ್ಯರುಗಳು ಕಡ್ಡಾಯವಾಗಿ ಉಳಿತಾಯ ಖಾತೆಯನ್ನು ತೆರೆಯಬೇಕು.

ಪ್ರತಿಧ್ವನಿ ಪ್ರಸಾದ್, ಅಧ್ಯಕ್ಷರು | ಡಿ.ಬಸವರಾಜು(ಬಸಪ್ಪ) ಉಪಾಧ್ಯಕ್ಷರು | ಡಿ. ಅನಂತ ವೀರಪ್ಪ, ಪ್ರ. ವ್ಯವಸ್ಥಾಪಕರು

**ನಿರ್ದೇಶಕರುಗಳಾದ:** ನಂಸಿದ್ದಪ್ಪ, ತಾಯೂರು ವಿಠಲಮೂರ್ತಿ, ಎಂ.ಡಿ.ಪಾರ್ಥಸಾರಥಿ, ಹೆಚ್.ವಿ.ಭಾಸ್ಕರ್, ಎಂ.ಎಸ್. ಅರುಣ್ ಸಿದ್ದಪ್ಪ, ಕೆ.ಜಿ.ಶಂಕರನಾರಾಯಣಶಾಸ್ತ್ರಿ, ಹೆಚ್.ಎನ್. ಸರ್ವಮಂಗಳ, ಎಂ.ಎನ್. ನವೀನ್ ಕುಮಾರ್, ಹೆಚ್.ವಾಸು, ಬಿ. ನಾಗರಾಜ್ ವೃತ್ತಿಪರ ನಿರ್ದೇಶಕರು: ಎ. ಶ್ರೀನಿವಾಸಶೆಟ್ಟಿ, ವಿ.ಎಂ.ನಾಗೇಂದ್ರ ಪ್ರಸಾದ್

Silicon City Education Trust ®

SILICON CITY ACADEMY NOW @ MYSURU !!!

## SILICON CITY INTERNATIONAL SCHOOL

Mysuru

"Expanding Horizons: Our School's Journey Continues in **Heritage City!** Join us as we embark on an exciting adventure to bring quality education to a new community. Together, we'll shape bright futures in our new home.

## WE ARE HIRING!

**Join our team and seize the opportunity to excel in the following job positions:**



**PRINCIPAL**

M.Ed with experience of 5 Years in a leading CBSE School

**PARENT RELATION OFFICER**

Graduate with relevant experience with strong oral and written communication skills, and should possess exceptional IT competencies.

**ACCOUNTS OFFICER**

Relevant educational background and practical experience, adept in both verbal and written communication, and skilled in using Accounting software.

**Send your detailed resume within 15 days to**

siliconmysuru@gmail.com

99643 22554

**ಮೈಸೂರು ಮಿತ್ರ**

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು